ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

29 ಜುಲೈ 2015 ಪುಟ 20 ರೂ. 15/-


ಅನ್ನಭಾಗ್ಯ ಮತ್ತು ಹಸಿವಿನ ಅರ್ಥಶಾಸ್ತ್ರ



ವ್ಯಾಪಂ ಕಿಲ್ಲರ್ ಸ್ಕ್ಯಾಂಡಲ್

ವನಿತಾ ವಾಸು ಗಂಡ ಪರಾರಿ!





ತೀಸ್ತಾಗೆ ಮೋದಿ ಕಿರುಕುಳ


ದಾವಣಗೆರೆ ಶಾಮನೂರು ಮೊಡ್ಡಿಯಲ್ಲಿ ಕೋಡಿ ಹೆಗ್ಗಣ!

ಮಂಡ್ಯ ರೈತರ 'ಆತ್ಮ'ಗಳ ಮೇಲೆ ಅಂಬಿ ಹೈಡ್ರಾಮ

ಬಿಬಿಎಂಪಿ ಐಭಾಗ ಬಿಜೆಪಿ ತಿಪ್ಪರಲಾಗ

ಕೃಷಿ ಬಿಕ್ಕಟ್ಟು-3

ಬನ್ನಿ, ಅನ್ನದ ಋಣ ತೀರಿಸೋಣ



ವಾಸ್ತವದಲ್ಲಿ ಈ ಸಾರಿ ಕಬ್ಬಿನ ಬಿಕ್ಕಟ್ಟಿನ ಸಮಸ್ಯೆಯ ಮೂಲಗಳನ್ನು ಸಾರಾಂಶ ರೂಪದಲ್ಲಿ ಬರೆದು, ಪರಿಹಾರದ ದಾರಿಗಳನ್ನು ಚರ್ಚಿಸಬೇಕಿತ್ತು. ಆದರೆ, ಈ ಅಂಕಣಕಾರ ಕಬ್ಬು ಬೆಳೆಗಾರರ ಆಂದೋಲನದ ಭಾಗವಾಗಿರುವುದರಿಂದ ಅದನ್ನು ಬರೆಯಲು ಸಾಧ್ಯವಾಗುತ್ತಿಲ್ಲ. ಏಕೆಂದರೆ, 15 ದಿನಗಳ ಹಿಂದೆ ನಾವಿನ್ನೂ ಕಬ್ಬು ಮತ್ತು ಸಕ್ಕರೆ ಉದ್ದಿಮೆಯ ಬಿಕ್ಕಟ್ಟಿನ ಕುರಿತು ಚರ್ಚಿಸುವ ಸ್ಥಿತಿಯಲ್ಲಿದ್ದೆವು. ಈ 15 ದಿನಗಳಲ್ಲಿ ಅದು ಸರಣಿ ಆತ್ಮಹತ್ಯೆಯ ಬಿಕ್ಕಟ್ಟಾಗಿ ಪರಿಣಮಿಸಿದೆ. ಹಾಗಾಗಿ ಇದು ದೀರ್ಘಕಾಲೀನ ಸಮಸ್ಯೆಗಳ ಕುರಿತಾಗಿ ಚರ್ಚಿಸುವುದಕ್ಕಿಂತ ತಕ್ಷಣಕ್ಕೆ ನಡೆಯುತ್ತಿರುವ ಆತ್ಮಹತ್ಯೆಗಳನ್ನು ತಡೆಯುವ ಮತ್ತು ಹತಾಶೆಯ ವಿಸ್ತಾರಕ್ಕೆ ತಡೆಯೊಡ್ಡುವ ಸಮಯವಾಗಿದೆ. ಆದರೆ, ಅದೇ ಸಂದರ್ಭದಲ್ಲಿ ತಕ್ಷಣದ ಸಮಸ್ಯೆಗಳನ್ನು ಮಾತ್ರ ಬಗೆಹರಿಸಿದರೆ, ಮುಂದಿನ ದಿನಗಳಲ್ಲಿ ಮುಂದುವರೆಯಲಿರುವ ಆತ್ಮಹತ್ಯೆಗಳನ್ನು ತಡೆಗಟ್ಟಲು ಸಾಧ್ಯವಾಗುವುದಿಲ್ಲ.

ಈ ಅಂಕಣಕಾರನೂ ಸಹಭಾಗಿಯಾಗಿದ್ದ 'ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಕಬ್ಬು ಮತ್ತು ಸಕ್ಕರೆ ಬಿಕ್ಕಟ್ಟು ಕುರಿತ ವಿಚಾರಸಂಕಿರಣದ ಪ್ರಚಾರಾಂದೋಲನ'ದ ಒಂದು ತಂಡವು ಜುಲೈ 10ರಂದು ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ತಲುಪಿತ್ತು. ಅಲ್ಲಿ ಪ್ರಚಾರ ಮುಗಿಸಿದ ತಂಡವು ಜುಲೈ 11ಕ್ಕೆ ಕೆ.ಆರ್.ಪೇಟೆಯಲ್ಲಿ ಬಂದು ತಾಲ್ಲೂಕು ಕಚೇರಿ ಮುಂದಿನ ಆವರಣದಲ್ಲಿ ಸುಮಾರು 500ಕ್ಕೂ ಹೆಚ್ಚು ಜನ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡಿತ್ತು. ಆ ಉತ್ಸಾಹಕ್ಕೆ ಹಳ್ಳಿಗಳಲ್ಲಿ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ; ಕಾರ್ಯಕ್ರಮಕ್ಕೂ ಈ ಪಾಟಿ ಜನ ಬಂದಿದ್ದಾರೆ; ವೇದಿಕೆಯಿಂದ ಒಳ್ಳೆಯ ವಿಶ್ಲೇಷಣೆ ಆಗುತ್ತಿದೆ ಇತ್ಯಾದಿ ಕಾರಣಗಳಿದ್ದವು. ಕಾರ್ಯಕ್ರಮ ಮುಂದುವರೆಯುತ್ತಿದ್ದ ಹಾಗೆಯೇ ವರ್ತಮಾನ ಬಂದಿತ್ತು. ಕಿಕ್ಕೇರಿಗೆ ಕೆಲವೇ ಕಿ.ಮೀ. ದೂರದ ಹಳ್ಳಿಯೊಂದರಲ್ಲಿ ರೈತರೊಬ್ಬರು ವಿಷ ಸೇವಿಸಿ ಸತ್ತುಹೋಗಿದ್ದರು.

ಅದೇ ವೇದಿಕೆಯಲ್ಲಿ 25 ವರ್ಷಗಳ ಹಿಂದಿನ 'ಜಾಗತೀಕರಣ, ಡಂಕೆಲ್, ಗ್ಯಾಟ್, ಡಬ್ಲ್ಯುಟಿಒ' ವಿರುದ್ಧದ ಚಳವಳಿ ಸಾರಿದ್ದ ಎಚ್ಚರಿಕೆಗಳು ಎಲ್ಲರಿಗೂ ನೆನಪಾದವು. ಆ ಚಳವಳಿಯು ಸರಣಿ ಆತ್ಮಹತ್ಯೆಗಳು ಸಂಭವಿಸಲಿವೆ, ಅದನ್ನು ತಡೆಯಬೇಕು ಎಂದು ಹೇಳಿತ್ತು. ಇವತ್ತು ಪರಿಸ್ಥಿತಿ ಬದಲಾಗಿದೆ. ಇದಕ್ಕೂ ಒಂದು ವಾರದ ಹಿಂದೆ ಮಂಡ್ಯ ತಾಲೂಕಿನ ಹಳ್ಳಿಯೊಂದರಲ್ಲಿ ನಾಲ್ಕು ಜನ ಮಹಿಳೆಯರು ಕಬ್ಬಿನ ಗದ್ದೆಗೆ ಬೆಂಕಿ ಕೊಟ್ಟು ಅದರೊಳಗೆ ನುಗ್ಗಿದ್ದರು. ಅಂದರೆ ಸರಣಿ ಆತ್ಮಹತ್ಯೆಗಳಲ್ಲ, ಸಾಮೂಹಿಕ ಆತ್ಮಹತ್ಯೆಗಳ ಸ್ಥಿತಿ ಎದುರಾಗಿದೆ.

ಹೀಗಿರುವಾಗ ನಾವು ವಿಚಾರಸಂಕಿರಣ ಮಾಡಿ ಸುಮ್ಮನಿರುವಂತಿಲ್ಲ. ಕೆಲವು ಹಳ್ಳಿಗಳಿಗೆ ಹೋಗಿ, 'ಆತ್ಮಹತ್ಯೆ ಮಾಡಿಕೊಳ್ಳಬೇಡಿ, ಆತ್ಮಹತ್ಯೆ ಮಾಡಿಕೊಳ್ಳಬೇಡಿ' ಎಂದು ಹೇಳುವುದಾಗಲೀ, 'ನೀವು ಅಷ್ಟೊಂದು ಕಬ್ಬು ಯಾಕೆ ಬೆಳೆದಿರಿ? ಬೇರೆ ಬೆಳೆಗಳನ್ನು ಯಾಕೆ ಬೆಳೆಯಲಿಲ್ಲ? ನೀವು ಮಗಳ ಮದುವೆಗೆ ಅಷ್ಟೊಂದು ಹಣ ಯಾಕೆ ಖರ್ಚು ಮಾಡಿದಿರಿ?' ಎಂದು ಕೇಳುವುದಾಗಲೀ ಅಸಂಗತ ಹಾಗೂ ಅಮಾನವೀಯವಾಗಿರುತ್ತದೆ. ರೈತರಲ್ಲಿ ಧೈರ್ಯ ಮೂಡಿಸುವ ಪ್ರಮಾಣಕ್ಕೆ ಏನಾದರೂ ಮಾಡಬೇಕು. ಈ ಸಮಾಜ ಅನ್ನದಾತರ ಜೊತೆ ನಿಲ್ಲುತ್ತದೆ ಎಂಬ ಭರವಸೆ




ಮೂಡುವಂತಾಗಬೇಕು. ಸರ್ಕಾರದ ಕತ್ತಿನ ಪಟ್ಟಿ ಹಿಡಿದು ರೈತರ ಸಹಾಯಕ್ಕೆ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಿ ಎಂದು ದಬಾಯಿಸಬೇಕು. ರೈತರು ಬೀದಿಗಿಳಿದು ಯಾವ ನೀತಿಗಳು ತಮ್ಮ ಪಾಲಿಗೆ ಉರುಳಾಗಿವೆಯೋ ಅವುಗಳ ವಿರುದ್ಧ ಧಿಕ್ಕಾರ ಕೂಗಬೇಕು. ಇದು ಈ ಸಂದರ್ಭದಲ್ಲಿ ನಾವು ಮಾಡಬಹುದಾದ ಕನಿಷ್ಠ ಕಾರ್ಯಕ್ರಮ.

ಹಾಗಾಗಿ ಕೆ.ಆರ್.ಪೇಟೆಯಲ್ಲಿ ಹಳ್ಳಿಗಳಿಗೆ ಹೋಗಿ ಬಂದಿದ್ದ ತಂಡ ಮತ್ತೆ ಇಡೀ ಜಿಲ್ಲೆ ತಿರುಗಲು ಸಜ್ಜಾಗಿದೆ. ಕರ್ನಾಟಕ ಜನಶಕ್ತಿ ಸಂಘಟನೆಯು ಮಂಡ್ಯ ಜಿಲ್ಲೆಯ 750 ಹಳ್ಳಿಗಳಲ್ಲಿ 'ರೈತ ಸಂಘರ್ಷ ಜಾಥಾ' ನಡೆಸಲು ತೀರ್ಮಾನಿಸಿದೆ. ಜುಲೈ 20ಕ್ಕೆ ಆಸಕ್ತಿ ಇರುವ ಎಲ್ಲರೂ ಮಂಡ್ಯದಲ್ಲಿ ಸೇರಿಕೊಳ್ಳಬೇಕು. ಹಳ್ಳಿಗೆ ಹೋಗಿ ಏನು ಮಾಡಬೇಕು ಎಂಬುದನ್ನು ಚರ್ಚಿಸುವ ಶಿಬಿರ ಆ ದಿನ ನಡೆಯುತ್ತದೆ. ಜುಲೈ 21ಕ್ಕೆ ಎಲ್ಲರೂ ಗೆಜ್ಜಲಗೆರೆಗೆ ಹೋಗುತ್ತಾರೆ. 80ರ ದಶಕದಲ್ಲಿ ಸರ್ಕಾರ ರೈತರ ಮೇಲೆ ಗುಂಡು ಹಾರಿಸಿದ ಜಾಗಗಳಲ್ಲಿ ಗೆಜ್ಜಲಗೆರೆಯೂ ಒಂದು. ಜುಲೈ 21, 1980ರಲ್ಲಿ ನರಗುಂದದಲ್ಲಿ ರೈತರ ಮೇಲೆ ಗೋಲೀಬಾರ್ ಆಗಿದ್ದರಿಂದ ಆ ದಿನವನ್ನು 'ರೈತ ಹುತಾತ್ಮ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಅಂತಹ ಒಬ್ಬ ಹುತಾತ್ಮರ ಪತ್ನಿ ಈ ಜಾಥಾವನ್ನು ಉದ್ಘಾಟಿಸುತ್ತಾರೆ. ಅಲ್ಲಿಂದ ಮುಂದೆ ಆಗಸ್ಟ್ 2ರವರೆಗೆ 750 ಹಳ್ಳಿಗಳಲ್ಲಿ ಪ್ರಚಾರಾಂದೋಲನ ನಡೆಯುತ್ತದೆ. ಆಗಸ್ಟ್ 3ರಂದು ಮಂಡ್ಯ ಜಿಲ್ಲಾಧಿಕಾರಿ ಕಚೇರಿಗೆ ದಿಗ್ಬಂಧನ ಹಾಕಲಾಗುತ್ತದೆ.

ಕಾರ್ಯಕ್ರಮದ ಕುರಿತು ಮತ್ತಷ್ಟು ಮಾತನಾಡುವ ಮುನ್ನ ನಿಮ್ಮ ಮನಸ್ಸಿನಲ್ಲಿ ಬರುತ್ತಿರಬಹುದಾದ ಕೆಲವು ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುವ ಅಗತ್ಯವಿದೆ.

ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರು ಕುಡಿದು, ಇಸ್ಪೀಟು ಆಡಿ ಹಣ ಕಳೆದುಕೊಂಡವರಾ?

ಹಳ್ಳಿಗಳಲ್ಲಿ ಕುಡಿದು, ಇಸ್ಪೀಟು ಆಡಿ, ಮೋಜು ಮಾಡಿ ಸಾಲ ಮಾಡಿಕೊಂಡವರು ಇದ್ದಾರೆ. ಅಂಥವರಲ್ಲಿ ರೈತರೂ ಇದ್ದಾರೆ. ಅದರಲ್ಲೇನೂ ಸಂದೇಹವಿಲ್ಲ. ಆದರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರು ಅವರಲ್ಲ. ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗುವ 'ರೈತರ ಆತ್ಮಹತ್ಯೆ'ಗಳಲ್ಲಿ ಶೇ.10 ಸಾಲಕ್ಕೆ ಸಂಬಂಧಿಸಿರುವವು ಅಥವಾ 'ನೈಜ' ರೈತರ ಆತ್ಮಹತ್ಯೆ ಅಲ್ಲದಿರಬಹುದು. ಇತರೆಲ್ಲಾ ಆತ್ಮಹತ್ಯೆಗಳಿಗೆ ಕಾರಣವಾಗುವ ಕಾರಣಗಳೇ ಅವರಿಗೂ ಇರಬಹುದು. ಆದರೆ ಉಳಿದ



ಶೇ.90ರಷ್ಟು ಕೃಷಿಯನ್ನು ನೆಚ್ಚಿಕೊಂಡ ರೈತರದ್ದೇ ಆಗಿವೆ. ಅದರಲ್ಲೂ ಕೃಷಿಯನ್ನು ವಿಪರೀತ ಹಚ್ಚಿಕೊಂಡ, ಅದರಲ್ಲಿಯೇ ಬದುಕನ್ನು ಹಸನು ಮಾಡಿಕೊಳ್ಳಬೇಕೆಂದು ಬಯಸಿದ ರೈತರು. ಇನ್ನು ಕುಡಿದು, ಇಸ್ಪೀಟಿನಲ್ಲಿ ಹಣ ಕಳೆದುಕೊಳ್ಳುವವರು ಸಾಯುವುದು ಕಡಿಮೆ. ಅವರಿಗೆ ಒಂದು ಭಂಡತನ ಸಿದ್ಧಿಸಿರುತ್ತದೆ.

ಆತ್ಮಹತ್ಯೆಗೆ ಕೇವಲ ಕೃಷಿಸಾಲ ಕಾರಣವೇ?

ಅಲ್ಲ, ಆದರೆ ಕೃಷಿ ಸಾಲ ಪ್ರಧಾನವಾದ ಕಾರಣವಾಗಿದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. ಆ ಕೃಷಿ ಕುಟುಂಬದ ಒಬ್ಬ ಸದಸ್ಯರ ಅನಾರೋಗ್ಯದ ಕಾರಣಕ್ಕೆ 1 ಲಕ್ಷ ರೂ. ಸಾಲವಾಗಿದ್ದಾಗ, ಅದನ್ನು ಸರ್ಕಾರವು ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಉಚಿತವಾಗಿ ನೀಡದಿರುವುದರಿಂದ ಹೀಗಾಗಿದೆ ಎಂತಲೂ ವಿಶ್ಲೇಷಿಸಬಹುದು. ಅಷ್ಟೇ ಅಲ್ಲದೇ, ಕೃಷಿಯು ಸದ್ಯದ ಆರ್ಥಿಕತೆಯಲ್ಲಿ ಘನತೆಯಿಂದ ಮತ್ತು ಗುಣಮಟ್ಟದ ಜೀವನ ನಡೆಸಲು ಬೇಕಾದಷ್ಟು ಸಾಧ್ಯತೆಯನ್ನು ಹೊಂದಿಲ್ಲ ಎಂತಲೂ ಹೇಳಬಹುದು. ಅಂತಿಮವಾಗಿ ಅದು ಕೃಷಿಯ ಮೇಲಿನ ಅವಲಂಬನೆ ಹಾಗೂ ಅದರಿಂದ ಉಂಟಾದ ಸಾಲದ ಜೊತೆಗೇ ಸಂಬಂಧ ಹೊಂದಿರುತ್ತದೆ. ಅದ್ದೂರಿ ಮದುವೆ, ಅದ್ದೂರಿ ಹಬ್ಬ/ತಿಥಿಗಳೂ ಕಾರಣವಲ್ಲವೇ? ಹೌದು, ಕಾರಣ. ಅದ್ದೂರಿ ಮದುವೆ, ಹಬ್ಬ, ತಿಥಿ ಮಾಡುತ್ತಿರುವ ಇತರ ಜನವಿಭಾಗಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲವಲ್ಲ? ಇಡೀ ಸಮಾಜ ಒಂದು ರೀತಿಯ ಸಂಸ್ಕೃತಿ, ಹುಸಿ ಪ್ರತಿಷ್ಠೆಯನ್ನು ಆಚರಿಸುತ್ತಿರುವಾಗ ರೈತರಿಗೆ/ಕೂಲಿ ಕಾರ್ಮಿಕರಿಗೆ ಮಾತ್ರ ಬಿಟ್ಟಿ ಉಪದೇಶ ಏಕೆ ನೀಡಬೇಕು?

ರೈತರು ಬದುಕಬೇಕೆಂಬ ಕಾರಣಕ್ಕೆ ಹೇಳಬೇಕು, ಇಡೀ ಸಮಾಜವನ್ನು ಬದಲಿಸುತ್ತಾ ರೈತರೂ ಬದಲಾಗಬೇಕು. ಇದು ಒಂದು ಆಂದೋಲನದ ಮೂಲಕ ಮಾತ್ರ ಸಾಧ್ಯ. ಬರಿ ಬರಿ ಮನಃಪರಿವರ್ತನೆಯಿಂದ ದೊಡ್ಡ ಮಟ್ಟದ ಬದಲಾವಣೆ ಸಾಧ್ಯವಿಲ್ಲ.

ಕಬ್ಬು ಬೆಳೆ ಮಾತ್ರ ಎಲ್ಲಕ್ಕೂ ಕಾರಣವೇ? ಈ ರೈತರು ಕಬ್ಬನ್ನು ಮಾತ್ರ ಏಕೆ ಬೆಳೆಯಬೇಕು?

ಕಬ್ಬು ಬೆಳೆ ಮಾತ್ರ ಎಲ್ಲಕ್ಕೂ ಕಾರಣವಲ್ಲ. ಈ ವರ್ಷ ಬಾಳೆ ಬೆಳೆದವರು, ತರಕಾರಿ ಬೆಳೆದವರೂ ... ಮಾಡಿಕೊಂಡಿದ್ದಾರೆ. ವಾಸ್ತವವೇನೆಂದರೆ, ಮುಂದಿ... ಭತ್ತ ಬೆಳೆವವರು ಸಾಯಬಹುದು. ಏಕೆಂದರೆ, ಈ... ಕಬ್ಬನ್ನು ಕಿತ್ತು ಹಾಕುವವರಲ್ಲಿ ಹೆಚ್ಚಿನವರು ... ತಿರುಗುತ್ತಾರೆ. ಓಹೋ, ಹಾಗಾದರೆ ಭ... ಬೆಳೆಯಬಾರದು. ಇನ್ನೇನು ಬೆಳೆಯಬೇಕು? ... ರಾಗಿ, ನವಣೆ, ಸಜ್ಜೆ, ಸೋಯಾಬೀನ್, ಚೆರ್ರಿ, ... ಸ್ಟ್ರಾಬೆರಿ, ಸೋನಾ ಮಸೂರಿ ಅಕ್ಕಿ, ರಬ್ಬರ್, ... ಅದು ಇದು....... ಸರಿ, ಸರಿ. ಆದರೆ, ಅವುಗಳನ್ನು ... ಎಷ್ಟೆಷ್ಟು ಬೆಳೆಯಬೇಕು? ನಾವು ಕೆಲವರೇ ... ಮಾರುಕಟ್ಟೆ ಎಲ್ಲಿದೆ? ಅದೇ ವರ್ಷ ಇನ್ನಾವುದೋ ... ಅದೇ ಬೆಳೆಯನ್ನು ಭಾರೀ ಪ್ರಮಾಣದಲ್ಲಿ ಬೆಳೆದು ... ದರದಲ್ಲಿ ಇಲ್ಲಿಗೆ ತಂದು ಸುರಿಯುವುದಿಲ್ಲ ... ಖಾತರಿಯಿದೆಯಾ? ಇದಕ್ಕೆಲ್ಲಾ ಗ್ಯಾರಂಟಿ ಕೊಡ... ಯಾರು?

ಯಾರೂ ಇಲ್ಲ, ಸರ್ಕಾರವೂ ಇಲ್ಲ. ಮೊದಲ... ಬೇಕು. ಜೊತೆಗೆ ಇಂತಹ ಯಾವುದೇ ತೀರ್ಮಾ... ವ್ಯಕ್ತಿಗತವಾಗಿ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಹೆಚ್ಚಿನ... ಇಲ್ಲ. ನೀವದನ್ನು 'ಮಂದೆ ಸ್ವಭಾವ' ಎನ್ನಿ, ದಡ್ಡ... ಸೋಮಾರಿಗಳು ಎನ್ನಿ, ಧೈರ್ಯವಿಲ್ಲದವರು ಎನ್ನಿ... ಇಲ್ಲ, ಅಷ್ಟೇ. ರೈತರು ಬದಲಿಸಿಕೊಳ್ಳಬೇಕಾದ... ಹಲವು ರೀತಿಯ ಸಂಗತಿಗಳಿವೆ. ಅವರ ಬ... ಸಂಬಂಧಿಸಿದಂತೆ ಮತ್ತು ಬೆಳೆಗೆ ಸಂಬಂಧಿಸಿದಂತೆ ... ಬೆಳೆಯುವ ರೀತಿಗೆ ಸಂಬಂಧಿಸಿದಂತೆ. ಆದರೆ, ಮಾರುಕಟ್ಟೆಯನ್ನು ಭಾರೀ ದುಷ್ಟ ಬಂಡವಾಳಿಗರಿಗೆ... ಅವರ ದಲ್ಲಾಳಿಗಳು ದೇಶವಾಳಲು ಬಿಟ್ಟು ಬ... ಕುಟುಂಬಕ್ಕೆ 'come on, fight' ಎಂದರೆ ಸಾಧ್ಯ... ಇದೂ ಒಂದು ಆಂದೋಲನದ ರೂಪದಲ್ಲೇ ಆಗ...

ಸಾವಯವ ಕೃಷಿ, ಸಹಜ ಕೃಷಿ...

ಮೇಲೆ ಹೇಳಲಾದ ಮಾತುಗಳೇ ... ಅನ್ವಯಿಸುತ್ತವೆ.

ಯಾಕಾಗಿ ಡಬ್ಲ್ಯುಟಿಒ ಮತ್ತು ಜಾಗತೀಕರಣ... ಹೆಚ್ಚಿನವರು ಚರ್ಚೆ ಮಾಡುತ್ತಿಲ್ಲ?

ಉತ್ಪಾದನಾ ವೆಚ್ಚದ ಸಬ್ಸಿಡಿಯನ್ನು ಕಿತ್ತು... ಜಾಗತೀಕರಣ, ಬೆಳೆಗಿದ್ದ ಬೆಲೆ ಖಾತರಿಯನ್ನು ಕಿತ್ತು... ಜಾಗತೀಕರಣ ಇವೆಲ್ಲಕ್ಕೂ ನೇರವಾಗಿ ಮತ್ತು ಪರೋ... ಕಾರಣವಲ್ಲವೇ? ಇದನ್ನು ಚರ್ಚೆಯೇ ಮಾಡದೆ... 'ಪರಿಹಾರ'ಗಳನ್ನು ಮಾತ್ರ ಮುಂದಿಡಲಾಗುತ್ತಿದೆ... ಮಾಧ್ಯಮಗಳು, ಸರ್ಕಾರ, ಅಧಿಕಾರಿಗಳು ... ಮಾಡುತ್ತಿರುವುದು ಇದನ್ನೇ. ಲಕ್ಷಾಂತರ ... ಆತ್ಮಹತ್ಯೆಗಳಿಗೆ ಕಾರಣವಾದ ಒಂದು ಒಪ್ಪ... ತಿರಸ್ಕರಿಸಲಾಗದ ದೇಶ ಸಾರ್ವಭೌಮ ದೇಶವಲ್ಲ... ಮೂಲಕವೇ 'ಅಭಿವೃದ್ಧಿಯೋ ಅಭಿವೃದ್ಧಿ'... ಸಾಧಿಸುತ್ತೇವೆಂದು ಹೇಳುತ್ತಿರುವವರು ಡಕಾಯಿತರ... ಆ ಚರ್ಚೆಯನ್ನು ದೇಶದಲ್ಲಿ ಮುಖ್ಯವಾಹಿನಿ... ಮಾಡುವ ಕರ್ತವ್ಯ ನಮ್ಮೆಲ್ಲರ ಮುಂದಿದೆ.

ಅನ್ನದ ಋಣ ಅಭಿಯಾನ

ಇವೆಲ್ಲಾ ಮಾತುಗಳನ್ನೂ ಆಡುತ್ತಾ, ... ಕಾರಣಗಳನ್ನೂ ಹುಡುಕುತ್ತಾ, ಅಸಲೀ ಪರಿಹಾ... ರೈತ ಸಮುದಾಯವನ್ನು ಕೊಂಡೊಯ್ಯುವುದರಲ್ಲಿ ನ... ಒಂದು ಸಣ್ಣ ಪಾಲಿರಬೇಕಲ್ಲವೇ? ನಾವೂ ಅನ್ನ ತಿ... ಅಥವಾ ಮುದ್ದೆಯನ್ನೋ, ರೊಟ್ಟಿಯನ್ನೋ ತಿಂ... ಈ ಕೆಲಸ ರೈತ ಸಂಘಟನೆಯದ್ದೆಂದೋ, ಅದು ಸ... ಕೆಲಸ ಮಾಡುತ್ತಿಲ್ಲವೆಂದೋ ಹೇಳಿಕೊಳ್ಳುತ್ತಾ ಕೂ... ಸುಲಭ. ಹಾಗಾಗಿ 'ರೈತ ಸಂಘರ್ಷ ಜಾಥಾ'ಕ್ಕೆ ಪೂ... 'ಅನ್ನದ ಋಣ ಅಭಿಯಾನ'ವನ್ನು ಆರಂಭಿಸಲಾಗಿ... ನಮ್ಮೆಲ್ಲರ ಕರ್ತವ್ಯ.

'ಅನ್ನದ ಋಣ' ಅಭಿಯಾನ

ನಾಡಿನ ಸಾಹಿತಿ - ಕಲಾವಿದರು, ಜನಪರ ಸಂಘಟನೆಗಳ ಪ್ರತಿನಿಧಿಗಳು, ವಿವಿಧ ವೃತ್ತಿನಿರತರು ಭಾಗವಹಿಸಲು ಮನವಿ.

ಸರಣಿ ಆತ್ಮಹತ್ಯೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಸರ್ಕಾರಗಳು 'ನೈಸರ್ಗಿಕ ವಿಕೋಪ' ಬಂದಾಗ ಯಾವ ರೀತಿ ಪ್ರತಿಕ್ರಿಯಿಸಬೇಕೋ ಆ ರೀತಿಯಲ್ಲಿ ಕಾರ್ಯಪ್ರವೃತ್ತರಾಗುವ ಅಗತ್ಯವಿತ್ತು. ಅದನ್ನೂ ಮಾಡುತ್ತಿಲ್ಲ, ಕಾಟಾಚಾರದ ಮಾತುಗಳು ಮತ್ತು ಕಾಟಾಚಾರದ ಕ್ರಮಗಳು ಮಾತ್ರ ನಡೆಯುತ್ತಿವೆ. ಈ ಪ್ರಮಾಣದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಲಜ್ಜೆಗೆಟ್ಟ ನಡವಳಿಕೆ ತೋರುತ್ತಿದ್ದರೆ, ವಿರೋಧ ಪಕ್ಷಗಳು ಬೆಂದ ಮನೆಯಲ್ಲಿ ಗಳ ಹಿರಿಯುವುದನ್ನು ಬಿಟ್ಟು ಪರಿಣಾಮಕಾರಿ ಕ್ರಮಗಳಿಗೇನೂ ಆಗ್ರಹಿಸುತ್ತಿಲ್ಲ. ಏಕೆಂದರೆ, ಅವರುಗಳು ಅಧಿಕಾರದಲ್ಲಿದ್ದಾಗಲೂ ಮಾಡಿದ್ದು ಅದೇ ಆಗಿದೆ.

ಹಾಗಾದರೆ ಸಮಾಜದ ಇನ್ನಿತರ ವಿಭಾಗಗಳಿಗೆ ಇದರಲ್ಲಿ ಯಾವ ಜವಾಬ್ದಾರಿಯೂ ಇಲ್ಲವೇ? ಅನ್ನದ ಋಣ ಇದ್ದೇ ಇದೆ. ಕೃಷಿ ಬಿಕ್ಕಟ್ಟಿನ ಹೊರೆಯನ್ನು ಸಂಪೂರ್ಣ ಹೊತ್ತುಕೊಂಡಿರುವ ರೈತರ ಆರ್ಥಿಕ ಸಂಕಷ್ಟಗಳನ್ನು ಬಗೆಹರಿಸಲು ಸಾಧ್ಯವಿರದಿದ್ದರೂ, ಅಸಲೀ ಕಾರಣಗಳನ್ನು ಪತ್ತೆ ಹಚ್ಚಲು ಜೊತೆಯಾಗಬೇಕಿದೆ; ಅದಕ್ಕೆ ಪರಿಹಾರ ಹುಡುಕಲು ಕೈಜೋಡಿಸಬೇಕಿದೆ; ಪರಿಹಾರವನ್ನು ಆಗ್ರಹಿಸಲು ಹೆಗಲಿಗೆ ಹೆಗಲು ಕೊಟ್ಟು ಹೋರಾಟಕ್ಕೆ ನಿಲ್ಲಬೇಕಿದೆ.

'ರೈತ ಸಂಘರ್ಷ ಜಾಥಾ'ವು ಜುಲೈ 21ರಿಂದ ಆರಂಭವಾಗಿ ಮಂಡ್ಯ ಜಿಲ್ಲೆಯ 750 ಹಳ್ಳಿಗಳಲ್ಲಿ ನಡೆಯುತ್ತದೆ. ನಾಡಿನ ಎಲ್ಲ ಪ್ರಜ್ಞಾವಂತರು, ಸಾಹಿತಿ-ಕಲಾವಿದರು, ಸಂಘಟನೆಗಳ ಪ್ರತಿನಿಧಿಗಳು, ವೈದ್ಯರು, ವಕೀಲರು, ಶಿಕ್ಷಕರು ಹಾಗೂ ಇನ್ನಿತರೆ ವೃತ್ತಿನಿರತರು ಈ ಜಾಥಾದಲ್ಲಿ ಪಾಲ್ಗೊಳ್ಳಲು ನಾವು ಮನವಿ ಮಾಡುತ್ತೇವೆ. ಅಂತಿಮವಾಗಿ ಆಗಸ್ಟ್ 3ರಂದು ಜಿಲ್ಲಾಧಿಕಾರಿ ಕಚೇರಿ ದಿಗ್ಬಂಧನ ಕಾರ್ಯಕ್ರಮ ಇರುತ್ತದೆ.

ಇದು ಒಂದು ಸಂಘಟನೆಯ ಕಾರ್ಯಕ್ರಮವಲ್ಲ, ಯಾವುದೇ ರಾಜಕೀಯ ಪಕ್ಷದ, ನಿರ್ದಿಷ್ಟ ಜಾತಿಗೆ ಸೀಮಿತವಾದ ಚಳವಳಿಯಲ್ಲ. ಮಾಧ್ಯಮದವರೂ ಸೇರಿದಂತೆ ನಾಡಿನ ಎಲ್ಲಾ ಮಾನವೀಯ ಜನರು ಜೊತೆಗೂಡಬೇಕೆಂದು ಈ ಮೂಲಕ ಮನವಿ ಮಾಡುತ್ತೇವೆ. ಇದಲ್ಲದೇ ನೀವಿರುವೆಡೆಯಿಂದಲೇ ಮಾಡಬಹುದಾದ ಕೆಲಸಗಳೂ ಇವೆ. ಬನ್ನಿ, ಜೊತೆಗೂಡಿ.

ಜಾಥಾದಲ್ಲಿ ಮತ್ತು ಆಗಸ್ಟ್ 3ರಂದು ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಿ: ರವಿಕುಮಾರ್ - 7353770205, ಚೈತ್ರ - 8884512891.

facebook: join annada runa abhiyana

ತೀಸ್ತಾಗೆ ಮೋದಿ ಕಿರುಕುಳ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಮೂರು ಕೊಲೆಗಳ ಆರೋಪವನ್ನು ಹೊತ್ತಿರುವ ಬಿಜೆಪಿಯ ರಾಷ್ಟ್ರಾಧ್ಯಕ್ಷ ಅಮಿತ್ ಶಾನನ್ನು ಆರೋಪ ಮುಕ್ತಗೊಳಿಸಿದ ಆದೇಶವನ್ನು ಇಲ್ಲಿಯತನಕ ಸಿಬಿಐ ಪ್ರಶ್ನಿಸಿಲ್ಲ. ಕೊಲೆ ಆರೋಪದ ಮೇಲೆ ಶಿಕ್ಷೆಗೆ ಗುರಿಯಾಗಿರುವ ಮಾಯಾ ಕೊಡ್ನಾನಿ ಮತ್ತು ಬಾಬು ಭಜರಂಗಿ ಜಾಮೀನು ಪಡೆದು ಹೊರಬಂದಿರುವುದನ್ನೂ ಸರ್ಕಾರ ವಿರೋಧಿಸಿಲ್ಲ. ಅಜ್ಮೇರ್‌ನ ದರ್ಗಾದಲ್ಲಿ ಬಾಂಬ್ ಸ್ಫೋಟಿಸಿ ಹಲವಾರು ಜನರ ಸಾವಿಗೆ ಕಾರಣರಾಗಿದ್ದ ಆರೆಸ್ಸೆಸ್ ಹಿಂಬಾಲಕರ ವಿರುದ್ಧದ ಸಾಕ್ಷಿಗಳೆಲ್ಲಾ ಉಲ್ಟಾ ಹೊಡೆಯುವಂತೆ ಸರ್ಕಾರವೇ ನೋಡಿಕೊಳ್ಳುತ್ತಿದೆ. ಇದೇ ಹೊತ್ತಿನಲ್ಲಿ ಮಾಲೆಗಾಂವ್ ನಗರದಲ್ಲೂ ಬಾಂಬ್ ಸ್ಫೋಟಿಸಿ ರಕ್ತದ ಹೊಳೆಯನ್ನು ಹರಿಸಿದ್ದ ಚೆಡ್ಡಿಪಡೆಯ ವಿರುದ್ಧದ ದೂರುಗಳನ್ನು ಸಡಿಲಗೊಳಿಸಿ ಎಂದು ನ್ಯಾಷನಲ್ ಇನ್ವೆಸ್ಟಿಗೇಶನ್ ಏಜನ್ಸಿಯೇ ಒತ್ತಾಯ ಮಾಡುತ್ತಿದೆ ಎಂದು ರೋಹಿಣಿ ಸಾಲಿಯಾನ್ ಎಂಬ ಸ್ಪೆಷಲ್ ಪ್ರಾಸಿಕ್ಯೂಟರ್ ಅವಲತ್ತುಕೊಂಡಿದ್ದಾರೆ.

ಹೀಗೆ ದೇಶದಾದ್ಯಂತ ಕೊಲೆಗಡುಕರನ್ನು ರಕ್ಷಿಸುತ್ತಿರುವ ಮೋದಿಯ ಚೆಡ್ಡಿ ಸರ್ಕಾರ ಇದೇ ಹೊತ್ತಿನಲ್ಲಿ ಯಾರಿಗೂ ನೋವು ಮಾಡದ, ಯಾವ ತಪ್ಪನ್ನೂ ಎಸಗದ ತೀಸ್ತಾ ಸೆತಲ್ವಾಡ್ ಮೇಲೆ ಮುರಕೊಂಡು ಬಿದ್ದಿದೆ. ಖೊಟ್ಟಿ ದೂರುಗಳು, ಖೊಟ್ಟಿ ಕೇಸುಗಳು, ಖೊಟ್ಟಿ ವಿಚಾರಣೆಗಳನ್ನು ತೀಸ್ತಾ ವಿರುದ್ಧ ದಾಖಲಿಸಿಕೊಂಡು ಆಕೆಯ ಕೈಕಾಲುಗಳನ್ನು ಕಟ್ಟಿಹಾಕುವ ಪ್ರಯತ್ನ ಮಾಡಲಾಗುತ್ತಿದೆ. ಯಾಕೆಂದರೆ ತೀಸ್ತಾ ಪ್ರತಿ ಕ್ಷಣವೂ ಮೋದಿ ಎಂತಹ ಪಾತಕ ವ್ಯಕ್ತಿ ಎಂಬುದನ್ನು ದೇಶಕ್ಕೆ ಸಾರಿ ಸಾರಿ ಹೇಳುತ್ತಿರುತ್ತಾರೆ.

ಈ ತೀಸ್ತಾ ಸಾಮಾನ್ಯ ಮಹಿಳೆಯಲ್ಲ. ಬಹಳಷ್ಟು ಜನಕ್ಕೆ ಗೊತ್ತಿಲ್ಲದಿರುವುದು ಈಕೆಯ ಕುಟುಂಬದ ಹಿನ್ನೆಲೆ. ಈಕೆಯ ಮುತ್ತಜ್ಜ ಚಿಮನ್‌ಲಾಲ್ ಸೆತೆಲ್ವಾಡ್ ಅವರು ಖ್ಯಾತಿ ನ್ಯಾಯವಾದಿಯಾಗಿದ್ದರು. ಅಷ್ಟೇ ಅಲ್ಲ, ಜಲಿಯನ್‌ವಾಲಾಭಾಗ್‌ನಲ್ಲಿ ನೂರಾರು ಜನರ ಸಾವಿಗೆ ಕಾರಣನಾಗಿದ್ದ ಜನರಲ್ ಡೈಯರ್ ವಿರುದ್ಧ ನ್ಯಾಯಾಲಯದಲ್ಲಿ ವಾದ ಮಂಡಿಸಿದ ಏಕೈಕ ಭಾರತೀಯ ವಕೀಲರೂ ಇವರೇ ಆಗಿದ್ದರು. ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದ್ದ ಚಿಮನ್‌ಲಾಲ್ ಅವರು ಬಿ.ಆರ್.ಅಂಬೇಡ್ಕರ್ ಜೊತೆಗೂಡಿ 'ಬಹಿಷ್ಕೃತರ ಹಿತರಕ್ಷಣಾ ಸಮಿತಿ'ಯನ್ನು ಸ್ಥಾಪಿಸಿದರು. ಹಿಂದೂ ಮತ್ತು ಮುಸಲ್ಮಾನರ ಸೌಹಾರ್ದದಲ್ಲಿ ಅಪಾರ ನಂಬಿಕೆ ಇಟ್ಟಿದ್ದ ಚಿಮನ್‌ಲಾಲರು ಮಹಾತ್ಮ ಗಾಂಧಿಯವರ ಬೆಂಬಲಿಗರಾಗಿದ್ದರೂ ದೇಶದ ವಿಭಜನೆಯನ್ನು ವಿರೋಧಿಸಿದ್ದರು. ಆನಂತರ ವಿಭಜನೆಯ ಸಮಯದಲ್ಲಾದ ಕೋಮು ಗಲಭೆಗಳನ್ನು ಕಂಡು ನೋವುಂಡಿದ್ದರು.


ಚಿಮನ್‌ಲಾಲ್ ಅವರ ಪುತ್ರ ಮೋತಿಲಾಲ್ ಕೂಡ ಅಸಮಾನ್ಯರು. ಗಾಂಧಿ ಅವರಿಂದ 'ಅತ್ಯುತ್ತಮ ವಕೀಲ' ಎಂದು ಕರೆಸಿಕೊಂಡಿದ್ದ ಮೋತಿಲಾಲ್ ಸ್ವತಂತ್ರ ಭಾರತದ ಪ್ರಪ್ರಥಮ ಅಟಾರ್ನಿ ಜನರಲ್ ಆಗಿದ್ದರು. ಭಾರತ ಮತ್ತು ಪಾಕಿಸ್ತಾನದ ಗಡಿಯನ್ನು ನಿಗದಿಪಡಿಸಿದ ರ್‍ಯಾಡ್‌ಕ್ಲಿಫ್ ಸಮಿತಿಯ ಸದಸ್ಯರಾಗಿದ್ದ ಮೋತಿಲಾಲ್ ಭಾರತದ ಪ್ರಥಮ ಲಾ ಕಮಿಷನ್‌ನ ಮುಖ್ಯಸ್ಥರಾಗಿದ್ದರು; ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಮೊದಲ ಚೇರ್‌ಮನ್ ಆಗಿದ್ದರು. ಇವರು ಪದ್ಮಭೂಷಣ ಪ್ರಶಸ್ತಿಯನ್ನೂ ಪಡೆದಿದ್ದರು.

ಮೋತಿಲಾಲ್ ಅವರ ಪುತ್ರ ಅತುಲ್ ಸೆತೆಲ್ವಾಡ್. ಇವರೂ ಮುಂಬೈಯಲ್ಲಿ ಪ್ರಖ್ಯಾತ ವಕೀಲರಾಗಿದ್ದವರು. ಈ ಅತುಲ್ ಅವರ ಪುತ್ರಿಯೇ ತೀಸ್ತಾ! ಸುಮಾರು ನೂರು ವರ್ಷಗಳ ಹಿಂದೆ ಮುತ್ತಜ್ಜ ಚಿಮನ್‌ಲಾಲ್ ಕೊಲೆಗಡುಕ ಡೈಯರ್ ವಿರುದ್ಧ ಸಮರ ಸಾರಿದಂತೆ ಇವತ್ತು ತೀಸ್ತಾ ಕೊಲೆಗಡುಕ ಮೋದಿ ವಿರುದ್ಧ ಸಮರ ಸಾರುತ್ತಿದ್ದಾರೆ. ಅದಕ್ಕೇ ಅವರ ಮನೆ ಮತ್ತು ಕಚೇರಿಯ ಮೇಲೆ ನಿನ್ನೆ (ಮಂಗಳವಾರ) ಸಿಬಿಐ ದಾಳಿ ನಡೆದಿದೆ.

ಇನ್ನು ತೀಸ್ತಾರ ಜೀವನಸಂಗಾತಿಯಾಗಿರುವ ಜಾವೆದ್ ಆನಂದ್ ಕೂಡ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಇವರು ಇಂಜಿನಿಯರಿಂಗ್ ಪದವೀಧರರಾಗಿದ್ದರೂ ಮೊದಲು ಪತ್ರಿಕೋದ್ಯಮವನ್ನು ಆಮೇಲೆ ಕೋಮು ಸೌಹಾರ್ದವನ್ನು ಬಯಸುವ ಕಮ್ಯುನಲಿಸಂ ಕಾಂಬ್ಯಾಟ್ ಪತ್ರಿಕೆಯ ಸಹಸಂಪಾದಕರಾದರು. ಅಂದಹಾಗೆ, ಈ ಜಾವೆದ್ ಅವರ ತಂದೆ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದು ಮತ್ತು ಈಗ ನೆಲೆಸಿರುವುದು ನಮ್ಮ ಬೀದರ್‌ನಲ್ಲಿ. ಅಂದರೆ, ಒಂದು ರೀತಿಯಲ್ಲಿ ಜಾವೆದ್ ಕನ್ನಡದ ಕುವರ ಮತ್ತು ತೀಸ್ತಾ ನಮ್ಮ ರಾಜ್ಯದ ಸೊಸೆ ಇದ್ದಂತೆ!

ಈ ತೀಸ್ತಾ ಕಳೆದ ಹದಿಮೂರು ವರ್ಷಗಳಿಂದ ಮೋದಿಯನ್ನು ಮಗ್ಗುಲಲ್ಲಿನ ಮುಳ್ಳಾಗಿ ಕಾಡುತ್ತಿರುವ ಕೆಚ್ಚೆದೆಯ ಹೋರಾಟಗಾರ್ತಿ. 2002ರ ಗುಜರಾತ್ ನರಮೇಧದಲ್ಲಿ ಮೂರು ಸಾವಿರ ಅಮಾಯಕ ಜನ ಸತ್ತಿದ್ದಕ್ಕೆ ನೇರ ಕಾರಣ ಮೋದಿಯೇ ಎಂದು ನ್ಯಾಯಾಲಯದ ಮುಂದೆ ಸಾಬೀತುಪಡಿಸಲು ಮತ್ತು ಆ ಮೂಲಕ ಸತ್ತವರಿಗೆ ನ್ಯಾಯ ಒದಗಿಸಲು ನಿರಂತರವಾಗಿ ಶ್ರಮಿಸುತ್ತಿರುವ ಮಹಿಳೆ ಈ ತೀಸ್ತಾ.

ಕೋಮು ಸೌಹಾರ್ದಕ್ಕಾಗಿ ಮತ್ತು ನ್ಯಾಯಕ್ಕಾಗಿ ತೀಸ್ತಾ ಹೋರಾಡಲು ಪ್ರಾರಂಭಿಸಿದ್ದು ಇತ್ತೀಚಿನ ಸಂಗತಿಯಲ್ಲ. 1992ರಲ್ಲಿ ಹಿಂದುತ್ವವಾದಿಗಳು ಬಾಬ್ರಿ ಮಸೀದಿಯನ್ನು ಕೆಡವಿದಾಗ ತೀಸ್ತಾ ಕೂಡ ಭಾರತದ ಲಕ್ಷಾಂತರ ಜಾತ್ಯತೀತರಂತೆ ಕಂಗಾಲಾದರು. ಅದಾದನಂತರ ಮುಂಬೈಯಲ್ಲಿ ನಡೆದ ಕೋಮು ಗಲಭೆಗಳನ್ನು ಕಂಡು ಚಿಂತಾಕ್ರಾಂತರಾದರು. ಆಗ ವೃತ್ತಿಯಲ್ಲಿ ಪತ್ರಕರ್ತರಾಗಿದ್ದ ತೀಸ್ತಾ ಮತ್ತು ಜಾವೆದ್ ತಮ್ಮ ಕೆಲಸಗಳಿಗೆ ರಾಜೀನಾಮೆ ನೀಡಿ 'ಕಮ್ಯೂನಲಿಸಂ ಕಾಂಬ್ಯಾಟ್' ಎಂಬ ಮೂಲಭೂತವಾದವನ್ನು ವಿರೋಧಿಸುವ, ಸೌಹಾರ್ದಕ್ಕೆ ಶ್ರಮಿಸುವ ಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದರು.



ಮುಂಬೈ ಗಲಭೆಯನ್ನು ನ್ಯಾಯಾಂಗ ವಿಚಾರಣೆಗೆ ಕೊಡಬೇಕೆಂದು ಒತ್ತಾಯಿಸಿದವರಲ್ಲಿ ತೀಸ್ತಾ ಮತ್ತು ಜಾವೆದ್ ಕೂಡ ಪ್ರಮುಖರಾಗಿದ್ದರು. ಆಗಿನ ಮಹಾರಾಷ್ಟ್ರ ಸರ್ಕಾರ ನ್ಯಾಯಮೂರ್ತಿ ಶ್ರೀಕೃಷ್ಣರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನೇನೋ ರಚಿಸಿತು. ಆದರೆ ಆಯೋಗ ಕೊಟ್ಟ ವರದಿಯನ್ನು ಗೌಪ್ಯವಾಗಿಟ್ಟಿತ್ತು. ಯಾಕೆಂದರೆ ಆಯೋಗವು ಗಲಭೆಗೆ ಕಾರಣರಾಗಿದ್ದು ಕಾಂಗ್ರೆಸ್ ಮತ್ತು ಶಿವಸೇನೆಯ ನಾಯಕರು ಎಂದು ವರದಿ ಮಾಡಿತ್ತು. ಆಗ ಆ ವರದಿಯ ಪ್ರತಿಯನ್ನು ಪಡೆದ ತೀಸ್ತಾ ಅದರ ಸಾವಿರಾರು ಪ್ರತಿಗಳನ್ನು ಪ್ರಕಟಿಸಿ ಮುಂಬೈ ಹೈಕೋರ್ಟ್ ಸೇರಿದಂತೆ ಹತ್ತಾರು ಸಾರ್ವಜನಿಕ ಸ್ಥಳಗಳಲ್ಲಿ ಕಡಿಮೆ ದರದಲ್ಲಿ ಮಾರುವ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಿದ್ದರು. ಆಗ ಯಾರೂ ತೀಸ್ತಾರನ್ನು ಕಾಂಗ್ರೆಸ್ ವಿರೋಧಿ ಎಂದಾಗಲಿ, ಸುಳ್ಳುಗಾತಿ ಎಂದಾಗಲಿ ಆರೋಪಿಸಿರಲಿಲ್ಲ. ಆಕೆಯ ವಿರುದ್ಧ ದೂರುಗಳನ್ನು ದಾಖಲಿಸಿರಲಿಲ್ಲ. ಬದಲಾಗಿ ಆಕೆ ಮತ್ತು ಜಾವೆದ್‌ರ ಕೆಲಸವನ್ನು ಜನ ಮೆಚ್ಚಿದರು, ಪ್ರಶಸ್ತಿಗಳನ್ನು ಕೊಟ್ಟು ಅವರಿಬ್ಬರನ್ನು ಪ್ರೋತ್ಸಾಹಿಸಿದರು. ಸಬ್ರಂಗ್ ಟ್ರಸ್ಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದ ತೀಸ್ತಾ ಮತ್ತು ಜಾವೇದ್ ಅದರ ಮೂಲಕ ಫೋರ್ಡ್ ಫೌಂಡೇಶನ್‌ಗೆ 'ಜಾತಿ ಮತ್ತು ಕೋಮುವಾದದ ವಿವಿಧ ಆಯಾಮಗಳು' ಕುರಿತಂತೆ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

2002ರ ಗುಜರಾತ್ ನರಮೇಧ ಕೂಡ ನಮ್ಮನ್ನೆಲ್ಲ ಕಾಡಿದಂತೆ ತೀಸ್ತಾರನ್ನೂ ಕಾಡಿತು. ನಾವೆಲ್ಲ ಇದ್ದಲ್ಲಿಂದಲೇ ಅದನ್ನು ಖಂಡಿಸಿದೆವು, ಪ್ರತಿಭಟಿಸಿದೆವು. ಆದರೆ ತೀಸ್ತಾ ಅಷ್ಟಕ್ಕೆ ಸುಮ್ಮನಾಗಲಿಲ್ಲ. ಹಲವಾರು ಪ್ರಜ್ಞಾವಂತರನ್ನು ಜೊತೆ ಹಾಕಿಕೊಂಡು 'ನ್ಯಾಯ ಮತ್ತು ಶಾಂತಿಗಾಗಿ ನಾಗರಿಕರು' ಎಂಬ ಸಂಘಟನೆಯನ್ನು ಹುಟ್ಟುಹಾಕಿದರು. ಆ ಸಂಘಟನೆಯ ಮೂಲಕ ಗುಜರಾತ್ ಗಲಭೆಯ ಸಂತ್ರಸ್ತರಿಗೆ ಕಾನೂನಿನ ನೆರವು ನೀಡಲು ಮುಂದಾದರು. ತೀಸ್ತಾ ಹಾಗೆ ಮಾಡಿದ್ದರಿಂದಲೇ ನರೋಡಾ ಪಾಟಿಯಾ ಎಂಬ ಪ್ರದೇಶದಲ್ಲಿ ಕಗ್ಗೊಲೆ ನಡೆಸಿದ್ದಕ್ಕೆ ಮೋದಿಯ ಸಂಪುಟದಲ್ಲಿ ಸಚಿವೆಯಾಗಿದ್ದ ಮಾಯಾ ಕೊಡ್ನಾನಿ ಸೇರಿದಂತೆ ಬರೋಬ್ಬರಿ 120 ಜನರಿಗೆ ಶಿಕ್ಷೆ ವಿಧಿಸುವುದು ಸಾಧ್ಯವಾಯಿತು. ಅಷ್ಟೇ ಅಲ್ಲದೆ, ಗುಲ್ಬರ್ಗ್ ಸೊಸೈಟಿ ಎಂಬ ಪ್ರದೇಶದಲ್ಲಿ ಮಾಜಿ ಸಂಸದ ಇಶಾನ್ ಝಾಫ್ರಿಯವರ ಕೊಲೆಗೆ ಬರೀ ಗಲಭೆಕೋರರು ಕಾರಣರಲ್ಲ, ಬದಲಾಗಿ ಅವರಿಗೆ ಕುಮ್ಮಕ್ಕು ನೀಡಿದ ಮುಖ್ಯಮಂತ್ರಿ ಮೋದಿ ಮತ್ತು ಅಧಿಕಾರಿಗಳು ಎಂದು ಆರೋಪಿಸಿ ಅವರ ಪತ್ನಿ ಜಾಕಿಯಾ ಝಾಫ್ರಿ ಕೊಟ್ಟ ದೂರಿನ ಬೆನ್ನಿಗೆ ತೀಸ್ತಾ ಬಲವಾಗಿ ನಿಂತರು. ಅದೇ ಮೋದಿಯ ಕೆಂಗಣ್ಣಿಗೆ ಕಾರಣವಾಗಿದೆ. ಯಾಕೆಂದರೆ ಜಾಕಿಯಾ ಅವರ ದೂರಿನಲ್ಲಿ ಪ್ರಥಮ ಆರೋಪಿಯೇ ಮೋದಿ!

ಜಾಕಿಯಾ ಜೊತೆ ತೀಸ್ತಾ ನಿಂತ ದಿನದಿಂದ ಮೋದಿ ಆಕೆಗೆ ವಿಚಿತ್ರ ರೀತಿಯ ಕಿರುಕುಳಗಳನ್ನು ನೀಡುತ್ತಲೇ ಬಂದಿದ್ದಾನೆ. ಆತ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ಆತ ಗುಲಾಮನಾಗಿ ಬಳಸಿದ್ದು ಅಲ್ಲಿನ ಪೊಲೀಸ್ ಇಲಾಖೆಯನ್ನು. ತೀಸ್ತಾ ಜೊತೆಗೆ ಆರಂಭದ ದಿನಗಳಲ್ಲಿ ಕೆಲಸ ಮಾಡುತ್ತಿದ್ದ ರಿಯಾಜ್ ಖಾನ್ ಎಂಬಾತನನ್ನು ತಮ್ಮ ಬುಟ್ಟಿಗೆ ಹಾಕಿಕೊಂಡ ಗುಜರಾತ್ ಪೊಲೀಸರು, ಆತನ ಮೂಲಕ ತೀಸ್ತಾ ಗಲಭೆಯ ಸಂತ್ರಸ್ತರ ದಾರಿ ತಪ್ಪಿಸುತ್ತಿದ್ದಾರೆ, ಸುಳ್ಳು ಸಾಕ್ಷ್ಯಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದಾರೆ ಎಂದೆಲ್ಲ ಖೊಟ್ಟಿ ದೂರನ್ನು ದಾಖಲಿಸಿಕೊಂಡರು. ಅದು ಸಾಲದಾದಾಗ, ಇಶಾನ್ ಝಾಫ್ರಿಯವರು ವಾಸಿಸುತ್ತಿದ್ದ ಗುಲ್ಬರ್ಗ್ ಸೊಸೈಟಿಯ ಹಲವು ಸದಸ್ಯರನ್ನೂ ಕಬ್ಜಾ ಮಾಡಿಕೊಂಡು 'ತೀಸ್ತಾ ನಮಗೆ ಆರ್ಥಿಕವಾಗಿ ಮೋಸ ಮಾಡಿದ್ದಾರೆ. ನಮ್ಮ ಹೆಸರಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಸಂಗ್ರಹಿಸಿ ಗುಳುಂ ಮಾಡಿದ್ದಾರೆ' ಎಂಬ ಆರೋಪವನ್ನು ಹೊರಿಸಿದರು. ತೀಸ್ತಾ ಅದೆಷ್ಟೇ ಸಮಜಾಯಿಷಿ ನೀಡಿದರೂ, ದಾಖಲೆಗಳನ್ನು ಒದಗಿಸಿದರೂ ಮೋದಿಯ ಆಜ್ಞಾಪಾಲಕರಾದ ಪೊಲೀಸರು ಆಕೆಯ ವಿರುದ್ಧದ ದೂರುಗಳಿಗೆ ಒತ್ತು ಕೊಟ್ಟರು; ಅವುಗಳನ್ನು ಆಧರಿಸಿ ಆಕೆಯ ಎಲ್ಲಾ ಬ್ಯಾಂಕ್ ಅಕೌಂಟುಗಳನ್ನು ಬಂದ್ ಮಾಡಿದರು. ಆಕೆ ಆರ್ಥಿಕವಾಗಿ ಮೋಸ ಮಾಡಿದ್ದಾರೋ ಇಲ್ಲವೋ ಎಂದು ಆಕೆ ಕೊಟ್ಟ 25,000 ದಾಖಲೆಗಳನ್ನು ಪರಿಶೀಲಿಸದೇ ಮತ್ತೆ ಮತ್ತೆ ಖ್ಯಾತೆ ತೆಗೆಯುವುದನ್ನೇ ಕಾಯಕ ಮಾಡಿಕೊಂಡರು.

ಇದೆಲ್ಲದರ ಜೊತೆಗೆ ಕಾನೂನುಬಾಹಿರವಾಗಿ ಆಕೆ ಫೋರ್ಡ್ ಫೌಂಡೇಶನ್‌ನಿಂದ ಹಣ ಪಡೆದಿದ್ದಾರೆ ಎಂದು ಆರೋಪಿಸಿ ಮತ್ತೊಂದು ದೂರನ್ನು ದಾಖಲಿಸಿಕೊಂಡು ಆಕೆಯನ್ನು ಬಂಧಿಸಲು ಸಂಚು ಹೂಡಿದರು. ಅದರ ವಿರುದ್ಧ ತೀಸ್ತಾ ಕಳೆದ ಫೆಬ್ರವರಿಯಲ್ಲಿ ಮುಂಬೈ ಹೈ ಕೋರ್ಟ್‌ನಿಂದ ನಿರೀಕ್ಷಣಾ ಜಾಮೀನು ಪಡೆಯಲು ಯತ್ನಿಸಿದರು. ಆದರೆ ದೂರು ದಾಖಲಾಗಿರುವುದು ಗುಜರಾತ್ ರಾಜ್ಯದಲ್ಲಾದ್ದರಿಂದ ಅಲ್ಲಿನ ನ್ಯಾಯಾಲಯಕ್ಕೆ ಅರ್ಜಿ ಹಾಕಬೇಕೆಂದು ಹೈಕೋರ್ಟ್ ಆಕೆಯ ಅರ್ಜಿಯನ್ನು ತಿರಸ್ಕರಿಸಿತು. ಗುಜರಾತ್ ಪೊಲೀಸರು ಅದೆಷ್ಟು ದಕ್ಷರೆಂದರೆ ಆ ತೀರ್ಪು ಹೊರಬಿದ್ದ ಮರುಕ್ಷಣವೇ ತೀಸ್ತಾರನ್ನು ಬಂಧಿಸಲು ಆಕೆಯ ಮುಂಬೈ ಮನೆಯ ಮುಂದೆ ಪ್ರತ್ಯಕ್ಷರಾಗಿದ್ದರು! ಆದರೆ ತೀಸ್ತಾ ಅವತ್ತಿನ ದಿನವೇ ಸುಪ್ರೀಂಕೋರ್ಟ್ ಮೂಲಕ ತಡೆಯಾಜ್ಞೆ ತರಿಸಿಕೊಳ್ಳುವಲ್ಲಿ ಯಶಸ್ವಿ ಆಗಿದ್ದರಿಂದ ಬಂಧನದಿಂದ ಬಚಾವ್ ಆದರು.

ಮುಖ್ಯಮಂತ್ರಿ ಆಗಿದ್ದಾಗ ಗುಜರಾತ್ ಪೊಲೀಸರನ್ನು ತನ್ನ ದುರುದ್ದೇಶಕ್ಕೆ ಬಳಸಿಕೊಂಡ ಮೋದಿ ಪ್ರಧಾನಿ ಆದ ನಂತರ ಕೇಂದ್ರ ಪೊಲೀಸರನ್ನು ಬಳಸಿಕೊಳ್ಳುತ್ತಿದ್ದಾನೆ. ಆ ನಿಟ್ಟಿನಲ್ಲೇ ಇತ್ತೀಚೆಗೆ ಅದೇ 'ಆರ್ಥಿಕ ಮೋಸ' ಎಂಬ ಖೊಟ್ಟಿ ದೂರನ್ನು ಸಿಬಿಐಗೆ ಮೋದಿ ಹಸ್ತಾಂತರಿಸಿದ್ದಾನೆ. ಅದು ತಮ್ಮ ಕೈಗೆ ಬಂದದ್ದೇ ತಡ ಸಿಬಿಐ ಪೊಲೀಸರು ನಿನ್ನೆ ತೀಸ್ತಾ ಮನೆ ಮತ್ತು ಕಚೇರಿ ಮೇಲೆ ದಾಳಿ ಮಾಡಿದ್ದಾರೆ.

ಈ ದಾಳಿ ನಡೆದಿರುವ ಸಂದರ್ಭವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇದರ ಹಿಂದಿನ ಮಸಲತ್ತು ಅರ್ಥವಾಗುತ್ತದೆ. ಇದಾದ ಮಾರನೆ ದಿನವೇ- ಅಂದರೆ ಇವತ್ತು ಬುಧವಾರ-ಗುಜರಾತ್ ಹೈಕೋರ್ಟಿನ ಮುಂದೆ ಮಾಯಾ ಕೊಡ್ನಾನಿಯ ಜಾಮೀನನ್ನು ಪ್ರಶ್ನಿಸಿ ತೀಸ್ತಾ ಸಲ್ಲಿಸಿರುವ ಅರ್ಜಿ ಬರುವುದಿತ್ತು. ಮಾತ್ರವಲ್ಲ ಸುಪ್ರೀಂಕೋರ್ಟ್ ನೇಮಿಸಿದ್ದ ವಿಶೇಷ ತನಿಖಾ ತಂಡ 'ಗುಜರಾತ್ ನರಮೇಧದಲ್ಲಿ ಮೋದಿಯ ಪಾತ್ರ ಇದೆ ಎಂಬುದಕ್ಕೆ ಸೂಕ್ತ ಸಾಕ್ಷ್ಯಾಧಾರಗಳ ಇಲ್ಲ' ಎಂದು ಕೊಟ್ಟಿದ್ದ ವರದಿಯನ್ನು (ಇದನ್ನೇ ಮೋದಿ ಭಕ್ತರು 'ಸುಪ್ರೀಂಕೋರ್ಟ್ ಮೋದಿಗೆ ನೀಡಿರುವ ಕ್ಲೀನ್‌ಚಿಟ್' ಎಂದು ತಪ್ಪಾಗಿ ವಾದಿಸುವುದು) ಪ್ರಶ್ನಿಸಿ ಜಾಕಿಯಾ ಅವರು ಸಲ್ಲಿಸಿರುವ ದೂರು ಬರಲಿದೆ. ಇವೆರಡೂ ಪ್ರಮುಖ ದಾವೆಗಳು. ಒಂದು ಕೊಲೆ ಮಾಡಿಸಿದ್ದಕ್ಕೆ ಮಾಯ ಕೊಡ್ನಾನಿಗೆ ಮಂತ್ರಿಗಿರಿಯನ್ನು ದಯಪಾಲಿಸಿದ ಮೋದಿಯ ಕರಾಮತ್ತನ್ನು ಬಯಲು ಮಾಡಿದರೆ, ಇನ್ನೊಂದು ಸ್ವತಃ ಮೋದಿಯ ಕುತ್ತಿಗೆಗೆ ಉರುಳಾಗುವ ಕೇಸು. ಇವೆರಡರತ್ತ ತೀಸ್ತಾ ಗಮನಹರಿಸದಂತೆ ನೋಡಿಕೊಳ್ಳುವ ಪ್ರಯತ್ನದ ಭಾಗವಾಗಿಯೇ ಆಕೆಯ ಮೇಲೆ ಸಿಬಿಐ ದಾಳಿ ನಡೆದಿದೆ. ಯಾಕೆಂದರೆ ಆಕೆಯ ವಿರುದ್ಧ ಎಫ್‌ಐಆರ್‌ಗಳನ್ನು ದಾಖಲಿಸಿ ಬಂಧನದ ವಾರೆಂಟ್‌ಗಳನ್ನು ಹೊರಡಿಸಿದರೆ ಮತ್ತು ವಿಚಾರಣೆ ಎಂಬ ಬೆದರಿಕೆ ಹಾಕಿದರೆ ಆಕೆ ತನ್ನೆಲ್ಲ ಸಮಯವನ್ನು ನಿರೀಕ್ಷಣಾ ಜಾಮೀನಿಗೆ ಮತ್ತು ಲೆಕ್ಕಪತ್ರಗಳನ್ನು ಒದಗಿಸುವುದಕ್ಕೇ ಮೀಸಲಿಡಬೇಕಾಗುತ್ತದೆ. ಆಗ ಆಕೆಗೆ ಮೋದಿ ವಿರುದ್ಧ ಸಮರ ಸಾರಲು ಸಮಯ ಎಲ್ಲಿ ಸಿಗುತ್ತದೆ. ಅದಕ್ಕಿಂತ ಮುಖ್ಯವಾಗಿ ದೂರು, ಅರೆಸ್ಟು, ವಿಚಾರಣೆ ಎಂದೆಲ್ಲ ಬೆದರಿಸಿದರೆ ಒಂದೆಡೆ ಆಕೆಯ ಮೇಲೆ ಜನರಿಟ್ಟಿರುವ ವಿಶ್ವಾಸವೂ ಕುಗ್ಗುತ್ತದೆ, ಆಕೆಯ ಮಾನಸಿಕ ಸ್ಥೈರ್ಯವೂ ಕಡಿಮೆಯಾಗುತ್ತದೆ. ಇದು ಮೋದಿ ಎಂಬ ಕಿರಾತಕನ ಷಡ್ಯಂತ್ರ.


ಆದರೆ ತೀಸ್ತಾ ಸಾಮಾನ್ಯ ಮಹಿಳೆಯಲ್ಲ, ಇಂಥವಕ್ಕೆಲ್ಲ ಆಕೆ ಬೆದರುವುದಿಲ್ಲ. ಆಕೆ ಎಂತಹ ಗಟ್ಟಿಗಿತ್ತಿ ಎಂದರೆ ಆಕೆಗೆ ಕಿರುಕುಳ ಕೊಟ್ಟಷ್ಟೂ ಮೋದಿ ವಿರುದ್ಧ ಹೋರಾಡುವ ಆಕೆಯಲ್ಲಿನ ಕೆಚ್ಚು ಗಟ್ಟಿಗೊಳ್ಳುತ್ತದೆ.

ಇದು ತೀಸ್ತಾಳ ವೈಯಕ್ತಿಕ ಹೋರಾಟವಲ್ಲ ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ. ಆಕೆಯ ಹೋರಾಟ ನಮ್ಮೆಲ್ಲರ ಹೋರಾಟವೂ ಆಗಬೇಕಿದೆ. ಯಾಕೆಂದರೆ ಭಾರತದಲ್ಲಿ ಪ್ರಜಾತಂತ್ರ, ಜಾತ್ಯತೀತತೆ, ನ್ಯಾಯ, ಕೋಮುಸೌಹಾರ್ದ ಮತ್ತು ಶಾಂತಿ ಉಳಿಯಬೇಕಾದರೆ ಸಾವಿರಾರು ತೀಸ್ತಾಗಳ ಅಗತ್ಯವಿದೆ. ಆಕೆಯ ಹೋರಾಟ ನಮ್ಮ ಯುವಕಯುವತಿಯರಿಗೆ ಸ್ಫೂರ್ತಿಯಾಗಲಿ ಎಂದು ಆಶಿಸುತ್ತೇನೆ.

ಭಾರತದ ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಸೌಹಾರ್ದದ ನದಿಯಂತೆ ಹರಿಯುವ ತೀಸ್ತಾ ಎಂದೇ ಆಕೆಯನ್ನು ಬಣ್ಣಿಸುವ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಅವರ ಬೆಂಬಲಕ್ಕೆ ನಿಂತಿದೆ. ಇವತ್ತು ಶಿವಮೊಗ್ಗ, ರಾಯಚೂರು, ದಾವಣಗೆರೆ, ಮಂಗಳೂರು, ಕೊಪ್ಪಳ ಮತ್ತು ಚಿಕ್ಕಮಗಳೂರುಗಳಲ್ಲಿ ಮೋದಿ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಬರುವ ದಿನಗಳಲ್ಲಿ ಇದು ಇನ್ನೂ ಹೆಚ್ಚು ನಗರಗಳಲ್ಲಿ ನಡೆಯಲಿದ್ದು ಜುಲೈ 20ರಂದು ಬೆಂಗಳೂರಿನಲ್ಲೂ ದೊಡ್ಡ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನಾಡಿನ ಪ್ರಜ್ಞಾವಂತರೆಲ್ಲ ಈ ಪ್ರತಿಭಟನೆಗಳಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಮನವಿ ಮಾಡುತ್ತೇನೆ.


ನೊಬೆಲ್ ವಿಜೇತ ಅಮರ್ತ್ಯ ಸೇನ್ ಅವರು ಒಂದು ವಿಚಾರಸಂಕಿರಣದಲ್ಲಿ ಭಾಗವಹಿಸುತ್ತಾ "ಭಾರತದಲ್ಲಿ ಪ್ರಜಾತಂತ್ರವನ್ನು ಜೀವಂತವಾಗಿಟ್ಟಿರುವವರು ಮೂವರು ಮಹಿಳೆಯರು. ಅವರೆಂದರೆ ಮೇಧಾ ಪಾಟ್ಕರ್, ಅರುಂಧತಿ ರಾಯ್ ಮತ್ತು ತೀಸ್ತಾ ಸೆತಲ್ವಾಡ್" ಎಂದಿದ್ದರು. ಅದು ಅಕ್ಷರಶಃ ನಿಜ ಕೂಡ.

ಗೆಳತಿ ತೀಸ್ತಾಳ ಹೋರಾಟ ಯಶಸ್ವಿಯಾಗಲಿ, ಕೊಲೆಗಡುಕರಿಗೆ ಶಿಕ್ಷೆಯಾಗಲಿ, ಗುಜರಾತ್ ಸಂತ್ರಸ್ತರಿಗೆ ನ್ಯಾಯ ಸಿಗಲಿ, ಎಲ್ಲೆಡೆ ಶಾಂತಿ ಮತ್ತು ಸೌಹಾರ್ದ ನೆಲೆಸಲಿ ಎಂದು ಆಶಿಸುತ್ತೇನೆ... ■




ಗೋವಾ ಪ್ರಭುತ್ವದ ಪಾತಕ!

ಮತ್ತೆ, ಮತ್ತೆ ಕನ್ನಡಿಗರ ಮೇಲೆ ಅಮಾನುಷ ದಾಳಿ!!



ಸಿಎಂ ಸಿದ್ದು

ಗೋವಾ ಕನ್ನಡಿಗರು ಅಕ್ಷರಶಃ ತಲ್ಲಣಿಸುತ್ತಿದ್ದಾರೆ! ಒಂದು ಕಾಲದಲ್ಲಿ ಸುಂದರ-ಸಮೃದ್ಧ ಗೋವಾ ಕಟ್ಟಿದ ಕನ್ನಡದ ಕೈಗಳೀಗ ತುತ್ತು ಅನ್ನಕ್ಕೆ ಬೊಗಸೆಯೊಡ್ಡಿ ಬೀದಿಯಲ್ಲಿ ನಿಂತಿವೆ!! ಗೋವಾ ಪ್ರಭುತ್ವ ಹಠಕ್ಕೆ ಬಿದ್ದಂತೆ ವಲಸಿಗ ಕನ್ನಡಿಗರ ಮೇಲೆ ಸತತ ದಾಳಿ ಮಾಡಿ ನಿರ್ಗತಿಕರಾಗಿಸುತ್ತಿರುವ ಕಾರ್ಯಾಚರಣೆ ಘನಘೋರವಾಗಿದೆ. ದುರಂತವೆಂದರೆ ಈ ಅಸಹಾಯಕ ಕೂಲಿಕಾರ ಕನ್ನಡಿಗರನ್ನು ರಕ್ಷಿಸಲು ಕರ್ನಾಟಕ ಸರ್ಕಾರವಾಗಲೀ, ಕನ್ನಡಿಗರ ಕಾಪಾಡುವ ಗುತ್ತಿಗೆ ಹಿಡಿದಂತೆ ಹಾರಾಡುವ ಓರಾಟಗಾರರಾಗಲೀ ಅಥವಾ ಯಾವುದೇ ಸಂಘ-ಸಂಸ್ಥೆಗಳಾಗಲೀ ಗೋವಾದ ಕ್ರೌರ್ಯಕ್ಕೆ ಕಡಿವಾಣ ಹಾಕುವ ಪ್ರಾಮಾಣಿಕ ಪ್ರಯತ್ನವೇ ಮಾಡುತ್ತಿಲ್ಲ.



ಎ.ಎಸ್. ಪಾಟೀಲ ನಡಹಳ್ಳಿ

ಕಳೆದೊಂದು ವರ್ಷದಿಂದ ಬರೋಬ್ಬರಿ ಮೂರು ಬಾರಿ ಬೈನಾ ಬೀಚ್ ಪ್ರದೇಶದಲ್ಲಿ ಗುಡಿಸಲು ಹಾಕಿಕೊಂಡು ಬದುಕು ಕಟ್ಟಿಕೊಂಡಿದ್ದ ಕನ್ನಡಿಗರ ಮೇಲೆ ಗೋವಾ ಸರ್ಕಾರ ಹೇಯ-ಬರ್ಬರವಾಗಿ ಬುಲ್ಡೋಜರ್ ಹರಿಸಿದೆ. ತಮ್ಮ ಸೌಂದರ್ಯೀಕರಣಕ್ಕೆ, ಬೆಡಗು-ಬಿನ್ನಾಣಕ್ಕೆ ಈ ಕನ್ನಡಿಗ ಕೂಲಿಗಳ ಗುಡಿಸಲುಗಳು ಕಪ್ಪುಚುಕ್ಕೆ ಎಂದು ಭಾವಿಸಿರುವ ಗೋವನ್ನರ ಕೃತಘ್ನತೆ ಹೇಳತೀರದು. ಶ್ರಮ ಸಂಸ್ಕೃತಿಯ ಮಂದಿಯನ್ನು ನಿಕೃಷ್ಟವಾಗಿ ಕಾಣುವ ಗೋವಾದ ಐಷಾರಾಮಿ ಸಂಸ್ಕೃತಿ ಗುಡಿಸಲುಗಳ ಅವಶೇಷಗಳ ಮೇಲೆ ರೆಸಾರ್ಟ್ ಎಬ್ಬಿಸಿ ಮೋಜು-ಮಜಾ ಉಡಾಯಿಸಲು ಕಾತರಿಸುತ್ತಿವೆ.

ಉತ್ತರ ಕರ್ನಾಟಕದ ಬಾಗಲಕೋಟೆ, ವಿಜಯಪುರ ಕಡೆಯ ಕೂಲಿ ಕಾರ್ಮಿಕರು ದಂಡು-ದಂಡಾಗಿ ಗೋವಾಕ್ಕೆ ಬರುವಂತೆ ನಾನಾ ನಮೂನೆಯ ಆಮಿಷ,




ಮುರುಘಾಮಠದ ಸ್ವಾಮೀಜಿ
ಮಂತ್ರಿ ದೇಶಪಾಂಡೆ

ಆಕರ್ಷಣೆಯೊಡ್ಡಿದ್ದೇ ಗೋವಾದ ಆಳುವವರು ಮತ್ತು ಮಜಾ ಪ್ರವೃತ್ತಿಯ ಗೋವನ್ನರು. 1962ರಲ್ಲಿ ಪೋರ್ಚುಗೀಸರ ಹಿಡಿತದಿಂದ ಬಿಡಿಸಿಕೊಂಡಿದ್ದ ಗೋವಾಕ್ಕೆ ಪುನರ್ ನಿರ್ಮಾಣದ ಜರೂರತ್ತಿತ್ತು, ಆದರೆ ಶ್ರಮ ವಹಿಸಿ ಕೆಲಸ ಮಾಡುವ ಮಾನವ ಸಂಪನ್ಮೂಲದ ಕೊರತೆ ಆ ರಾಜ್ಯವನ್ನು ಬಾಧಿಸುತ್ತಿತ್ತು. ದುಡಿಯುವ ಕಾರ್ಮಿಕರಿಲ್ಲದೆ ಗೋವಾ ಕಟ್ಟಲು ಅಂದಿನ ಆಡಳಿತಗಾರರಿಂದ ಸಾಧ್ಯವಾಗಲಿಲ್ಲ. ಆಗ ಉತ್ತರ ಕರ್ನಾಟಕ ಕಡೆಯ ಬಡ ಕೂಲಿ ಕಾರ್ಮಿಕರನ್ನು ಕರೆತರಲಾಗಿತ್ತು, ಬೈನಾ ಬೀಚ್ ಭಾಗದಲ್ಲಿ ಗುಡಿಸಲು ಹಾಕಿಕೊಂಡು ಇರಲು ಜಾಗ ತೋರಿಸಿದ್ದೇ ಅಂದಿನ ಗೋವಾದ ಆಳ್ವಿಕರಾಗಿತ್ತು.

ಕನ್ನಡಿಗರಿಗೆ ಕೈತುಂಬ ಕೆಲಸ, ಕಿಸೆ ತುಂಬ ಕೂಲಿ ಕೊಟ್ಟು ಅವರೆಂದೂ ಊರು ಕಡೆ ಹೋಗದಂತೆ 'ತಡೆ' ಹಾಕಲಾಯ್ತು, ವಲಸಿಗರ ಮನೆಗಳಿಗೆ ಸ್ಥಳೀಯಾಡಳಿತದಿಂದ ನಂಬರ್ ಕೊಡಲಾಯ್ತು, ನೀರು, ವಿದ್ಯುತ್ ಒದಗಿಸಲಾಯ್ತು; ಗೋವಾದ ನಾಗರಿಕತ್ವ ಕೂಡ ಕಲ್ಪಿಸಲಾಯ್ತು. ಅಷ್ಟೇ ಅಲ್ಲ, ರೇಷನ್ ಕಾರ್ಡು, ಓಟರ್ ಐಡಿ ಮತ್ತು ಮನೆ ತೆರಿಗೆ ರಸೀದಿಯಂಥ ಅಧಿಕೃತ ಪೌರತ್ವದ ದಾಖಲೆ ಸಹ ಈ ವಲಸಿಗರಿಗೆ ಆಡಳಿತಗಾರರು ಧಾರಾಳವಾಗಿ ಕೊಟ್ಟರು. ಒಟ್ಟಿನಲ್ಲಿ ತಮ್ಮ ಗೋವಾ ಮಜಬೂತಾಗಿ ಕಟ್ಟಲು ಅನಿವಾರ್ಯವಾಗಿದ್ದ ಕರ್ನಾಟಕದ ಮಂದಿಯನ್ನು ಇಲ್ಲೇ ಉಳಿಸಿಕೊಳ್ಳಲು ಏನೇನು ಸಾಧ್ಯವೋ ಅದೆಲ್ಲ ಮಾಡಿದರು.

ಯಾವಾಗ ಗೋವಾಕ್ಕೆ ಕನ್ನಡಿಗರ ಅಗತ್ಯ ಕಡಿಮೆಯಾಯ್ತೋ ಆಗ ಕಾಟ ಕೊಡಲು ಶುರು ಮಾಡಿದರು. ಗೋವಾವನ್ನು ಶ್ರೀಮಂತ, ಪ್ರವಾಸೋದ್ಯಮ ಕೇಂದ್ರವಾಗಿ ಮಾಡಿದ್ದೇ ಈ ಕನ್ನಡಿಗರು. ಅದನ್ನು ಗೋವನ್ನರು ಮರೆತುಬಿಟ್ಟರು. ತಮ್ಮ ಅಂದ-ಚೆಂದಕ್ಕೆ ಈ ಮಂದಿ ದೃಷ್ಟಿಬೊಟ್ಟೆಂದು ಭಾವಿಸಿ ಓಡಿಸಲು ಸ್ಕೆಚ್ ಹಾಕಿದರು. ಮನೋಹರ ಪಾರಿಕ್ಕರ್‌ನಂಥ ಅನಾಹುತಕಾರಿ 'ಐಐಟಿ ಚೆಡ್ಡಿ' ಸಿಎಂ ಆಗಿದ್ದಾಗ ಕಂಡ-ಕಂಡಲ್ಲಿ ಕಕ್ಕಸು ಮಾಡುವ



ಗೋವಾ ಸಿಎಂ ಲಕ್ಷ್ಮೀಕಾಂತ ಪಾರ್ಸೇಕರ್

ಕರ್ನಾಟಕದ ಮಂದಿಯನ್ನು ಓಡಿಸದೇ ಇರಲಾಗದು ಎಂ... ಕಿಚಾಯಿಸುವ ಧ್ವನಿಯಲ್ಲಿ ವಿಧಾನಸಭೆಯಲ್ಲೇ ಹಲುಬಿ... ಇದೆ. ಒಟ್ಟಿನಲ್ಲಿ ಕರ್ನಾಟಕದ ಬೆವರಿನ ಪರಿವಾರವೆಂ... ಕೊಳಕರೆಂಬಂತೆ ಗೋವಾದ ಆಡಳಿತಗಾರರು ಪರಿಗ... ಪಾತಕ ಮಾಡತೊಡಗಿದರು.

ಕನ್ನಡಿಗರ ಮೇಲೆ ಮೊದಲ ಬಾರಿ ಗೋವಾದ ಜ... ವಿರೋಧಿ ಆಳ್ವಿಕರು ಮುರಕೊಂಡು ಬಿದ್ದಿದ್ದು 2004ರ... ಅಂದು ಗೋವಾದವರು ಕರ್ನಾಟಕದ ಕೂಲಿ ಕಾರ್ಮಿ... ಮೇಲೆ ಅನೈತಿಕತೆ ಆರೋಪ ಹೊರಿಸಿ ಒಕ್ಕಲೆಬ್ಬಿಸ... ಕುಚೋದ್ಯ ಮಾಡಿತ್ತು. ಬೈನಾ ಬೀಚ್‌ನ ಜೋಪಡಿಗ... ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಹುಯಿಲೆಬ್ಬಿಸಿ 2... ಕುಟುಂಬಗಳನ್ನು ಬೀದಿಗೆ ಬಿಸಾಕಿತ್ತು, ಗುಡಿಸಲುಗಳ ಮ... ಬುಲ್ಡೋಜರ್ ಹರಿಸಲಾಗಿತ್ತು. ಸೆಕ್ಸ್ ಪ್ರವಾಸೋದ್ಯ... ಕುಪ್ರಸಿದ್ಧವಾಗಿರುವ ಗೋವಾ ಕನ್ನಡಿಗರ ಮ... ಅಂಥದೊಂದು ಆಕ್ಷೇಪ ವ್ಯಕ್ತಪಡಿಸಿದ್ದೇ ಹಾಸ್ಯಾಸ್ಪದವಾಗಿ... ಹಿಡನ್ ಉದ್ದೇಶಕ್ಕೆ ಪಾಪದವರನ್ನು ಬಲಿ ಪಡೆದಾಗಿ...

ಅದಾದ ಬರೋಬ್ಬರಿ ಹತ್ತು ವರ್ಷದ ಬಳಿಕ ವಲ... ಕನ್ನಡಿಗರ ಮೇಲೆ ಗೋವಾದ ಅಧಿಕಾರಸ್ಥರ ಕೆಂಗ... ಬತ್ತು. 2014ರಲ್ಲಿ ಸುರಿವ ಮಳೆಯಲ್ಲೇ 75 ಮನೆಗಳ... ನೆಲಸಮ ಮಾಡಿತ್ತು ಗೋವಾದ ಆಡಳಿತಯಂತ್ರ. ಅಂ... ದವಸ-ಧಾನ್ಯ, ಬಟ್ಟೆ-ಬರೆ, ಪಾತ್ರೆ ಪಗಡಿ, ಮಕ್ಕಳ ಪು... ಪಾಟಿಗಳನ್ನೆಲ್ಲ ಮಣ್ಣು ಪಾಲು ಮಾಡಿ ಗೋವಾದ ಪಾರಿ... ಸರ್ಕಾರ ತಾಂಡವ ನೃತ್ಯ ನಡೆಸಿದ ಪರಿ ಇತಿಹಾ... ಪುಟಗಳಲ್ಲಿ ಅಚ್ಚಳಿಯದಂತೆ ದಾಖಲಾಗಿಹೋಗಿ... ಸುಮಾರು ಮೂರು ತಿಂಗಳ ಹಿಂದೆ ಮತ್ತೆ ದ್ವೇಷದಿ... ಕನ್ನಡಿಗರ ಮೇಲೆರಗಿದ ಗೋವಾ ಪ್ರಭುತ್ವ 51 ಮನೆಗಳ... ಧ್ವಂಸ ಮಾಡಿತ್ತು, ಆಗೆಲ್ಲ ನಿರಾಶ್ರಿತ ಮಂದಿ ಅ... ನೀರು-ಬಟ್ಟೆ ಆಶ್ರಯಕ್ಕಾಗಿ ತಡಕಾಡಿದ ಪರಿ

▶▶ 19





ಅನ್ನಭಾಗ್ಯ ಮತ್ತು ಹಸಿವಿನ ಅರ್ಥಶಾಸ್ತ್ರ



ಅನ್ನಭಾಗ್ಯ ಯೋಜನೆಯ ಕುರಿತು ಸಾಹಿತಿ ಭೈರಪ್ಪ ಂತಹ ಯೋಜನೆಗಳು ದೇಶವನ್ನು ನಾಶಮಾಡುತ್ತವೆ. ಟ್ಟಿಯಾಗಿ ದೊರಕುವ ಆಹಾರ ಜನರನ್ನು ೋಂಭೇರಿಗಳನ್ನಾಗಿಸುತ್ತದೆ. ಇಂತಹ ವೋಟ್ ಬ್ಯಾಂಕ್ ಜಕೀಯ ಮಾಡುವ ಬದಲು ಸರಕಾರ ಉದ್ಯೋಗಗಳನ್ನು ಷ್ಟಿಸಬೇಕು; ಜನರು ದುಡಿದು ತಿನ್ನುವುದನ್ನು ಸರಕಾರ ಲಿಸಬೇಕು" ಎಂದು ಇತ್ತೀಚೆಗೆ ಚಿಕ್ಕಮಗಳೂರಿನಲ್ಲಿ ಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಸಾಕಷ್ಟು ರ್ಚೆಗೂ ಕಾರಣವಾಗಿದ್ದು ಆ ಬಗ್ಗೆ ತನ್ನ ನಿಲುವನ್ನು ಷ್ಟಪಡಿಸಲು ಭೈರಪ್ಪ ಒಂದು ಪತ್ರಿಕಾ ಹೇಳಿಕೆಯನ್ನು ಸ ಕೊಟ್ಟಿದ್ದಾರೆ. ಆ ಹೇಳಿಕೆಯ ಪೂರ್ಣ ಪಾಠವನ್ನು ಡಿನ ಹೆಚ್ಚಿನ ದಿನ ಪತ್ರಿಕೆಗಳು ಜುಲೈ 9 ರ ತಮ್ಮ ಚಿಕೆಯ ಮುಖಪುಟದಲ್ಲೇ ಪ್ರಕಟಿಸಿವೆ. ಅನ್ನ ಭಾಗ್ಯ ೋಜನೆ ರಾಜ್ಯಕ್ಕೆ ಹೇಗೆ ವಿನಾಶಕಾರಿ ಎಂದು ತೋರಿಸಲು ನ್ನ ಹೇಳಿಕೆಯಲ್ಲಿ ಭೈರಪ್ಪ ಕೊಡುವ ನಿದರ್ಶನಗಳಲ್ಲಿ ವು ವಿರೋಧಾಭಾಸದಿಂದ ಕೂಡಿರುವಂತಹವು; ಇನ್ನು ವು, ಕರ್ನಾಟಕಕ್ಕೆ ಕಿಂಚಿತ್ತೂ ಲಗಾವಾಗದಂತಹವು. ದಾಹರಣೆಗೆ ಪ್ರಜೆಗಳಿಗೆ ಪುಕ್ಕಟೆಯಾಗಿ ಆಹಾರ ಧಾನ್ಯ ಂಚುವ ಬದಲು, ಅವರಿಗೆ ಉದ್ಯೋಗ ಕಲ್ಪಿಸಿ, ಆ ಮುಖಾಂತರ ಕೊಳ್ಳುವ ಸಾಮರ್ಥ್ಯ ನೀಡಬೇಕು ಎಂದು ತಿಪಾದಿಸಲು ಇಂಗ್ಲೆಂಡ್‌ನ ಲೋಕಖ್ಯಾತ ಅರ್ಥಶಾಸ್ತ್ರಜ್ಞ ಎಂ. ಕೇನ್ಸ್ ತನ್ನ ಕಾಲದ ಆರ್ಥಿಕ ಹಿಂಜರಿತಕ್ಕೆ ಸೂಚಿಸಿದ ರಿಹಾರಗಳನ್ನು ಭೈರಪ್ಪ ನಮ್ಮ ಮುಂದಿಡುತ್ತಾರೆ. ಪ್ರಥಮ ಹಾ ಯುದ್ಧದ ನಂತರ ಪಶ್ಚಿಮದ ದೇಶಗಳಲ್ಲಿ ಲೆದೋರಿದ ತೀವ್ರ ನಿರುದ್ಯೋಗ ಕುಸಿದ ಬೇಡಿಕೆ ಮತ್ತು ತಗೊಂಡ ಉತ್ಪಾದನೆ ಇದೆಲ್ಲದರ ಪರಿಣಾಮವಾಗಿ ನ್ನಷ್ಟು ನಿರುದ್ಯೋಗ – ಆರ್ಥಿಕ ಹಿಂಜರಿತದ ಈ ಣೆ ವಿದ್ಯಮಾನವನ್ನು ತಡೆಗಟ್ಟಲು ಸರಕಾರ ಸಾರ್ವಜನಿಕ ವಾ ಸೌಲಭ್ಯ ಮತ್ತು ರಸ್ತೆ ಶಾಲೆ ಆಸ್ಪತ್ರೆ ಇತ್ಯಾದಿಗಳ ಮಗಾರಿಗಳಲ್ಲಿ ದೊಡ್ಡ ಪ್ರಮಾಣದ ಬಂಡವಾಳ ಡಗಿಸಬೇಕು. ಬಂಡವಾಳವಿಲ್ಲದಿದ್ದರೆ, ನೋಟು ಪ್ರಿಂಟು ಡಿಯಾದರೂ ಬಂಡವಾಳ ಸೃಷ್ಟಿಸಿ ಜನರಿಗೆ ಉದ್ಯೋಗ ಡಬೇಕು ; ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು. ದರಿಂದ ಬೇಡಿಕೆ ಕುದುರಿ ಉತ್ಪಾದನೆಯಲ್ಲಿ ಹೆಚ್ಚಳವಾಗಿ ಾರುಕಟ್ಟೆ ಚೇತರಿಸಿಕೊಳ್ಳುತ್ತದೆ; ಅರ್ಥ ವ್ಯವಸ್ಥೆ ಸರಿ ರಿಗೆ ಬರುತ್ತದೆ ಎಂದು ಕೇನ್ಸ್ ಸಲಹೆ ನೀಡಿದ. ನರಿಗೆ ಸರಕಾರ ಕೆಲಸ ಕೊಡಲಿ. ಯಾವ ಕೆಲಸವೂ ಲ್ಲದೆ ಇದ್ದರೆ ಸರಕಾರ ಜನರಿಗೆ ಒಂದು ಗುಂಡಿ ತೋಡಲು ಳಿ ನಂತರ ಆ ಗುಂಡಿಯನ್ನು ಅದೇ ಜನರಿಂದ ಮುಚ್ಚಿಸಲಿ ಂದು ಕೇನ್ಸ್ ಹೇಳಿದ್ದನ್ನು ಭೈರಪ್ಪ ರಾಜ್ಯ ಸರಕಾರದ ನ್ನಭಾಗ್ಯ ಯೋಜನೆಯ ವಿರುದ್ಧ ಒಂದು ವಾದವೆಂಬಂತೆ ಂಡಿಸುತ್ತಾರೆ. ಆದರೆ ಕೇನ್ಸ್ ಸರಕಾರವೇ ಹಣದುಬ್ಬರದ ಮುಖಾಂತರವಾದರೂ ಬಂಡವಾಳ ಹೂಡಿ ಉದ್ಯೋಗ ರ್ಮಾಣ ಮಾಡಲಿ; ಖಾಸಗೀ ಬಂಡವಾಳಶಾಹಿ ಹತ್ತಿರ ಡಾ ಸುಳಿಯದ ಸಾರ್ವಜನಿಕ ಸೇವಾ ಸೌಲಭ್ಯಗಳ ರ್ಮಾಣದಲ್ಲಿ ನಿರುದ್ಯೋಗಿಗಳನ್ನು ತೊಡಗಿಸಲಿ ಎಂಬ ನ್ನ ಪ್ರತಿಪಾದನೆಗೆ ಜನರಿಂದ ಗುಂಡಿ ತೋಡಿಸಿ ನಂತರ ದನ್ನು ಮುಚ್ಚಿಸುವ ಉದಾಹರಣೆ ಕೊಟ್ಟಿದ್ದ. ಅವನು ತ್ತು ಕೊಟ್ಟಿದ್ದು ಸರಕಾರದ ಬಂಡವಾಳ ಹೂಡಿಕೆಗೆ. ದರೆ ಸರಕಾರದ ಈ ಬಗೆಯ ನಡು ಪ್ರವೇಶವನ್ನು ೈರಪ್ಪ ಯಾವತ್ತೂ ಬೆಂಬಲಿಸಿದವರಲ್ಲ. ಅದೂ ಸಾಲದ್ದಕ್ಕೆ ಾಸಗೀ ಉದ್ಯಮಗಳ ಸರಕಾರೀಕರಣ ಮತ್ತು ಸರಕಾರದ ಯಂತ್ರಣಗಳನ್ನು ಸದಾ ಅವರು ವಿರೋಧಿಸುತ್ತಾ ಂದಿದ್ದಾರೆ. ಹೀಗಿರುತ್ತ ಅವರು ಸರಕಾರವೇ ನಿರುದ್ಯೋಗ ಮಸ್ಯೆಯನ್ನು ಪರಿಹರಿಸಲು ಹಣ ತೊಡಗಿಸುವುದನ್ನು ಂಬಲಿಸುತ್ತಾರೆಯೇ? ಸರಕಾರದ ಈ ಬಗೆಯ ಬಂಡವಾಳ ೂಡಿಕೆಗೆ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ರಕಾರ ಜಾರಿಗೆ ತಂದ ಮಹಾತ್ಮಗಾಂಧಿ ಸ್ಮಾರಕ, ಕನಿಷ್ಠ ೂಲಿ ಯೋಜನೆ – ನರೇಗಾ ಒಂದು ಉತ್ತಮ ದಾಹರಣೆ. ಹಾಲಿ ಪ್ರಧಾನಿ ನರೇಂದ್ರ ಮೋದಿಯವರು ಈ ಯೋಜನೆಯನ್ನು ಕಾಂಗ್ರೆಸ್ ಪಕ್ಷದ 60 ವರ್ಷಗಳ ದಕ್ಷ ಆಳ್ವಿಕೆಯ ಸ್ಮಾರಕ ಎಂದು ಜರಿದರು. ಹಲವು ಂತಕರು ಯಥಾಪ್ರಕಾರ ಈ ಯೋಜನೆಯನ್ನೂ ವೋಟ್ ್ಯಾಂಕ್ ರಾಜಕೀಯ ಎಂದು ಹೀಗಳೆದರು. ಖಾಸಗೀ ಂಡವಾಳದ ಪರವಾಗಿ ವಾದಿಸುವ ಎಲ್ಲರ ಅಭಿಪ್ರಾಯವೂ ದೇ. ಭೈರಪ್ಪನವರು ಕೂಡಾ ಹೀಗೆಯೇ ಯೋಚಿಸುವವರು. ಿಪಿಎಲ್ ಕಾರ್ಡುದಾರರಿಗೆ ಪುಕ್ಕಟೆ ಪಡಿತರ ಕೊಡುವ ್ರಶ್ನೆ ಬಂದಾಗ ಮಾತ್ರ, ಅವರಿಗೆ ಸರಕಾರವೂ ರ್ಥವ್ಯವಸ್ಥೆಯೊಳಗೆ ಪ್ರವೇಶಿಸಿ ಉದ್ಯೋಗ ಸೃಷ್ಟಿಸಲಿ ದ್ದ, ಎಂದು ನೆನಪಾಗುವುದಲ್ಲವೆ?

ಸಿದ್ದರಾಮಯ್ಯನವರಿಗೆ ಕೇನ್ಸ್‌ನ ಅರ್ಥಶಾಸ್ತ್ರವನ್ನು ಬೋಧಿಸುವ ಭೈರಪ್ಪನವರಿಗೆ ಅನ್ನಭಾಗ್ಯ ಯೋಜನೆಯನ್ನು ಖಂಡಿಸುವ ಭರದಲ್ಲಿ ಕೇನ್ಸ್ ಹೇಳಿದ ಲೋಕಪ್ರಸಿದ್ಧವಾದ ಮತ್ತೊಂದು ಮಾತು ಮರೆತುಹೋಗಿದೆ. ದೀರ್ಘ ಕಾಲಾವಧಿಯಲ್ಲಿ ನಾವೆಲ್ಲರೂ ಸತ್ತು ಹೋಗಿರುತ್ತೇವೆ – **"In the long run we are all dead"** ಎಂದು ಕೇನ್ಸ್ ಹೇಳಿದ. ಕೇನ್ಸ್ ಎಡ ಪಂಥೀಯನಲ್ಲ; ಆದರೆ ತಕ್ಷಣ ಹಣ ತೊಡಗಿಸಿ ಉದ್ಯೋಗಗಳನ್ನು ಸೃಷ್ಟಿಸುವುದು ಸರಕಾರಕ್ಕೆ ಮಾತ್ರ ಸಾಧ್ಯ ಎಂಬ ಸತ್ಯ ಅವನಿಗೆ ಮನವರಿಕೆಯಾಗಿತ್ತು. ಇಂಗ್ಲೆಂಡ್ ಆ ವೇಳೆಗಾಗಲೇ ಕೈಗಾರಿಕಾ ಪ್ರಧಾನ ರಾಷ್ಟ್ರವಾಗಿದ್ದು ಕೇನ್ಸ್‌ನ ಸಲಹೆಗಳು ಆ ಕಾಲಘಟ್ಟದ ಇಂಗ್ಲೆಂಡ್ ಮತ್ತು ಇತರ ಕೈಗಾರಿಕಾ ರಾಷ್ಟ್ರಗಳು ಎದುರಿಸುತ್ತಿದ್ದ ಆರ್ಥಿಕ ಬಿಕ್ಕಟ್ಟಿಗೆ ಸೂಕ್ತವಾಗಿದೆ. ಕರ್ನಾಟಕದ ಅರ್ಥ ವ್ಯವಸ್ಥೆ ಆ ಬಗೆಯದ್ದಲ್ಲ. ರಾಜ್ಯದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ವಹಿಸಿದ ಮುತುವರ್ಜಿಯಿಂದಾಗಿ ಬೆಂಗಳೂರಿನಲ್ಲಿ ಐಟಿ ಉದ್ಯಮ ಬೆಳೆದು ನಗರವು ಸಿಲಿಕಾನ್ ವ್ಯಾಲಿ ಎಂದು ಕರೆಸಿಕೊಂಡದ್ದನ್ನು ಭೈರಪ್ಪ ಮನ ತುಂಬಿ ಹೊಗಳುತ್ತಾರೆ. ಈ ಉದ್ಯಮ ಹುಟ್ಟು ಹಾಕಿದ ಆರ್ಥಿಕ ಬೆಳವಣಿಗೆಯನ್ನು ಭೈರಪ್ಪ ಹಲವು ಉದಾಹರಣೆಗಳ ಮುಖಾಂತರ ವಿವರಿಸುತ್ತಾರೆ. ಇವೆಲ್ಲಾ ನಿಜವೇ ಆದರೂ ಕರ್ನಾಟಕದ ಬಡತನ ಮತ್ತು ಅಸಮಾನತೆಗಳನ್ನು ಪರಿಹರಿಸುವಲ್ಲಿ ಐಟಿ ಉದ್ಯಮ ಎಷ್ಟರಮಟ್ಟಿಗೆ ಸಫಲವಾಗಿದೆ? ಆ ಪ್ರಯತ್ನವನ್ನಾದರೂ ಅದರಿಂದ ನಿರೀಕ್ಷಿಸಬಹುದೇ? ಐಟಿ ಉದ್ಯಮ ಮಾತ್ರವಲ್ಲ, ಯಾವುದೇ ಉದ್ಯಮಕ್ಕೂ ಇಂತಹ "ಅಭಿವೃದ್ಧಿಯ ಹರಡುವಿಕೆ"ಯ ಪರಿಣಾಮವಿರುತ್ತದೆ. **1947** ರ ನಂತರ ಭಾರತದಲ್ಲಿ ಕಾರ್ಯಗತಗೊಂಡ ಎಲ್ಲ ಅಭಿವೃದ್ಧಿ ಯೋಜನೆಗಳ ಬಗೆಗೂ ಭೈರಪ್ಪನವರ ಮಾತನ್ನೇ ಅನ್ವಯಿಸಬಹುದು. ಈ ಯೋಜನೆಗಳು ದೊಡ್ಡ ಪ್ರಮಾಣದಲ್ಲಿ ಸಂಪತ್ತನ್ನೂ, ಉದ್ಯೋಗಗಳನ್ನೂ ಸೃಷ್ಟಿಸಿವೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅಭಿವೃದ್ಧಿಯ ಈ ಮಾದರಿ ದೇಶದ ಬಡವರಿಗೆ – ಅದರಲ್ಲೂ ಬಡರೈತರು ಆದಿವಾಸಿಗಳು ಗ್ರಾಮೀಣ ಕಸುಬುದಾರರು ಮುಂತಾದ ಮೊದಲೇ ದುರ್ಬಲರಾದ ಜನರಿಗೆ – ತಂದೊಡ್ಡಿರುವ ಸಂಕಷ್ಟಗಳನ್ನೂ, ಸೃಷ್ಟಿಸಿರುವ ಅಸಮಾನತೆಯನ್ನೂ ಭೈರಪ್ಪ ಲೆಕ್ಕಕ್ಕೆ ತೆಗೆದುಕೊಂಡ ಹಾಗಿಲ್ಲ. ಬೆಂಗಳೂರಿನ ಐಟಿ ಉದ್ಯಮದ ಜೊತೆ ತನ್ನ ಪತ್ರಿಕಾಹೇಳಿಕೆಯಲ್ಲಿ ಭೈರಪ್ಪ ಕೊಡುವ ಇನ್ನೊಂದು ಉದಾಹರಣೆ ರಾಜ್ಯ ಸರಕಾರದ ಧೋರಣೆಯಿಂದಾಗಿ ಬೆಂಗಳೂರಿನಿಂದ ಸೀಮಾಂಧ್ರಕ್ಕೆ ಸ್ಥಳಾಂತರಗೊಂಡ ಹೀರೋ ಕಂಪೆನಿಯದ್ದು. ಆದರೆ ಹೀರೋ ಕಂಪೆನಿಯೂ ಸೇರಿದಂತೆ ಈಗ ತಲೆ ಎತ್ತುತ್ತಿರುವ ಯಾವ ಉದ್ಯಮವೂ ಭೈರಪ್ಪ ನಿರೀಕ್ಷಿಸುವ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸುವುದಿಲ್ಲ. ಅವು ಎಲ್ಲವೂ ಸ್ವಯಂಚಾಲಿತ ಉತ್ಪಾದನಾ ವ್ಯವಸ್ಥೆಗಳನ್ನು ಹೊಂದಿದ್ದು ದೊಡ್ಡ ಸಂಖ್ಯೆಯ ಕೆಲಸಗಾರರನ್ನು ಅವಲಂಬಿಸುವುದಿಲ್ಲ. ಅವು ಮೊದಲಿನಂತೆ ಹೊಸ ಉದ್ಯೋಗಗಳನ್ನೂ ಸೃಷ್ಟಿಸುವುದಿಲ್ಲ. ಉದಾಹರಣೆಗೆ ನಮ್ಮ ಎಲ್ಲ ಊರುಗಳಲ್ಲೂ ಈಗ ವಾಹನಗಳ ಸಂಖ್ಯೆ ವಿಪರೀತ ಹೆಚ್ಚಾಗಿದೆ. ಆದರೆ ಊರಿನ ಮೂಲೆ ಮೂಲೆಗಳಲ್ಲೂ ಈ ಮೊದಲು ಕಂಡುಬರುತ್ತಿದ್ದ ಗ್ಯಾರೇಜುಗಳು ಮಾತ್ರ ಈಗ ಜಾಸ್ತಿಯಾಗುವ ಬದಲು ಒಂದೊಂದಾಗಿ ಕಣ್ಮರೆಯಾಗುತ್ತಿವೆ. ರಸ್ತೆಗೆ ಇಳಿಯುವ ಹೊಸ ವಾಹನಗಳಿಗೆ ಈಗ ಗ್ಯಾರೇಜುಗಳ ಅಗತ್ಯವೇ ಇಲ್ಲ. ಅವುಗಳ ಇಂಜಿನ್ ಮೊದಲಿನಂತೆ ಹಲವು ಬಿಡಿ ಭಾಗಗಳ ಒಂದು ಸಾಮಯಿಕ ಜೋಡಣೆಯಲ್ಲ. ಈಗಿನ ವಾಹನಗಳ ಪ್ರತಿಯೊಂದು ಭಾಗವೂ 'ಬಳಸು; ಬಿಸಾಕು' ಸೂತ್ರಕ್ಕೆ ಅನುಗುಣವಾಗಿ ತಯಾರಾದ ಒಂದು ಸ್ವಯಂಪೂರ್ಣ ಘಟಕವಾಗಿದ್ದು ಒಂದೇ ಸ್ಥಾವರದಲ್ಲಿ ಈಗ ಭಾಗಗಳೆಲ್ಲವೂ ಉತ್ಪಾದನೆಯಾಗುತ್ತವೆ. ಹಾಗಾಗಿ ಉಪ ಉದ್ಯಮಗಳ ಹುಟ್ಟಿಗೂ ಇವು ಕಾರಣವಾಗುವುದಿಲ್ಲ. ಮಾನವರಹಿತ ಅಭಿವೃದ್ಧಿಯ ಈ ಹೊಸ ವೈಖರಿ ಮತ್ತು ಸಂಪತ್ತಿನ ಕೇಂದ್ರೀಕರಣಗಳನ್ನು ಭೈರಪ್ಪ ಗಮನಿಸಿದ ಹಾಗಿಲ್ಲ.


ಭೈರಪ್ಪ ತನ್ನ ಆತ್ಮಚರಿತ್ರೆ 'ಭಿತ್ತಿ'ಯಲ್ಲಿ ನಿರೂಪಿಸಿರುವ ಅವರ ಬಾಲ್ಯದ ಬಡತನ, ಹಸಿವು ಮತ್ತು ಅವಮಾನಗಳನ್ನು ನೆನಪಿಸಿಕೊಂಡು ಅನ್ನಭಾಗ್ಯ ಯೋಜನೆಯನ್ನು ಖಂಡಿಸಲು ಭೈರಪ್ಪನವರಿಗೆ ಅವರ ಅನುಭವ ಒಂದು ಅಧಿಕೃತತೆಯನ್ನು ಒದಗಿಸುತ್ತದೆ ಎಂದು ಹಲವರು ಈಗ ವಾದಿಸುತ್ತಿದ್ದಾರೆ. ಆದರೆ ಭೈರಪ್ಪ ತಾನು ಹಿಂದೆ ಅನುಭವಿಸಿದ ಬಡತನ ಈಗ ಅನ್ನಭಾಗ್ಯ ಯೋಜನೆಯ ಕುರಿತು ಮಾತಾಡಲು ತನಗೆ ಅರ್ಹತೆ ನೀಡುತ್ತದೆ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ. ಬಡತನ ಮತ್ತು ಹಸಿವು ದೈವದತ್ತವಲ್ಲ. ಅವು ಸಾಮಾಜಿಕ ಸಮಸ್ಯೆಗಳಾಗಿದ್ದು ಅವುಗಳ ಪರಿಹಾರವನ್ನೂ ಸಮಾಜದ ಸಂರಚನೆಯಲ್ಲೇ ಕಂಡುಕೊಳ್ಳಬೇಕು. ಹಸಿವೆಯ ಸಮಸ್ಯೆಯ ವಿವಿಧ ಆಯಾಮಗಳನ್ನು ಅರಿಯಲು ಹಸಿವನ್ನು ಖುದ್ದು ಅನುಭವಿಸಿಯೇ ಗೊತ್ತಿರಬೇಕು ಎಂದೇನೂ ಇಲ್ಲ. ವೈಯಕ್ತಿಕ ಅನುಭವ ಅರ್ಥಶಾಸ್ತ್ರಕ್ಕೆ ಸಮ್ಮತವಾದ ಒಂದು ಪ್ರಮಾಣವೂ ಅಲ್ಲ. ಮಾರುಕಟ್ಟೆಯಲ್ಲಿ ಆಹಾರದ ದಾಸ್ತಾನಿದ್ದರೂ ಅದನ್ನು ಕೊಳ್ಳಲು ಹಣವಿಲ್ಲದೆ ಜನ ಹಸಿದುಕೊಂಡಿರುವುದು, ಆಹಾರದ ಹಕ್ಕು, ಸಾಕಷ್ಟು ವರಮಾನವಿರುವ ಮನೆಗಳಲ್ಲೂ ಹೆಂಗಸರು ಮತ್ತು ಹೆಣ್ಣು ಮಕ್ಕಳು ಹಸಿದುಕೊಂಡಿರುವುದು, ಸಾಂಸ್ಥಿಕ ಬಡತನ, ಅವಿದ್ಯೆ, ಅನಾರೋಗ್ಯ – ಹಸಿವಿನ ಈ ಅರ್ಥಶಾಸ್ತ್ರವನ್ನು ಹಲವು ದಶಕಗಳಿಂದ ಅಧ್ಯಯನ ಮಾಡುತ್ತಿರುವ ಅಮಾರ್ತ್ಯ ಸೆನ್, ಜಾನ್ ಡ್ರಾಜ್, ಪ್ರಭಾತ್ ಪಾಟ್ನಾಯಕ್, ಅವರ ಪತ್ನಿ ಉತ್ಸ ಪಾಟ್ನಾಯಕ್, ಜಯತಿ ಘೋಷ್, ನಮ್ಮವರೇ ಆದ ಕೆ. ನಾಗರಾಜ್ – ಈ ಅರ್ಥಶಾಸ್ತ್ರಜ್ಞರಲ್ಲಿ ಯಾರೂ ನನಗೆ ಗೊತ್ತಿರುವ ಮಟ್ಟಿಗೆ ತಮ್ಮ ಬಾಲ್ಯದಲ್ಲಿ ಹಸಿದುಕೊಂಡಿದ್ದವರಲ್ಲ. ಈ ಹಿನ್ನೆಲೆಯಲ್ಲಿ ಹಸಿವು ಎಂದರೆ ಏನು ಎಂದು ಭೈರಪ್ಪನವರಿಗೆ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಹೇಳಿರುವುದರಲ್ಲಿ ತಪ್ಪೇನೂ ಇಲ್ಲ. ಮೇಲೆ ಹೇಳಿದ ಎಲ್ಲ ಅರ್ಥಶಾಸ್ತ್ರಜ್ಞರೂ ತೀವ್ರ ಬಡತನ, ದಾರುಣ ಹಸಿವು, ಬಡವರ ಆರೋಗ್ಯ ಮತ್ತು ಶಿಕ್ಷಣ ಮುಂತಾದ ಈ ಕ್ಷಣದ ಸಮಸ್ಯೆಗಳನ್ನು ಈ ಕ್ಷಣವೇ ಬಗೆಹರಿಸಲು ಸರಕಾರವೇ ಮಧ್ಯಪ್ರವೇಶಿಸಬೇಕು ಎಂದು ಪ್ರತಿಪಾದಿಸುವವರು.

ಭೈರಪ್ಪ ತಮ್ಮ ಪತ್ರಿಕಾಹೇಳಿಕೆಯಲ್ಲಿ ಮೈಸೂರಿನ ಒಂದು ಹೇರ್ ಕಟ್ಟಿಂಗ್ ಸೆಲೂನ್‌ನ ಮಾಲಕರನ್ನು ಉದಾಹರಿಸಿ, ಅನ್ನಭಾಗ್ಯ ಯೋಜನೆ ಬಂದ ಮೇಲೆ ಆ ಸೆಲೂನಿನ ಮೂವರು ಕೆಲಸಗಾರರು ಸೋಮಾರಿಗಳಾಗಿ ಕೆಲಸಕ್ಕೆ ಬರುತ್ತಿಲ್ಲ ಎಂದು ತಿಳಿಸುತ್ತಾರೆ. ಈ ಉದಾಹರಣೆ ಅರ್ಥಶಾಸ್ತ್ರಕ್ಕೆ ಒಪ್ಪಿಗೆಯಾಗುವ ಸಾಕ್ಷ್ಯಾಧಾರವಾಗುವುದು ಸುತಾರಾಂ ಸಾಧ್ಯವಿಲ್ಲ. ಯಾಕೆಂದರೆ, ಇದಕ್ಕೆ ವ್ಯತಿರಿಕ್ತವಾದ ನೂರಾರು ಉದಾಹರಣೆಗಳನ್ನು ಪ್ರತಿ ಊರಿನಿಂದಲೂ ಹೆಕ್ಕಿಕೊಡಬಹುದು. ಶಾಸ್ತ್ರ ಸಮ್ಮತವಾದ ಕ್ಷೇತ್ರ ಸಮೀಕ್ಷೆಯ ಆಧಾರವಿಲ್ಲದ ವ್ಯಕ್ತಿಗತ ಅನುಭವಗಳನ್ನಾಗಲೀ, ಅನ್ನಿಸಿಕೆಗಳನ್ನಾಗಲೀ ಯಾವ ಜ್ಞಾನಶಾಖೆಯೂ ಮನ್ನಿಸುವುದಿಲ್ಲ. ಭೈರಪ್ಪ ಇದು ಗೊತ್ತಿಲ್ಲದವರೇನೂ ಅಲ್ಲ. ಅವರು ಹೇಳುವ ಮೈಸೂರಿನ ಸೆಲೂನ್‌ನ ಮಾಲಕರ ಹಾಗೆ ಕರಾವಳಿ ಮತ್ತು ಮಲೆನಾಡಿನ ಗದ್ದೆತೋಟಗಳ ದಣಿಗಳು, ತಮ್ಮ ಜಮೀನಿನ ಕೆಲಸಕ್ಕೆ ಈಗ ಕೂಲಿಯಾಳುಗಳೇ ಸಿಗುತ್ತಿಲ್ಲ ಎಂದು ದೂರುತ್ತಾರೆ. ಕೂಲಿಯಾಳುಗಳನ್ನು ಕೇಳಿದರೆ "ಅವರ ಜಮೀನಿನಲ್ಲಿ ನೆಟ್ಟಿಯ ಕೆಲವು ದಿನ, ಕ್ಯೊಲಿನ ಕೆಲವು ದಿನ, ನಾವು ಉಂಡರೆ ಸಾಕಾ? ಇವರ ಗದ್ದೆ ತೋಟಗಳಲ್ಲಿ ದುಡಿಯುವುದಕ್ಕಾದರೂ ನಾವು ನಮ್ಮ ಹೆಂಡಿರ ಮಕ್ಕಳು ವರ್ಷದ **365** ದಿನ ಉಣ್ಣಬೇಡವಾ? ಬರೇ ಉಂಡರೆ ಸಾಕಾ? ಉಣ್ಣುವುದಕ್ಕಾದರೂ ದಣಿಗಳು ನಮಗೆ ಕೊಡುವ ಸಂಬಳ ಸಾಕಾ?" ಎಂದು ಕೇಳಿಯಾರು. ಈ ಪ್ರಶ್ನೆಗೆ ನಿಮ್ಮ ಉತ್ತರ ಏನು? ಎಂದು ಯಾರೂ ಯಾರನ್ನೂ ಕಟಕಟೆಯಲ್ಲಿ ನಿಲ್ಲಿಸಿ ಕೇಳಬಾರದು. ಈ ಸವಾಲಿಗೆ ಉತ್ತರ ನೀಡುವ ಜವಾಬ್ದಾರಿ ಇರುವುದು ಸರಕಾರಕ್ಕೆ ಮಾತ್ರ. ಆದರೆ ಭೈರಪ್ಪ ಸರಕಾರದ ಈ ಜವಾಬ್ದಾರಿಯನ್ನೇ ಮನ್ನಿಸುವುದಿಲ್ಲ. ತಮ್ಮ ವಾದದ ಸಮರ್ಥನೆಗೆ ಭೈರಪ್ಪ ಕೊಡುವ ಮೈಸೂರಿನ ಸೆಲೂನಿನಂತಹ ಉದಾಹರಣೆಗಳು ಈ ಬಗೆಯ ಪ್ರಶ್ನೆಗಳಿಗೆ ಆಸ್ಪದವನ್ನೇ ನೀಡುವುದಿಲ್ಲ. ಭೈರಪ್ಪನವರ ಉದಾಹರಣೆ ವಾದದಲ್ಲಿ ಎದುರಾಳಿಯ ಬಾಯಿ ಮುಚ್ಚಿಸುವ ಪ್ರತಿವಾದಿ ಭಯಂಕರ ತಂತ್ರವೇ ಹೊರತು ಬೇರೇನೂ ಅಲ್ಲ. ಶಾಸ್ತ್ರದ ಪ್ರತಿಪಾದನೆಗೆ ಶಾಸ್ತ್ರ ಸಮ್ಮತ ಪ್ರಮಾಣಗಳೇ ಬೇಕು ಎಂದು ಹಟ ಹಿಡಿಯುವುದು ಈ ಬಗೆಯ ವಿತಂಡವಾದವನ್ನು ನೀಗಿಸಿಕೊಳ್ಳುವುದಕ್ಕೆ. ಆದರೆ ಭೈರಪ್ಪ ತನ್ನ ವಾದದಲ್ಲಿ ಅರ್ಥಶಾಸ್ತ್ರದ ಶಿಸ್ತು ಪಾಲಿಸುವವರಲ್ಲ. ಭೈರಪ್ಪ ಮಾಡುವ ಇನ್ನೊಂದು ಆಪಾದನೆ ಅನ್ನಭಾಗ್ಯ ಯೋಜನೆ ವೋಟ್ ಬ್ಯಾಂಕ್ ರಾಜಕೀಯದ ತಂತ್ರ ಎಂಬುದಾಗಿದೆ. ಈ 'ವೋಟ್ ಬ್ಯಾಂಕ್ ರಾಜಕೀಯ' ಎಂಬ ಬೈಗುಳದ ಹಾಗೆ ಕೇಳಿಸುವ ರಾಜಕೀಯದ ಗುಣಲಕ್ಷಣಗಳೇನು? ಅದರ ನಿರ್ವಚನವೇನು? ನಮಗೆ ವೈಯಕ್ತಿಕವಾಗಿ ಇಷ್ಟವಾಗದ ಆದರೆ ಜನಬೆಂಬಲವಿದೆ ಎಂದು ನಾವು ಗುಮಾನಿ ಪಡುವ ಎಲ್ಲ ರಾಜಕೀಯ ನಡೆಗಳನ್ನೂ ನಾವು 'ವೋಟ್ ಬ್ಯಾಂಕ್ ರಾಜಕೀಯ' ಎಂದೇ ಕರೆಯುತ್ತ ಬಂದಿರುವುದಲ್ಲವೆ? ಹಾಗೆ ನೋಡಿದರೆ ಎಲ್ಲಾ ರಾಜಕೀಯ ಪಕ್ಷಗಳೂ ಮಾಡುವುದು ವೋಟ್ ಬ್ಯಾಂಕ್ ರಾಜಕೀಯವನ್ನೇ ಅಲ್ಲವೇ? ಅನ್ನಭಾಗ್ಯ ಯೋಜನೆ ಸಿದ್ದರಾಮಯ್ಯನವರ ವೋಟ್ ಬ್ಯಾಂಕ್ ರಾಜಕೀಯ ಎಂದೇ ಇಟ್ಟುಕೊಳ್ಳೋಣ. ಏನೀಗ? ಚುನಾವಣೆ ಗೆಲ್ಲುವುದಕ್ಕೋಸ್ಕರ ಮಸೀದಿ ಉರುಳಿಸುವುದು, ನರಹತ್ಯೆ ನಡೆಸುವುದು, ತರುಣಿಯರ ಮಾನ ತೆಗೆಯುವ ಲವ್ ಜಿಹಾದ್‌ನಂತಹ ಸುಳ್ಳು ಪಳ್ಳು ಹೇಳಿ ಊರಿಗೆ ಬೆಂಕಿ ಕೊಡುವುದು – ಇವೇ ಮೊದಲಾದ ಘನಂದಾರಿ ಕೆಲಸಗಳಿಗಿಂತ ಸಿದ್ದರಾಮಯ್ಯನವರ ಅನ್ನಭಾಗ್ಯ ಯೋಜನೆ ಹೆಚ್ಚು ಘನತೆಯ ವೋಟ್ ಬ್ಯಾಂಕ್ ರಾಜಕೀಯ.

ಭೈರಪ್ಪನವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸುವ ಪ್ರಕಾರ ಅನ್ನ ಭಾಗ್ಯದ ಕುರಿತು ಚಿಕ್ಕಮಗಳೂರಿನಲ್ಲಿ ತಾವು ಹೇಳಿದ್ದನ್ನು ಆರ್ಥಿಕ ತಜ್ಞರು ವಿಶ್ಲೇಷಿಸಬೇಕಾಗಿತ್ತು; "ಆದರೆ ಪ್ರತಿಕ್ರಿಯಿಸುತ್ತಿರುವವರು ದೊಡ್ಡ ಗಂಟಲಲ್ಲಿ ಅರಚುತ್ತ ನನ್ನ ಬಗ್ಗೆ ವೈಯಕ್ತಿಕ ನಿಂದನೆ ಮಾಡುತ್ತ ಆಳುವ ಧಣಿಗಳ ಬಂಟರಂತೆ ವರ್ತಿಸುತ್ತಿದ್ದಾರೆ" ಎಂದಿದ್ದಾರೆ. ಅರ್ಥಶಾಸ್ತ್ರಜ್ಞರು ಭೈರಪ್ಪನವರದ್ದು ತಮ್ಮ ಶಾಸ್ತ್ರಕ್ಕೆ ಸಂಬಂಧಿಸಿದ ಚಿಂತನೆ ಎಂದು ಭಾವಿಸುವುದು ಸಂದೇಹದ ಮಾತು. ತಮ್ಮದು ಅರ್ಥಶಾಸ್ತ್ರದ ಚಿಂತನೆ ಎಂದು ಭೈರಪ್ಪ ಹೇಳಿಕೊಂಡರೆ ಅವರ ವಾಕ್ ಸ್ವಾತಂತ್ರ್ಯವನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ ಭೈರಪ್ಪನವರ ನಿಲುವನ್ನ ಟೀಕಿಸುವುದೇ ಅವರಿಗೆ ತಮ್ಮ ನಿಂದನೆಯ ಹಾಗೆ ಕೇಳಿದರೆ ನಾವಾದರೂ ಏನು ಮಾಡಬಹುದು? ತನ್ನ ಹೇಳಿಕೆಯಲ್ಲಿ ಭೈರಪ್ಪ ಅನ್ನಭಾಗ್ಯವನ್ನು ಸಮರ್ಥಿಸುವವರು ಆಳುವ ಪಕ್ಷದ ಬಂಟರು ಎಂದು ಹೇಳುತ್ತಾರೆ. ಆಳುವ ಪಕ್ಷವೆಂದರೆ ಅವರ ಮನಸ್ಸಿನಲ್ಲಿರುವುದು ರಾಜ್ಯದಲ್ಲಿ ಆಳುವ ಪಕ್ಷವೇ ಹೊರತು ಕೇಂದ್ರದ ಎನ್.ಡಿ.ಎ ಒಕ್ಕೂಟವಲ್ಲ. ಅವರ ಮಾತನ್ನು ಅವರಿಗೇ ತಿರುಗಿಸಬಹುದು. ರಾಜ್ಯ ಸರಕಾರವನ್ನ ಟೀಕಿಸಿ ಅವರು ಯಾರ ಊಳಿಗವನ್ನು ಮಾಡುತ್ತಿದ್ದಾರೆ ಎಂದು ಸವಾಲು ಹಾಕಬಹುದು. ಆದರೆ ಅದರಿಂದ ಏನು ಸಾಧಿಸಿದ ಹಾಗಾಯಿತು? ಸತ್ಯಾನ್ವೇಷಣೆಯೇ ಎಲ್ಲ ವಾದವಿವಾದಗಳ ಅಂತಿಮ ಗುರಿ ಆದರೆ ಈ ಬಗೆಯ ವಾದವಿವಾದಗಳಿಂದ ಯಾರಿಗೆ ಏನು ಪ್ರಯೋಜನ? ಆದರೆ ಸತ್ಯಾನ್ವೇಷಣೆ ಎಂದೂ ಭೈರಪ್ಪನವರ ಗುರಿಯಾಗಿರಲಿಲ್ಲ. ವಾದದ ಮುಖಾಂತರ ನಿಮ್ಮ ಮನಸ್ಸುಗಳನ್ನು ವಶಪಡಿಸಿಕೊಂಡು ಅಲ್ಲಿ ತನ್ನ ಹಿಂದುತ್ವದ ಬಾವುಟ ಊರುವುದೇ ಅವರ ಏಕಮಾತ್ರ ಉದ್ದೇಶ. ಅನ್ನಭಾಗ್ಯ ಯೋಜನೆಯ ವಿರುದ್ಧ ಅವರು ಕೂಗಾಡುತ್ತಿರುವುದೂ ಅದೇ ಕಾರಣಕ್ಕೆ.

■ ಜಿ. ರಾಜಶೇಖರ್

ರೈತರ 'ಆತ್ಮ'ಗಳ ಮೇಲೆ ಅಂಬಿ 'ಹೈಡ್ರಾಮಾ'



ನರೇಂದ್ರಸ್ವಾಮಿ

ಮಂಡ್ಯ ಜಿಲ್ಲೆ ಸಾಲುಸಾಲು ಸಾವುಗಳ ಸೂತಕದ ಮನೆಯಂತಾಗಿದೆ. ಅನ್ನದಾತ ಎನಿಸಿಕೊಂಡ ರೈತ ಇವತ್ತು ಸಾಲದ ಶೂಲಕ್ಕೆ ಬೆದರಿ ಆತ್ಮಹತ್ಯೆಯ ಹಾದಿ ಹಿಡಿಯುತ್ತಿದ್ದಾನೆ. ಕಬ್ಬನ್ನೇ ತಮ್ಮ ಪ್ರಮುಖ ಬೆಳೆಯನ್ನಾಗಿ ಮಾಡಿಕೊಂಡು, ಸಕ್ಕರೆ ಕಾರ್ಖಾನೆಗಳಿಗೆ ತಮ್ಮ ಜೀವ ಹಿಂಡಿಕೊಳ್ಳುತ್ತಿರುವ ಮಂಡ್ಯದಲ್ಲಂತೂ ರೈತರ ಸರಣಿ ಆತ್ಮಹತ್ಯೆ ಆತಂಕ ಹುಟ್ಟಿಸುವಷ್ಟು ವೇಗವಾಗಿ ಹರಡಿಕೊಳ್ಳುತ್ತಿದೆ. ಜೂನ್ 19ರಿಂದ ಇಲ್ಲಿಯವರೆಗೆ 15ಕ್ಕೂ ಹೆಚ್ಚು ಮಂದಿ ರೈತರು ಪ್ರಾಣ ಕಳೆದುಕೊಂಡಿದ್ದಾರೆಂದರೆ ಪರಿಸ್ಥಿತಿಯ ಗಂಭೀರತೆ ಎಂತದ್ದು ಎಂಬುದರ ಅಂದಾಜು ಸಿಗುತ್ತದೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವ 'ಮಂಡ್ಯದ ಗಂಡು' ಅಂಬರೀಶ್‌ಗೆ ಮಾತ್ರ ರೈತರ ಉಸಾಬರಿಯೇ ಬೇಡವಾದಂತಿದೆ. ಈ ಭಾಗದ ಜನಪ್ರಿಯ (?) ಜನಪ್ರತಿನಿಧಿಯಾಗಿ ಇಂತಹ ಸಂದರ್ಭದಲ್ಲಿ ರೈತರ ನೆರವಿಗೆ ದೌಡಾಯಿಸಬೇಕಿದ್ದ ಅಂಬಿ ತನ್ನ ಪಟ್ಟಾ ಶಿಷ್ಯ ಅಮರಾವತಿ ಚಂದ್ರನ ತಮ್ಮನಿಗೆ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಸ್ಥಾನ ಕೊಟ್ಟಿಲ್ಲ ಅಂತ ವರಾತ ತೆಗೆದು ರಾಜೀನಾಮೆಯ 'ಪೊಲಿಟಿಕಲ್ ಹೈಡ್ರಾಮ' ಶುರು ಹಚ್ಚಿಕೊಂಡಿರೋದು ನಿಜಕ್ಕೂ ದುರದೃಷ್ಟಕರ. ಇದು ರೈತ ಸಮುದಾಯಕ್ಕೆ ಸಚಿವರೊಬ್ಬರು ಮಾಡುತ್ತಿರುವ ಮಹಾಪಮಾನ!


ಮಂಡ್ಯದಲ್ಲಿ ರೈತರ ಸರಣಿ ಆತ್ಮಹತ್ಯೆಗಳು ನಡೆಯುತ್ತಿರುವುದಕ್ಕೆ ಮುಖ್ಯ ಕಾರಣ, ಸಕ್ಕರೆ ಕಾರ್ಖಾನೆಗಳ ರೈತ ವಿರೋಧಿ ನೀತಿಗಳು ಮತ್ತು ರಾಜ್ಯದ ಏಕಮಾತ್ರ ಸರ್ಕಾರಿ ಕಾರ್ಖಾನೆ ಮೈಶುಗರ್ಸ್‌ನ ಅವಸಾನ ಸ್ಥಿತಿ. ಇಡೀ ಮಂಡ್ಯ ಜಿಲ್ಲೆಯ ಉಸ್ತುವಾರಿಯನ್ನು ತನ್ನದಾಗಿಸಿಕೊಂಡಿರುವ ಅಂಬರೀಷ್ ಮನಸ್ಸು ಮಾಡಿದ್ದರೆ, ಮೈಶುಗರ್ಸ್ ಪುನಶ್ಚೇತನಕ್ಕೆ ಒಂದೆರಡು ದಿಟ್ಟ ಹೆಜ್ಜೆ ಇಟ್ಟು ರೈತರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸವನ್ನಾದರು ಮಾಡಬಹುದಿತ್ತು, ಕಡೇಪಕ್ಷ, ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗೆ ಎಡತಾಕಿ ತನ್ನ ಸಾಮಾಜಿಕ ಕಳಕಳಿಯನ್ನಾದರು ತೋರಿಸಿಕೊಳ್ಳಬೇಕಿತ್ತು, ಆದರೆ ಅಂಬಿಗೆ ತನ್ನ ಪಟಾಲಂ ಪ್ರತಿಷ್ಠೆಯ ಮುಂದೆ ರೈತರ ಸರಣಿ ಆತ್ಮಹತ್ಯೆ ಒಂದು ಸಮಸ್ಯೆಯಂತೆಯೇ ಕಾಣಿಸುತ್ತಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನನ್ನು ಕಡೆಗಣಿಸುತ್ತಿದ್ದಾರೆ ಎನ್ನುವ ಬ್ಲಾಕ್‌ಮೇಲ್ ಪತ್ರವನ್ನು ಬೆಳಗಾವಿ ಅಧಿವೇಶನದ ಸಮಯದಲ್ಲೇ ಜಗಜ್ಜಾಹೀರು ಮಾಡಿ ಅಂಬಿ ಬೆಂಗಳೂರಿಗೆ ವಾಪಾಸ್ ಬಂದ ದಿನವೇ ಕೆ.ಆರ್.ಪೇಟೆ ತಾಲ್ಲೂಕಿನ ದೊಡ್ಡತಾರಹಳ್ಳಿಯ ಪ್ರದೀಪ್ ಹಾಗೂ ಮೂಡನಹಳ್ಳಿ ಲೋಕೇಶ್ ಎಂಬ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅಲ್ಲದೆ ಮಂಡ್ಯ ತಾಲ್ಲೂಕಿನ ಎಚ್.ಮಲ್ಲಿಗೆರೆ ಗ್ರಾಮದಲ್ಲಿ ಕಬ್ಬನ್ನು ಆಲೆಮನೆಯವರು ಖರೀದಿ ಮಾಡುತ್ತಿಲ್ಲ, ನಾಲೆಗೆ ನೀರು ಬಂದಿಲ್ಲ ಎಂಬ ಚಿಂತೆಯಲ್ಲಿ ಸುನಂದ, ಕಣ್ಣಮ್ಮ, ಜಯಂತಿ ಹಾಗೂ ಪಾರ್ವತಮ್ಮ ಎಂಬ ನಾಲ್ವರು ಮಹಿಳೆಯರು ತಮ್ಮ ಕಬ್ಬಿನ ಗದ್ದೆಗೆ ಬೆಂಕಿ ಹಚ್ಚಿ ಸಜೀವ ದಹನಕ್ಕೆ ಮುಂದಾದ ಘಟನೆ ನಡೆದಿದ್ದು ಕೂಡಾ ಅವತ್ತೆ, ಇದರ ಬಗ್ಗೆ ಕನಿಷ್ಠ ಸೌಜನ್ಯವೂ ಇಲ್ಲದ ಅಂಬಿ ಬೆಂಗಳೂರಿನ ಜೆಪಿ ನಗರದ ತನ್ನ ಐಷಾರಾಮಿ ಬಂಗಲೆಯಲ್ಲಿ ಮಂಡ್ಯದ ತನ್ನ 'ಅಭಿಮಾನಿ' (?) ಗಳ ಸಮ್ಮುಖದಲ್ಲಿ ಪತ್ರಿಕಾಗೋಷ್ಠಿ ಕರೆದು 'ಜಿಲ್ಲೆಯ ರಾಜಕಾರಣದಲ್ಲಿ ಸಿಎಂ ಸಿದ್ದರಾಮಯ್ಯ ನನಗೆ ಬೆಲೆ ಕೊಡುತ್ತಿಲ್ಲ; ನೇಮಕಗಳ ವಿಚಾರದಲ್ಲಿ ನನ್ನ ಮಾತಿಗೆ ಕಿಮ್ಮತ್ತಿಲ್ಲ' ಅಂತ ಆಕ್ರೋಶದಿಂದ ತೊಡೆತಟ್ಟಿದರೇ ಹೊರತು ತಾನು ಪ್ರತಿನಿಧಿಸುವ ಜಿಲ್ಲೆಯಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳ ಬಗ್ಗೆ ಚಕಾರವೆತ್ತಲಿಲ್ಲ, ವಾರಾಂತ್ಯದ ಎರಡು ರಜಾ ದಿನಗಳನ್ನು ಬೆಂಗಳೂರಿನಲ್ಲೇ ಕಳೆದರೂ ಜಿಲ್ಲೆಯ ಅನ್ನದಾತರತ್ತ ಅಂಬಿ ತಿರುಗಿಯೂ ನೋಡಲಿಲ್ಲ.


ಅಂಬಿ ಹೈಡ್ರಾಮಾ

ಅಂಬಿ ಒಬ್ಬ ನಟನಾಗಿ ಎಷ್ಟು ಯಶಸ್ಸು ಗಳಿಸಿದ್ದರೊ, ಒಬ್ಬ ರಾಜಕಾರಣಿಯಾಗಿ ಅಷ್ಟೇ ಗಂಭೀರವಾಗಿ ಸೋತಿದ್ದಾರೆ. ಇದು ಕಟುಸತ್ಯ ಆದಾಗ್ಯೂ ಅಂಬಿ ಹಾಗೊಮ್ಮೆ ಹೀಗೊಮ್ಮೆ ಚುನಾವಣೆ ಗೆಲ್ಲುತ್ತಿರೋದಕ್ಕೆ ಜಾತಿರಾಜಕಾರಣ ಮತ್ತು ಸಿನಿಮಾ ವರ್ಚಸ್ಸುಗಳು ಕಾರಣವೇ ಹೊರತು ಅವರ ಜನನಾಯಕ ಇಮೇಜಲ್ಲ, ಅಂಬಿ ಮೊದಲು ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಿಂದೊಮ್ಮೆ ಎಸ್.ಎಂ.ಕೃಷ್ಣ ಬಣದ ವಿರುದ್ಧ ಜಿದ್ದಾಜಿದ್ದಿಗೆ ಬಿದ್ದು ರಮ್ಯ ಸೋಲಿಗೆ ಕಾರಣವಾದ ಅಂಬಿಯ ಪಕ್ಷನಿಷ್ಠೆಯ ಬಗ್ಗೆ ಹೈಕಮಾಂಡ್‌ಗೆ ಚೆನ್ನಾಗೇ ತಿಳಿದಿದೆ. ಮಂಡ್ಯ ಕಾಂಗ್ರೆಸ್ ಕೂಟವನ್ನು ಹೊಡೆದು ಇಬ್ಭಾಗ ಮಾಡಿದ್ದೇ ಅಂಬಿ ಮತ್ತು ಅವರ ಪಟಾಲಂ. ಈಗ ಮಳವಳ್ಳಿ ಶಾಸಕ ನರೇಂದ್ರಸ್ವಾಮಿ ಜೊತೆಗೆ ತಿಕ್ಕಾಟ ಶುರುಹಚ್ಚಿಕೊಂಡಿರುವ ಅಂಬಿ ಅಪ್ಪಿತಪ್ಪಿ ಯಡವಿದ್ದೇ ಆದರೆ ಅದರಿಂದ ಅಂಬಿಗೇ ಲುಕ್ಸಾನೆ ವಿನಾಃ ಪಕ್ಷಕ್ಕಲ್ಲ. ಏಕೆಂದರೆ, ಅಂಬಿ ಸೋಮಾರಿತನ, ಉಡಾಫೆಗಳಿಂದ ಬೇಸತ್ತು ಹೋಗಿರುವ ಮಂಡ್ಯದ ಜನತೆ ದಿನೇದಿನೇ ಅಂಬಿಯಿಂದ ದೂರ ಸರಿಯುತ್ತಿದ್ದಾರೆ. ಆದಕ್ಕೇ ಅವತ್ತು ಅಂಬಿ ರಾಜೀನಾಮೆ ಕೊಡುತ್ತೇನೆ ಅಂತ ಅಬ್ಬರಿಸಿದಾಗ ನೆಪಕ್ಕಾದರು ಒಂದು ಪ್ರತಿಭಟನೆಗೂ ಮಂಡ್ಯದ ಯಾವ ಗಲ್ಲಿಯೂ ಸಾಕ್ಷಿಯಾಗಲಿಲ್ಲ.


ಈ ಸೂಕ್ಷ್ಮ ಅಂಬಿಗೆ ತಿಳಿದಿರುವುದರಿಂದಲೇ ರಾಜೀನಾಮೆಯ ತಮ್ಮ ನಿರ್ಧಾರದಿಂದ ಯೂ ಟರ್ನ್ ತಗೊಂಡು ಈಗ ಮುನಿಸಿನ ಬೆದರುಗೊಂಬೆ ತೋರಿಸುತ್ತಿರೋದು. ರೈತರ ಆತ್ಮಹತ್ಯೆಗಳ ಕಾರಣವಿಟ್ಟುಕೊಂಡು, ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂಬ ಬೇಡಿಕೆ ಮುಂದುಮಾಡಿಕೊಂಡು ಅಂಬಿ ರಾಜೀನಾಮೆ ನೀಡುವ ಮಾತನ್ನಾಡಿದ್ದಿದ್ದರೆ ನಿಜಕ್ಕೂ ಅವರೊಬ್ಬ ರೆಬೆಲ್ ಸ್ಟಾರ್ ಅನ್ನಿಸಿಕೊಳ್ಳಬಹುದಿತ್ತು; ಮಂಡ್ಯದ ಗಂಡು ಎಂಬ ಹೊಗಳಿಕೆಯನ್ನೂ ಉಳಿಸಿಕೊಳ್ಳಬಹುದಿತ್ತು.



ಶಂಕರೇಗೌಡ



ಲೋಕೇಶ್.



ಪ್ರದೀಪ


ಅಂಬಿ ಎಂತಾ ಅಪ್ರಬುದ್ಧ ರಾಜಕಾರಣಿ ಎನ್ನುವುದು ಬೆಳಗಾವಿಯಿಂದ ಬೆಂಗಳೂರುವರೆಗಿನ ಅವರ ರಾಜೀನಾಮೆ ಹಾದಿಯೇ ತಿಳಿಸಿಕೊಡುತ್ತದೆ. ಬೆಳಗಾವಿಯಲ್ಲಿ ನಡೆಯುತ್ತಿದ್ದದ್ದು ಯಥಾಪ್ರಕಾರದ ಮಾಮೂಲಿ ಅಧಿವೇಶನವಲ್ಲ, ಉತ್ತರ ಕರ್ನಾಟಕದ ಬೇಕುಬೇಡಗಳ ಬಗ್ಗೆ ವಿಶೇಷ ಗಮನ ಹರಿಸುವುದಕ್ಕೆಂದೇ ನಡೆಸಲಾಗುತ್ತಿದ್ದ ವಿಶೇಷ ಅಧಿವೇಶನ. ಅಂತದ್ದರಲ್ಲಿ ವಸತಿ ಖಾತೆಯಂತಹ ಪ್ರಮುಖ ಇಲಾಖೆಯ ಮಂತ್ರಿಯೇ ಗೈರಾದರೆ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಎಂತ ಡ್ಯಾಮೇಜು ತಂದಿಡಬಹುದು ಹಾಗೂ ಅದಕ್ಕೆ ಕಾರಣವಾದ ತನ್ನ ಮೇಲೆ ಹೈಕಮಾಂಡ್‌ಗೆ ಎಂಥಾ ಮೆಸೇಜು ತಲುಪಬಹುದೆನ್ನುವ ಕನಿಷ್ಠ ಪರಿವೆಯೂ ಅಂಬಿಗೆ ಇದ್ದಂತಿರಲಿಲ್ಲ, ತಮ್ಮ ಸಿನಿಮಾ ಸ್ಟೈಲಿನ ರೆಬೆಲ್ ಧಾಟಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದು ಅಧಿವೇಶನವನ್ನು ಅರ್ಧಕ್ಕೇ ಬಿಟ್ಟು ಬೆಂಗಳೂರಿನತ್ತ ಮುಖ ಮಾಡಿದ್ದರು.

ಹಾಗೆ ಬಂದವರು ಮಾಡಿದ್ದಾದರು ಏನು? ಕಡೇಪಕ್ಷ ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗಳಿಗಾದರು ಭೇಟಿ ನೀಡಿ ಸಾಂತ್ವನ ಹೇಳುವ ಕೆಲಸವನ್ನಾದರು ಮಾಡಿದ್ದರೆ ಅಂಬಿಯ ಬಗ್ಗೆ ಜನರಲ್ಲಿ ಕೊಂಚ ಗೌರವವಾದರೂ ಉಳಿಯುತ್ತಿತ್ತು, ಆದರೆ ಬೆಂಗಳೂರಿನ ತನ್ನ ಮನೆಗೆ ತನ್ನ ಅಭಿಮಾನಿಗಳನ್ನೆಲ್ಲ ಕರೆಸಿಕೊಂಡು ಸಭೆ ನಡೆಸಿದ ಅಂಬಿ ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮಿಯನ್ನು ಭೇಟಿ ಮಾಡುತ್ತೇನೆ ಎನ್ನುವ ಮೂಲಕ ಜಾತಿರಾಜಕಾರಣ ಮಾಡಲು ಹೊರಟಿದ್ದರು. ಅಂಬಿಯ ಬ್ಲಾಕ್‌ಮೇಲ್ ರಾಜಕಾರಣದ ಸುಳಿವರಿತ ನಿರ್ಮಲಾನಂದನಾಥ ಸ್ವಾಮಿಗಳು 'ನನ್ನ ಭೇಟಿಗೆ ಬರುವುದು ಬೇಡ. ಅದು ಜನತೆಗೆ ಬೇರೆಯ ಸಂದೇಶ ಮುಟ್ಟಿಸುತ್ತದೆ' ಅಂತ ನಯವಾಗಿ ನಿರಾಕರಿಸುವ ಮೂಲಕ ಅಂಬಿಯ ಜಾತಿ ರಾಜಕಾರಣಕ್ಕೆ ಸರಿಯಾದ ಮುಖಭಂಗವನ್ನೇ ಮಾಡಿದ್ದರು.

ಕೊನೆಗೆ ಬೆಂಗಳೂರಿನ ತನ್ನ ಮನೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅಂಬಿ 'ಜಿಲ್ಲೆಯ ರಾಜಕಾರಣದಲ್ಲಿ ತನ್ನ ಮಾತು ಕೇಳದ್ದರಿಂದ ಬೇಸರವಾಗಿರೋದು ನಿಜ ಆದರೆ ರಾಜೀನಾಮೆ ಕೊಡುವುದಿಲ್ಲ' ಎನ್ನುವ ಮೂಲಕ ಚುಂಚನಗಿರಿಯಿಂದ ಬಿದ್ದ ಒಂದೇ ಏಟಿಗೆ ತಾನು ಮೆತ್ತಗಾಗಿರೋದನ್ನು ತೋರಿಸಿಕೊಂಡಿದ್ದರು.

ಅಂಬಿ ತಲೆಯೊಳಗೆ ಜೆಡಿಎಸ್

ಇಷ್ಟೆಲ್ಲಾ ರೈತರ ಸರಣಿ ಆತ್ಮಹತ್ಯೆ ನಡೆಯುತ್ತಿದ್ದರೂ ಸರ್ಕಾರದ ರೈತ ವಿರೋಧಿ ಧೋರಣೆಯ ವಿರುದ್ಧ ಬಂಡೆದ್ದು ಪ್ರತಿಭಟನೆ ನಡೆಸಬೇಕಾದ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರು ಬೆಡ್‌ಶೀಟ್ ಹೊದ್ದುಕೊಂಡು ಮನೆಯಲ್ಲಿ ಮಲಗಿ ಬಿಟ್ಟಿದ್ದಾರೆ. ಮೀಡಿಯಾ ಹೈಪ್‌ಗೋಸ್ಕರ ಹುಬ್ಬಳ್ಳಿಯಿಂದ ಬೆಳಗಾವಿವರೆಗೆ ಕಾಲ್ನಡಿಗೆ ಜಾಥಾ ನಡೆಸಿದ್ದು ಬಿಟ್ಟರೆ ಕುಮಾರಸ್ವಾಮಿ ಮಾಡಿದ ಘನಂದಾರಿ ಕೆಲಸವೆಂದರೆ ಅಂಬಿಯನ್ನು ಸಿದ್ದು ವಿರುದ್ಧ ಎತ್ತಿಕಟ್ಟಿ ಜಿಲ್ಲೆಯ ರೈತರನ್ನೇ ಮರೆಯುವಂತೆ ಮಾಡಿಸಿದ್ದು. ಸಂಪುಟ ವಿಸ್ತರಣೆಯಾದರೆ ತನ್ನನ್ನು ಕೈಬಿಡುವುದು ಗ್ಯಾರಂಟಿ ಎಂಬ ಸೂಚನೆ ಈಗಾಗಲೇ ಅಂಬಿಗೆ ಸಿಕ್ಕಿರುವುದರಿಂದ ಪರ್ಯಾಯ ನಡೆಗಾಗಿ ಜೆಡಿಎಸ್ ಆಯ್ಕೆಯನ್ನು ಸಿದ್ಧಮಾಡಿಟ್ಟುಕೊಂಡಿದ್ದಾರೆ. ಹಾಗೊಮ್ಮೆ ಸಂಪುಟದಿಂದ ಕೈಬಿಟ್ಟದ್ದೇ ಆದಲ್ಲಿ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಸೇರುವ ತಯಾರಿ ತೆರೆಮರೆಯಲ್ಲಿ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಅಂಬಿಯ ಶಿಷ್ಯ ಅಮರಾವತಿ ಚಂದ್ರನ ಪೌರೋಹಿತ್ಯದಲ್ಲಿ ಮಾತುಕತೆಗಳು ಚಾಲ್ತಿಯಲ್ಲಿವೆ. ಹಾಗೆ ನೋಡಿದರೆ, ಅಂಬಿ–ಕುಮ್ಮಿಯ ದೋಸ್ತಿ ಕಳೆದ ಲೋಕಸಭ[...] ಚುನಾವಣೆಯಿಂದಲೇ ಚಾಲ್ತಿಯಲ್ಲಿರುವಂತದ್ದು. ಮಂಡ್ಯ[...] ಚುನಾವಣೆಯಲ್ಲಿ ಅಂಬಿ ಗೆಲ್ಲಲು ನೆರವಾದದ್ದೇ ಜೆಡಿಎಸ್‌ನ[...] ಒಳ ಒಪ್ಪಂದದಿಂದಾಗಿ. ಅಂತೆಯೇ ರಮ್ಯ ಲೋಕಸಭ[...] ಚುನಾವಣೆಯಲ್ಲಿ ಸೋತು ಜೆಡಿಎಸ್‌ನ ಸಿ.ಎಸ್.ಪುಟ್ಟರಾಜ[...] ಗೆದ್ದಿದ್ದು ಕೂಡಾ ಅಂಬಿಯ ಸಾಥ್‌ನಿಂದಲೇ. ರಮ್ಯ ತನ್ನನ್[...] ಬಿಟ್ಟು ಕೃಷ್ಣ ಬಣದಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ ಎಂಬ[...] ಜಿದ್ದಿಗೆ ಅಂಬಿ ಆ ರೀತಿ ಮಾಡಿದ್ದರು.





ಹೀಗೆ ಜೆಡಿಎಸ್‌ನೊಂದಿಗೆ ಉತ್ತಮ ಬಾಂಧವ[...] ಹೊಂದಿರುವುದರಿಂದಲೇ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ[...] ರೈತರ ಆತ್ಮಹತ್ಯೆ ವಿಷಯದಲ್ಲಿ ಅಂಬಿ ಸಂಪೂರ್ಣ[...] ವಿಫಲವಾಗಿದ್ದರೂ ಜೆಡಿಎಸ್ ಒಂದೇ ಒಂದು ಪ್ರತಿಭಟನ[...] ನಡೆಸುತ್ತಿಲ್ಲ, ಬದಲಾಗಿ ಅಂಬಿಯ ಪ್ರತಿಷ್ಠೆಯನ್ನು ಕೆರಳಿಸಿ[...] ಸಿದ್ದು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನದಲ್ಲಿ[...] ಸಮಯ ಕಳೆಯುತ್ತಿದೆ.


ಇನ್ನು ಜಿಲ್ಲಾ ಕಾಂಗ್ರೆಸ್ ಅಂಬಿಗನಿಲ್ಲದ[...] ದೋಣಿಯಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ[...] ಅಂಬಿಗನಾಗಿ ಜಿಲ್ಲಾ ಕಾಂಗ್ರೆಸ್ ಮುನ್ನಡೆಸಬೇಕಿತ್ತು, ಆದರ[...] ತಾನು ಮಾಡಬೇಕಾದ ಕೆಲಸವನ್ನು ತನ್ನ ಶಿಷ್ಯ ಅಮರಾವ[...] ಚಂದ್ರನಿಗೆ ವಹಿಸಿ ಬೆಂಗಳೂರಿನಲ್ಲೇ ಹಾಯಾಗಿ ಕಾಲ[...] ಕಳೆಯುವ ಅಂಬರೀಶ್ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರ[...] ಬಂಡಾಯದ ಬಾವುಟ ಹಾರಿಸಿದ್ದಾರೆ. ಜೆಡಿಎಸ[...] ಮುಖಂಡರ ಕೆಲಸವಾಗುವಷ್ಟು ಸಲೀಸಾಗಿ ಕಾಂಗ್ರೆಸ[...] ಕಾರ್ಯಕರ್ತರ ಕೆಲಸವಾಗುತ್ತಿಲ್ಲ. ಹೀಗಾಗಿ ಅಂಬರೀಶ್[...] ಶಾಪ ಹಾಕಿಕೊಂಡು ತಿರುಗುತ್ತಿದ್ದಾರೆ.

ಮಂಡ್ಯ ಕ್ಷೇತ್ರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃ[...] ಕಾರ್ಯಗಳು ನಡೆದಿಲ್ಲ, ಅಂಬರೀಶ್ ಅವಧಿಯಲ್ಲಿ ಅಭಿವೃ[...] ಕಾರ್ಯಗಳು ಹೇಗಿವೆ ಎಂಬುದನ್ನು ಮಂಡ್ಯ- ಕೆರಗೋಡ[...] ಹಾಗೂ ಮಂಡ್ಯ -ನಾಗಮಂಗಲ ರಸ್ತೆಗಳನ್ನು ನೋಡಿದ[...] ಸಾಕು ತಿಳಿಯುತ್ತದೆ. ವಸತಿ ಸಚಿವರಾಗಿರುವ ಅಂಬರೀಶ[...] ಮನಸ್ಸು ಮಾಡಿದ್ದರೆ 2 ವರ್ಷಗಳ ಅವಧಿಯಲ್ಲಿ ಜಿಲ್ಲೆಯ[...] ಸಾವಿರಾರು ಮನೆಗಳ ನಿರ್ಮಾಣ ಮಾಡಬಹುದಿತ್ತು, ಆದ[...] ಅಂಬಿಯಲ್ಲಿ ಅಂಥಾ ವೇಗ ಎಲ್ಲಿಂದ ಕಂಡುಬರಬೇಕು[...] ಜಿಲ್ಲಾಧಿಕಾರಿ ಕಚೇರಿ ಕಟ್ಟಡದಲ್ಲಿರುವ ಉಸ್ತುವಾರಿ ಮಂತ್ರಿಯ[...] ಕೊಠಡಿಯನ್ನು ಉದ್ಘಾಟನೆ ಮಾಡಿದ್ದಷ್ಟೆ ಬಂತು. ಒಂದ[...] ದಿನವಾದರೂ ಆ ಕಚೇರಿಗೆ ಅಂಬಿ ಕಾಲಿಟ್ಟಿದ್ದನ[...] ಸಾರ್ವಜನಿಕರು ಕಂಡೇ ಇಲ್ಲ.

ಅಂಬಿಯ ಪಾಲಿಗೆ ಮಂಡ್ಯ ಅಂದರೆ ಪಟ್ಟಾ ಶಿ[...] ಚಂದ್ರನ ಅಮರಾವತಿ ಹೋಟೇಲ್ ಮಾತ್ರ. ಅಲ್ಲಿಗೆ[...] ಅಧಿಕಾರಿಗಳನ್ನು ಕರೆಸಿಕೊಳ್ಳುವ ಅಂಬರೀಶ್ ಬಗ್ಗೆ ಜಿಲ್ಲೆಯ[...] ಅಧಿಕಾರಿಗಳಿಗೆ ಹೇಳಿಕೊಳ್ಳುವಂತ ಭಯವೇನೂ ಇಲ[...] ಇನ್ನು ಪಕ್ಷ ಸಂಘಟನೆಯಿಂದ ಅಂಬಿ ಮಾರು ದೂರ[...] ತನ್ನ ಸುತ್ತಲಿರುವವರ ಸ್ವಾರ್ಥಕ್ಕಾಗಿ ಪಕ್ಷವನ್ನು ಬ[...] ಕೊಡುವುದರಲ್ಲಿ ಅಂಬಿ ನಿಸ್ಸೀಮ ಎನಿಸಿದ್ದಾರೆ. ನಗರಸ[...] ಅಧ್ಯಕ್ಷ ಸ್ಥಾನ ಚುನಾವಣೆಯಲ್ಲಿ ಪಕ್ಷದ ಅಧಿಕೃ[...] ಅಭ್ಯರ್ಥಿಯನ್ನು ಬಿಟ್ಟು ಕಾಸಿನ ಕುಳ ಪಕ್ಷೇತರ ಸದ[...] ಸಿದ್ದರಾಜುಗೆ ಮಣೆ ಹಾಕಿದ್ದ ಅಂಬಿ ಮುಂದೆ ಎಂತೆಂತ[...] ಪ್ರಹಸನಕ್ಕೆ ಕಾರಣರಾಗಿದ್ದರೆಂಬುದನ್ನು ಇಡೀ ರಾಜ್ಯದ ಜನ[...] ನೋಡಿದ್ದಾರೆ. ಅದೇರೀತಿ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ[...] ಚುನಾವಣೆಯಲ್ಲೂ ಜೆಡಿಎಸ್‌ನ ಡಿ.ಸಿ.ತಮ್ಮಣ್ಣನ ಜೊ[...] ಕೈಜೋಡಿಸಿ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ[...] ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣರ ಸಹೋದ[...] ಸಿದ್ದರಾಮೇಗೌಡನನ್ನು ಸೋಲಿಸಿದ್ದು ಕೂಡಾ ಅಂಬಿಯ[...] ಅಸಲಿಗೆ ಯಾವ ಎಂಡಿಸಿಸಿ ಬ್ಯಾಂಕ್ ಮತ್ತು ಅಪೆ[...]

ಬ್ಯಾಂಕ್‌ಗಳ ನೇಮಕದ ವಿಚಾರವಿಟ್ಟುಕೊಂಡು ಅಂಬಿ ಏನೆಲ್ಲಾ ಹೈಡ್ರಾಮಾ ಸೃಷ್ಟಿ ಮಾಡಿದ್ದಾರೋ ಆ ಎಂಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಸ್ಥಾನಕ್ಕೆ ಮೊದಲ ಅವಧಿಗೆ ಹರೀಶ್, ಎರಡನೇ ಅವಧಿಗೆ ಅಶ್ವಥ್ ಎಂದು ಖುದ್ದು ಅಂಬಿ ಮುಂದೆಯೇ ನಿರ್ಧಾರವಾಗಿತ್ತು, ಹಾಗೆಯೇ ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಕಾಂಗ್ರೆಸ್‌ನ ಹಿರಿಯ ಮುಖಂಡ ತಿಮ್ಮೇಗೌಡರನ್ನು ಆಯ್ಕೆ ಮಾಡಲಾಗಿದೆಯೇ ಹೊರತು ಇದರಲ್ಲಿ ಶಾಸಕ ನರೇಂದ್ರಸ್ವಾಮಿಯವರ ಹಸ್ತಕ್ಷೇಪವೇನೂ ಇಲ್ಲ ಎಂದು ಬ್ಯಾಂಕ್‌ನ ನಿರ್ದೇಶಕರೆಲ್ಲಾ ಪತ್ರಿಕಾಗೋಷ್ಠಿಯಲ್ಲಿ ನೇರವಾಗಿ ಹೇಳುವ ಮೂಲಕ ಅಂಬಿಯ ನೀರಿಳಿಸಿದ್ದಾರೆ.

ಇನ್ನು ಜಿಲ್ಲೆಯ ಕಾಂಗ್ರೆಸ್ ಪಾಳಯದಲ್ಲಿ ಅಂಬಿ ವಿರುದ್ಧ ಬಂಡಾಯದ ಬಾವುಟ ಜೋರಾಗೇ ಹಾರಾಡುತ್ತಿವೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆತ್ಮಾನಂದ, ನಾಗಮಂಗಲ ಮಾಜಿ ಶಾಸಕ ಸುರೇಶ್‌ಗೌಡ, ಕೆ.ಆರ್.ಪೇಟೆಯ ಮಾಜಿ ಶಾಸಕ ಬಿ.ಬಿ.ಚಂದ್ರಶೇಖರ್, ಶ್ರೀರಂಗಪಟ್ಟಣದ ರವೀಂದ್ರ ಶ್ರೀಕಂಠಯ್ಯ, ಮದ್ದೂರಿನ ಗುರುಚರಣ್, ಕಲ್ಪನಾ ಸಿದ್ದರಾಜು, ಬಂಧುವ ಮಾದೇಗೌಡ, ಪಾಂಡವಪುರದ ಎಚ್.ಎನ್.ಮಂಜುನಾಥ್ ಮೊದಲಾದವರೆಲ್ಲ ಅಂಬಿ ಮತ್ತು ಅಮರಾವತಿ ಚಂದ್ರನ ವಿರುದ್ಧ ಬಂಡೆದ್ದು ಕೂತಿದ್ದಾರೆ. ಇವತ್ತು ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸ್ವಲ್ಪವಾದರೂ ಉಸಿರಾಡುತ್ತಿದೆ ಎಂದರೆ ಅದು ನರೇಂದ್ರಸ್ವಾಮಿಯಿಂದ


ನಾಗಭೂಷಣ್

ಮಾತ್ರ. ಎಂಡಿಸಿಸಿ ಬ್ಯಾಂಕ್ ಆಡಳಿತ ಚುಕ್ಕಾಣಿಯನ್ನು ಕಾಂಗ್ರೆಸ್ ತೆಕ್ಕೆಗೆ ತಂದಿರುವ ನರೇಂದ್ರಸ್ವಾಮಿ, ಮಳವಳ್ಳಿ ತಾಲ್ಲೂಕಿನಲ್ಲಿ ಪಿಎಲ್‌ಡಿ ಬ್ಯಾಂಕ್, ಟಿಎಪಿಸಿಎಂಎಸ್, ತಾ.ಪಂ., ಪುರಸಭೆ, 36 ಗ್ರಾ.ಪಂ.ಗಳ ಪೈಕಿ 30 ಕ್ಕೂ ಹೆಚ್ಚು ಪಂಚಾಯಿತಿಗಳಲ್ಲಿ ಕಾಂಗ್ರೆಸ್ ಬಾವುಟ ಹಾರಾಡುವಂತೆ ಮಾಡಿದ್ದಾರೆ. ತನ್ನನ್ನೇ ಓವರ್‌ಟೇಕ್ ಮಾಡುವಂತೆ ನರೇಂದ್ರಸ್ವಾಮಿ ಹೀಗೆ ಪಕ್ಷ ಸಂಘಟಿಸುತ್ತಿರುವುದನ್ನು ಕಂಡು ಸಿಡಿಮಿಡಿಗೊಂಡಿರುವ ಅಂಬಿ ಜೆಡಿಎಸ್‌ನ ಕುಮಾರಸ್ವಾಮಿ ಮಾತು ಕೇಳಿ ಸಿಎಂ ವಿರುದ್ಧ ಬಂಡಾಯದ ಬಾವುಟ ಹಾರಿಸಲು ಹೋಗಿ ಜನರ ತಿರಸ್ಕಾರಕ್ಕೆ ಒಳಗಾಗಿರೋದು ವಿಪರ್ಯಾಸದ ಸಂಗತಿ.

ಅಂಬಿಯ ಹೊಣೆಗೇಡಿತನದ ನಡುವೆಯೂ ಮಂಡ್ಯದ ಜನ ಕೊಂಚ ಉಸಿರಾಡುವಂತೆ ಕಾರ್ಯೋನ್ಮುಖವಾಗಿರೋದು ಸಂಸದ ಸಿ.ಎಸ್.ಪುಟ್ಟರಾಜು. ಬೆಳೆಗಳಿಗೆ ನೀರು ಕೊಡುವ ಸಲುವಾಗಿ ಹುಲಿಕೆರೆ ಬುಗ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಅಧಿಕಾರಿಗಳ ಮೇಲೆ ಒತ್ತಡ ತಂದು ನಾಲೆಗಳಿಗೆ ನೀರು ಬಿಡಿಸಿದ್ದಾರೆ. ಜಿಲ್ಲಾಧಿಕಾರಿ ಅಜಯ್ ನಾಗಭೂಷಣ್ ಜೊತೆಗೂಡಿ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಭೆ ಕರೆದು ರೈತರ ಬಳಿಗೆ ತೆರಳಿ ಆತ್ಮಹತ್ಯೆಗೆ ಶರಣಾಗದಂತೆ ತಿಳಿಸಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುವಂತೆ ಸೂಚಿಸಿದ್ದು, ಅದರಂತೆ ಜಿಲ್ಲೆಯಾದ್ಯಂತ ಅಧಿಕಾರಿಗಳು ಸಭೆ ನಡೆಸಿ ಆತ್ಮವಿಶ್ವಾಸ ತುಂಬುತ್ತಿದ್ದಾರೆ. ಇನ್ನು ರೈತರ ಆತ್ಮಹತ್ಯೆಯ ಪ್ರಮುಖ ಕಾರಣಗಳಲ್ಲಿ ಒಂದಾಗಿರೋದು ಖಾಸಗಿ ಲೇವಾದೇವಿದಾರರ ಬಡ್ಡಿ ದಂಧೆ. ಇದನ್ನು ಮನಗಂಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೂಷಣ್ ಜಿ.ಬೊರಸೆಯವರು ಜಿಲ್ಲೆಯಲ್ಲಿ 25ಕ್ಕೂ ಬಡ್ಡಿ ದಂಧೆಕೋರರನ್ನು ಬಂಧಿಸಿ ರೈತರಿಂದ ಪಡೆದಿದ್ದ ಖಾಲಿ ಚೆಕ್‌ಗಳು, ಜಮೀನು ದಾಖಲೆ ಪತ್ರಗಳನ್ನು ವಶಪಡಿಸಿಕೊಂಡು ಕೇಸು ಹಾಕಿದ್ದಾರೆ. ಈ ಕ್ರಮದಿಂದ ಜಿಲ್ಲೆಯಾದ್ಯಂತ ಬಡ್ಡಿ ದಂಧೆಕೋರರು ಬೆಚ್ಚಿಬಿದ್ದಿದ್ದಾರೆ. ಇಷ್ಟೆಲ್ಲಾ ಆದರೂ ರೈತರ ಆತ್ಮಹತ್ಯೆಗಳು ನಿಲ್ಲುತ್ತಿಲ್ಲ, ಸರ್ಕಾರ ಈ ವಿಷಯವಾಗಿ ಗಂಭೀರ ಆಲೋಚನೆ ನಡೆಸಿ ಕಾರ್ಯೋನ್ಮುಖವಾಗಿದೆ. ಜಿಲ್ಲೆಯ ಜವಾಬ್ದಾರಿಯುತ ಜನಪ್ರತಿನಿಧಿಯಾಗಿ ಅಂಬಿ ಅದಕ್ಕೆ ಅನುವು ಮಾಡಿಕೊಡಬೇಕೆ ವಿನಾ ಸರ್ಕಾರದ ದಿಕ್ಕು ತಪ್ಪಿಸುವಂತಹ ಕ್ಷುಲ್ಲಕ ರಾಜಕಾರಣ ಮಾಡಬಾರದು. ಇದು ಅಂಬಿಗೆ ಆದಷ್ಟು ಬೇಗ ಮನವರಿಕೆಯಾಗಬೇಕಿದೆ.

■ ಮಂಡ್ಯ ನಾಗೇಶ್

ವನಿತಾ ವಾಸು ಪತಿ ಪರಾರಿ!



'ಕಾಡಿನ ಬೆಂಕಿ' ಹೀರೋಯಿನ್ ವನಿತಾ ವಾಸು ಯಾವ ಕನ್ನಡಿಗನಿಗೆ ತಾನೇ ಗೊತ್ತಿಲ್ಲ? ಸುನಿಲ್‌ಕುಮಾರ್ ದೇಸಾಯಿಯ 'ತರ್ಕ', 'ಉತ್ಕರ್ಷ' ಚಿತ್ರಗಳನ್ನು ನೋಡಿದವರ್‍ಯಾರೂ ಜನ್ಮಾಪಿ ಆಕೆಯನ್ನು ಮರೆಯಲು ಸಾಧ್ಯವೇ ಇಲ್ಲ. ಸದ್ಯ ಈಟೀವಿಯಲ್ಲಿ ಪ್ರತಿನಿತ್ಯ ಬರುವ 'ಮನೆಯೊಂದು ಮೂರು ಬಾಗಿಲು' ಮೆಗಾ ಸೀರಿಯಲ್ಲಿನಲ್ಲಿ ಇನ್ನಿಲ್ಲದಂತೆ ಮಿಂಚುತ್ತಿರುವ ವನಿತಾ ವಾಸು ಬಗ್ಗೆ ಲೇಟೆಸ್ಟ್ ಸುದ್ದಿಯೊಂದಿದೆ.

ಅದು ತನ್ನ ಗಂಡನ ವಿರುದ್ಧ ವನಿತಾ ಕೊಟ್ಟ ವರದಕ್ಷಿಣೆ ಕಿರುಕುಳದ ಕಂಪ್ಲೇಂಟು!

ಜೂನ್ 21 ಕ್ಕೆ ಏಕಾಏಕಿ ಅಲಸೂರು ಗೇಟ್ ಮಹಿಳಾ ಪೊಲೀಸ್ ಠಾಣೆಗೆ ಪಾದ ಬೆಳೆಸಿದ ವನಿತಾ ವಾಸು ತನ್ನ ಗಂಡ ವಿನಾಯಕ್ ವಿರುದ್ಧ ವರದಕ್ಷಿಣೆ ಕಿರುಕುಳದ ದೂರು ನೀಡಿದ್ದು ಎಷ್ಟು ನಿಗೂಢವೋ ಆಕೆಗೊಬ್ಬ ಈ ಹೆಸರಿನ ಗಂಡನಿದ್ದ ಎಂಬುದೂ ಅಷ್ಟೇ ವಿಚಿತ್ರ!

ಕೇವಲ ಪತಿ ವಿನಾಯಕ್ ಮಾತ್ರವೇ ಅಲ್ಲ, ಅತ್ತೆ ಭಾರತಿ ಅಯ್ಯಂಗಾರ್, ಮಾವ ಸಿ.ಜೆ. ಅಯ್ಯಂಗಾರ್ ವಿರುದ್ಧವೂ ವನಿತಾ ವರದಕ್ಷಿಣೆ ಕಿರುಕುಳದ ದೂರು ದಾಖಲಿಸಿದ್ದಾಳೆ. ದೂರಿನ ಸಾರಾಂಶವಿಷ್ಟೆ. ತಾನೊಬ್ಬ ಸದ್‌ಗೃಹಿಣಿಯಾಗಿದ್ದು, ತಾನು 2004 ರ ನವೆಂಬರ್ 10 ರಂದು ಮಲ್ಲೇಶ್ವರದ ವಿನಾಯಕ್ ಎಂಬಾತನನ್ನು ಹಿಂದೂ ಸಂಪ್ರದಾಯದಂತೆ ಮದುವೆಯಾಗಿರುತ್ತೇನೆ. ಮದುವೆಯಾದ ಹೊಸದರಲ್ಲಿ ತನ್ನ ಮಗನ ಜೊತೆ ಪತಿಯ ಮಲ್ಲೇಶ್ವರದ ಮನೆಯಲ್ಲೇ ವಾಸವಾಗಿದ್ದೆ. ಬರುಬರುತ್ತ ಅತ್ತೆ ಭಾರತಿ ಅಯ್ಯಂಗಾರ್ ಮತ್ತು ಮಾವ ಸಿ.ಜೆ. ಅಯ್ಯಂಗಾರ್ ವರದಕ್ಷಿಣೆಗಾಗಿ ಕಿರುಕುಳ ಕೊಡಲು ಆರಂಭಿಸಿದರು. ಇದರಿಂದ ಬೇಸತ್ತು ನಾನು ಪತಿ ಜೊತೆ ಡಾಲರ್ಸ್ ಕಾಲೋನಿಯ ವಶಿಷ್ಠಧಾಮ ಅಪಾರ್ಟ್‌ಮೆಂಟಿಗೆ ವಾಸ್ತವ್ಯ ಬದಲಾಯಿಸಿದೆ.

ಮೊದಮೊದಲು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ ಪತಿ ವಿನಾಯಕ್ ಕಾಲಕ್ರಮೇಣ ಅತ್ತೆ ಮಾವಂದಿರ ಜೊತೆ ಸೇರಿಕೊಂಡು ವರದಕ್ಷಿಣೆಗೆ ಹಿಂಸೆ ಕೊಡಲಾರಂಭಿಸಿದರು. ರಾತ್ರಿ ಕುಡಿದು ಬಂದು ಹೊಡೆಯುವುದು, ಪದೇಪದೇ ಹಿಂಸೆ ನೀಡುವುದು, ನನ್ನ ಮಗನನ್ನು ವಿನಾಕಾರಣ ಹಿಂಸಿಸುವುದು, ಸಿಗರೇಟು ಸೇದಿ ಮುಖಕ್ಕೆ ಹೊಗೆ ಬಿಡುವುದು, ನನ್ನ ಗಳಿಕೆಯ ದುಡ್ಡನ್ನೆಲ್ಲ ಕಿತ್ತುಕೊಂಡಿದ್ದು....!


ಹೀಗೆ ಮುಂದುವರಿಯುವ ನಟಿ ವನಿತಾ ವಾಸು ದೂರಿನ ಆಧಾರದ ಮೇಲೆ ಅಲಸೂರು ಗೇಟ್ ಮಹಿಳಾ ಇನ್ಸ್‌ಪೆಕ್ಟರ್ ಅಂಜುಮಾಲಾ ವಿನಾಯಕ್ ಎಂಬಾತನ ವಿರುದ್ಧ ಐಪಿಸಿ ಸೆಕ್ಷನ್ 498ಎ ಪ್ರಕಾರ ಎಫ್‌ಐಆರ್ ದಾಖಲಿಸಿದ್ದಾರೆ. ಇದು ಗೊತ್ತಾಗಿದ್ದೇ ತಡ ಗಂಡ ವಿನಾಯಕ್ ಮಲ್ಲೇಶ್ವರಂನಿಂದ ನಾಪತ್ತೆಯಾಗಿದ್ದಾನಂತೆ. ಪ್ರಕರಣದ ತನಿಖೆ ಮುಂದುವರಿದಿದೆ ಮತ್ತು ಅಲಸೂರುಗೇಟ್ ಎಸಿಪಿ ಅಮರ್‌ನಾಥ್ ರೆಡ್ಡಿ ಮತ್ತು ಡಿಸಿಪಿ ಸಂದೀಪ್ ಪಾಟೀಲ್ ನೇತೃತ್ವದಲ್ಲಿ ತಲೆ ಮರೆಸಿಕೊಂಡ ಪತಿರಾಯನಿಗಾಗಿ ಪೊಲೀಸರ ಶೋಧಕಾರ್ಯ ವೀರಾವೇಶದಲ್ಲೇ ಮುಂದುವರಿದಿದೆಯಂತೆ.


ನಟಿಯೊಬ್ಬಳು ನಟನೊಬ್ಬನನ್ನು ಮದುವೆಯಾದಳೆಂದರೆ ಜನ ಅದನ್ನು ಸಹಜವೆನ್ನುವುದುಂಟು. ಆದರೆ ಅನಾಮಧೇಯನೊಬ್ಬನನ್ನು ಹೀರೋಯಿನ್ನೊಬ್ಬಳು ಮದುವೆಯಾದರೆ ಪ್ರತಿಯೊಬ್ಬರೂ ಹುಬ್ಬೇರಿಸುತ್ತಾರೆ. ವನಿತಾ ವಾಸು ಕನ್ನಡದ ಬಿಂದಾಸ್ ನಟಿ. ಆ ಕಾಲಕ್ಕೇ ಬಿಪಾಶಾ ಬಸು ಇಮೇಜಿತ್ತು, ಸೆಕ್ಸಿ ಇಮೇಜಿಗೆ ತಕ್ಕಂತೆ ಆಕೆಯ ಲೈಫ್ ಸ್ಟೈಲೂ ಕುತೂಹಲಕ್ಕೆ ಕಾರಣವಾಗಿತ್ತು. ಆದರೆ ನಿಗೂಢವಾಗಿದ್ದದ್ದು ಆಕೆಯ ವೈವಾಹಿಕ ಬದುಕು.

ತೀರ ಇತ್ತೀಚೆಗೆ ಯಡ್ಡಿ ಸಮ್ಮುಖದಲ್ಲಿ ಬಿಜೆಪಿ ಸೇರಿದ ವನಿತಾ ವಾಸುಗೆ ವಿನಾಯಕ್ ಹೆಸರಿನ ಗಂಡನಿದ್ದ ಎಂಬುದು ಎಷ್ಟು ಅಪರೂಪವೋ ಆತ ವರದಕ್ಷಿಣೆಗಾಗಿ ಪೀಡಿಸುತ್ತಿದ್ದ ಎಂಬುದೂ ಅಷ್ಟೇ ವಿಚಿತ್ರ. ವನಿತಾ ಪೊಲೀಸರಿಗೆ ನೀಡಿದ ದೂರಿನ ಪ್ರಕಾರ 2004 ರಲ್ಲಿ ವಿನಾಯಕ್‌ನನ್ನು ಮದುವೆಯಾದಾಗ ಆಕೆಗೆ ವಯಸ್ಸು 38 ಮತ್ತು ವಿನಾಯಕ್‌ಗೆ 27ರ ಹರೆಯ. ಮದುವೆಯ ಹೊತ್ತಿಗೆ 10 ವರ್ಷದ ಮಗನಿದ್ದ ಅಂದರೆ ವನಿತಾಗಿದು ಎರಡನೇ ಮದುವೆ!

ತೀರ ಕೆದಕ ಹೊರಟರೆ ನಟಿ ವನಿತಾಳ ಮೊದಲನೇ ಮದುವೆಯ ಅಸ್ಪಷ್ಟ ಚಿತ್ರಣ ಗೋಚರಿಸುತ್ತದೆ. ಮೂಲತಃ ಕೇರಳದ ವನಿತಾ ವಾಸು ಚಿತ್ರರಂಗಕ್ಕೆ ಕಾಲಿಟ್ಟದ್ದು 1985 ರಲ್ಲಿ. ಸುರೇಶ್ ಹೆಬ್ಳಿಕರ್ ನಿರ್ಮಿಸಿ ನಟಿಸಿದ್ದ 'ಕಾಡಿನ ಬೆಂಕಿ' ಆಕೆಯ ಮೊದಲ ಚಿತ್ರ. ಅರಣ್ಯಾಧಿಕಾರಿಯೊಬ್ಬ ತನ್ನ ಸಹಾಯಕ ಗಾರ್ಡ್‌ನ ಅತೃಪ್ತ ಪತ್ನಿಯನ್ನು ಪ್ರೇಮಿಸುವ ಕತೆಯಿದ್ದ 'ಕಾಡಿನ ಬೆಂಕಿ'ಯಲ್ಲಿ ವನಿತಾಳದ್ದು ಸೆಕ್ಸಿ ಪಾತ್ರ. ಕ್ರಮೇಣ ಕಾಡಿನ ಬೆಂಕಿಯ ಇಮೇಜೇ ಗಟ್ಟಿಯಾಯಿತು. ರಾಷ್ಟ್ರಪ್ರಶಸ್ತಿ ಬೇರೆ ಬಂದಿದ್ದರಿಂದ ಸುರೇಶ್ ಹೆಬ್ಳಿಕರ್ ತಮ್ಮ 'ಆಗುಂತಕ' ಚಿತ್ರಕ್ಕೂ ವನಿತಾಳನ್ನೇ ಆಯ್ದುಕೊಂಡರು.

ಆನಂತರ 'ಆಕ್ರಂದನ' ಎಂಬ ಚಿತ್ರದಲ್ಲಿ ಇಂಥದ್ದೇ ಪಾತ್ರ ವಹಿಸಿದ ವನಿತಾ ಸುನೀಲ್ ಕುಮಾರ್ ದೇಸಾಯಿ




ವನಿತಾ ಅತ್ತೆ ಭಾರತಿ ಮತ್ತು ಮಾವ ಸಿ.ಜೆ. ಅಯ್ಯಂಗಾರ್

ಕಣ್ಣಿಗೆ ಬಿದ್ದದ್ದೇ ನಸೀಬು ಕುದುರಿತ್ತು, ದೇಸಾಯಿಯ 'ತರ್ಕ' ಮತ್ತು 'ಉತ್ಕರ್ಷ' ಎಂಬ ಎರಡೂ ಚಿತ್ರಗಳೂ ಹಿಟ್ಟಾದವು. ಇವೆರಡರಲ್ಲೂ ಗ್ಲಾಮರ್‌ಗೊಂಬೆಯಾಗಿ ಮೆರೆದ ವನಿತಾ ಕಾಶಿನಾಥ್ ನಿರ್ದೇಶನದ 'ಚಪಲ ಚೆನ್ನಿಗರಾಯ'ದಲ್ಲೂ ಸೆಕ್ಸಿ ಪಾತ್ರದಲ್ಲೇ ಕಾಣಿಸಿಕೊಂಡಳು. ಗುಂಡು ಮುಖ, ಮಾದಕ ಕಂಗಳು, ಸದೃಢ ಮೈಕಟ್ಟಿನ ವನಿತಾ ಅತ್ತ ಐಟಂ ಡ್ಯಾನ್ಸರೂ ಅಲ್ಲದ ತೀರ ಅಶ್ಲೀಲಕ್ಕೂ ಸಲ್ಲದ ಮೀಡಿಯಂ ರೋಮ್ಯಾಂಟಿಕ್ ನಟಿ. ಇನ್ನೇನು ಸುನೀಲ್ ಕುಮಾರ್ ದೇಸಾಯಿಯೇ ಮದುವೆಯಾಗುತ್ತಾರೆಂಬ ಗಾಸಿಪ್ ಹಬ್ಬಿತಾದರೂ ಆಕೆಯ ಅಭಿಮಾನಿಗಳಿಗೆ ಬೇರೆಯದೇ ಸುದ್ದಿ ಕಾದಿತ್ತು.

ನಿತಿನ್ ಎಂಬ ಎಂಬಿಎ ವಿದ್ಯಾರ್ಥಿಯೊಬ್ಬನನ್ನು ವನಿತಾ ಪ್ರೀತಿಸಿ ಮದುವೆಯಾದ ಗಾಸಿಪ್ ಹಬ್ಬಿತು. ಆತ ಯಾರು, ಏನು ಮಾಡುತ್ತಾನೆ ಹೇಗೆ, ಲವ್ವಾಯಿತು ಎಲ್ಲವೂ ನಿಗೂಢ. ಅದೇ ಹೊತ್ತಿಗೆ ಪ್ರತಿಷ್ಠಿತ ಡಾಲರ್ಸ್ ಕಾಲೋನಿಯಲ್ಲಿ ಬಂಗಲೆ ಕಟ್ಟಿಸಿಕೊಂಡಿದ್ದ ವನಿತಾ ಐಷಾರಾಮಿ ಸಂಜೆ ಪಾರ್ಟಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದದ್ದು, ಇನ್ನಾರೋ ಡೈರೆಕ್ಟರ್ ಜೊತೆ ಕಿತ್ತಾಡಿದ್ದು, ಯಾವುದೋ ಮಲೆಯಾಳಿ ಚಿತ್ರಕ್ಕೆ ಆಯ್ಕೆಯಾಗಿದ್ದು ಸುದ್ದಿಯಾಗುತ್ತಿತ್ತೇ ಹೊರತು ಆಕೆಯ ಖಾಸಗಿ ಬದುಕಿನ ಸಣ್ಣದೊಂದು ಸುಳಿವೂ ಸಿಗುತ್ತಿರಲಿಲ್ಲ.

ಏಕೆಂದರೆ ಯಾರೊಬ್ಬರಿಗೂ ವನಿತಾ ತನ್ನ ಗಂಡನನ್ನು ಪರಿಚಯಿಸಿರಲಿಲ್ಲ. ಹೀಗಿರುವಾಗಲೇ 2002 ರ ಹೊತ್ತಿಗೆ ಗಂಡ ನಿತಿನ್ ತನಗೆ ವನಿತಾಳಿಂದ ಡೈವೋರ್ಸ್ ಬೇಕೆಂದು ಕೋರ್ಟ್ ಮೊರೆ ಹೊಕ್ಕ ಸುದ್ದಿ ಬಂತು. ಬಹುಶಃ ಆಕೆಗೂ ಇದೇ ಬೇಕಿತ್ತೇನೊ. ದುಸರಾ ಮಾತಿಲ್ಲದೆ ಗಂಡ ನಿತಿನ್‌ಗೆ ಡೈವೋರ್ಸ್ ಕೊಟ್ಟುಬಿಟ್ಟಳು. ಆ ಹೊತ್ತಿಗೆ ನಿತಿನ್–ವನಿತಾ ದಾಂಪತ್ಯಕ್ಕೆ ಹತ್ತು ವರ್ಷ ತುಂಬಿತ್ತು, ಅದರ ಫಲವೆಂಬಂತೆ ಗಂಡು ಮಗುವೊಂದಿತ್ತು, ಅದೇನು ಅರ್ಥವೋ ಗೊತ್ತಿಲ್ಲ ಆ ಮಗುವಿಗೆ 'ಕತೀಸ್' ಎಂಬ ಹೆಸರಿಟ್ಟಿದ್ದರು. ಗಂಡ ಹೋದರೇನಂತೆ ಮಗು ದಕ್ಕಿತಲ್ಲ ಎಂಬ ಸಮಾಧಾನವೊಂದೇ ಆಕೆಯದಾಗಿತ್ತು.

ವನಿತಾ ವಾಸು ಖಾಸಗಿ ಬದುಕಿನ ಬಗ್ಗೆ ಜನ ಕೇಳಿದ್ದು ಅದೇ ಕೊನೆಯ ಸುದ್ದಿ. ಆನಂತರ ಚಿಕ್ಕಪುಟ್ಟ ಪಾತ್ರಗಳಲ್ಲಿ ವನಿತಾ ಕಾಣಿಸಿಕೊಂಡದ್ದು, ಕಾಲಕ್ರಮೇಣ ಟೀವಿ ಸೀರಿಯಲ್ಲುಗಳಲ್ಲಿ ನಟಿಸಲಾರಂಭಿಸಿದ್ದು, ಯಡ್ಡಿ ಸಮ್ಮುಖದಲ್ಲಿ ಬಿಜೆಪಿ ಸೇರಿದ್ದು, ಅದಕ್ಕೆ ಫಿಲ್ಮ್ ಛೇಂಬರ್ ಮಾಜಿ ಅಧ್ಯಕ್ಷ ವಿಜಯ್‌ಕುಮಾರ್ ಪೌರೋಹಿತ್ಯ ವಹಿಸಿದ್ದು ಇತ್ಯಾದಿ ಸುದ್ದಿಗಳಷ್ಟೇ ಆಕೆಯ ಬಗ್ಗೆ ಕೇಳಿಬರುತ್ತಿದ್ದದ್ದು. ಅದ್ಯಾವತ್ತು ತನಗಿಂತ 11 ವರ್ಷದಷ್ಟು ಕಿರಿಯನಾದ ವಿನಾಯಕ್‌ನನ್ನು ಆಕೆ ಮದುವೆಯಾದಳು? ಪರಿಚಯವಾಗಿದ್ದೆಲ್ಲಿ? ಎಲ್ಲವೂ ಸಸ್ಪೆನ್ಸ್.

ಈಗ ನೋಡಿದರೆ ತನ್ನ ಎರಡನೇ ಗಂಡ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದಾನೆಂದು ವನಿತಾ ದೂರು ಕೊಟ್ಟಿದ್ದಾಳೆ. ಅತ್ತೆ ಮಾವಂದಿರೂ ಹಿಂಸೆ ಕೊಟ್ಟಿದ್ದಾರಂತೆ. ಪತ್ನಿಗಿಂತಲೂ ಪತಿಗೆ 11 ವರ್ಷ ಕಮ್ಮಿ. ಜಾತಿಯಲ್ಲಿ ಸಂಪ್ರದಾಯಸ್ಥ ಅಯ್ಯಂಗಾರ್‌ಗಳು. ಮೊದಲ ಪತಿಯ ಹತ್ತು ವರ್ಷದ ಮಗುವಿದ್ದರೂ ಬಿಡದೇ ಮದುವೆಯಾದ ಅಯ್ಯಂಗಾರಿ ವಿನಾಯಕ್ ಅದೆಲ್ಲಿ ಮದುವೆಯಾದನೋ ಯಾವ ಕಾರಣಕ್ಕೆ ಕಚ್ಚಾಟಕ್ಕಿಳಿದನೋ ಗೊತ್ತಿಲ್ಲ. ಕೇಳೋಣವೆಂದರೆ ಪತಿರಾಯನೇ ಪರಾರಿಯಾಗಿದ್ದಾನೆ. ಹೇಳಲು ವನಿತಾ ವಾಸು ಅಪರಿಚಿತ ಕರೆಯನ್ನೇ ಸ್ವೀಕರಿಸುತ್ತಿಲ್ಲ, ವನಿತಾ ಸದ್ಯ ಬಿಜೆಪಿ ನಾಯಕಿ. ಯಡ್ಡಿ ಬಣದ ಅಧಿನಾಯಕಿ. ಛಾರಿ ಸ್ಟಾರ್‌ಗಿರಿಯೂ ಸಿಗಲಿಲ್ಲ, ಮೊದಲ ಗಂಡನಿಂದಲೂ ನೆಮ್ಮದಿ ಕಾಣಲಿಲ್ಲ, ಈಗ ಎರಡನೇ ಗಂಡನೂ ಆಧ್ಯಾಗಿಲ್ಲ. ಪಾಪದ ನಟಿಗೆ ಇದೆಂಥಾ ದುರ್ಗತಿಯೊ!

ಬಹುಶಃ ಹೀಗಿರುವುದೇ ಆಕೆಯ ಜಾಯಮಾನವೋ ಬಲ್ಲವರ್‍ಯಾರು?

■ ರಾ. ಸೋಮನಾಥ್

ನಾಗಾಭರಣರ ನಾಗಮಂಡಲಕ್ಕೆ ಸಿಲುಕಿ ಬಿದ್ದವನೇ ಅಯ್ಯಂಗಾರಿ ವಿನಾಯಕ


ಮಲ್ಲೇಶ್ವರದ ಅಯ್ಯಂಗಾರಿ ವಿನಾಯಕ್ ಓದಿದ್ದು ಅಮೆರಿಕದಲ್ಲಿ. ಅನಂತ್‌ನಾಗ್, ಶಂಕರ್‌ನಾಗ್, ಟೈಗರ್ ಪ್ರಭಾಕರ್, ದೇವರಾಜ್ ಎಲ್ಲರ ಜೊತೆಗೂ ನಟಿಸಿದ್ದ ವನಿತಾಗೆ ಇಸವಿ 2000ರ ಹೊತ್ತಿಗೆ ಅಂಥ ಪಾತ್ರಗಳಾಗಲಿ ಇಮೇಜಿಗೆ ತಕ್ಕ ಅವಕಾಶಗಳಾಗಲಿ ಇರಲಿಲ್ಲ. ಗ್ಲಾಮರ್ ಕ್ಷೀಣಿಸುತ್ತಿದ್ದ ಯೌವನ ಮಾಗತೊಡಗಿದ್ದ ಈ ಕಷ್ಟಕಾಲಕ್ಕೆ ಕೈಹಿಡಿದವರು ಟಿ.ಎಸ್. ನಾಗಾಭರಣ. ಅದು 'ನಾಗಮಂಡಲ' ಚಿತ್ರದ ವಿಶಿಷ್ಟ ಪಾತ್ರದ ಮೂಲಕ.


ನಾಗಾಭರಣದ ನಾಗಮಂಡಲದ ಪಾತ್ರ ಆಕೆಯ ಬದುಕಿನಲ್ಲಿ ಎರಡನೇ ಇನ್ನಿಂಗ್ಸ್‌ನ ಅದೃಷ್ಟದ ಬಾಗಿಲಾಗಿತ್ತು. ಈ ಚಿತ್ರದಲ್ಲಿ ವನಿತಾ ವಾಸು ಪಾತ್ರಕ್ಕೆ ಮಾರುಹೋದವನು ವಿನಾಯಕ್ ಅಯ್ಯಂಗಾರ್. ಅದೇತಕ್ಕೋ ಅಮೆರಿಕಕ್ಕೆ ಬಂದಿದ್ದ ವನಿತಾ ವಾಸು ಕಂಡಿದ್ದೇ ವಿನಾಯಕ್ ಪರಿಚಯಿಸಿಕೊಂಡಿದ್ದಾನೆ. ತನಗಿಂತ 11 ವರ್ಷ ಕಿರಿಯನಾದ ಆತನಿಗೆ ತನ್ನ ಮೊಬೈಲ್ ನಂಬರನ್ನೂ ಕೊಟ್ಟಿದ್ದಾಳೆ. ಕಾಲಕ್ರಮೇಣ ಅದೇ ಆಕರ್ಷಣೆಗೆ ತಿರುಗಿದೆ. ಹರೆಯದ ಭ್ರಮೆಗೆ ಬಿದ್ದು ವನಿತಾ ಬೆನ್ನಿಗೆ ಬಿದ್ದ ವಿನಾಯಕ್ ತನ್ನ ತಂದೆತಾಯಿಗೂ ತಿಳಿಸದೇ ಅದ್ಯಾವುದೋ ದೇವಸ್ಥಾನಕ್ಕೊಯ್ದು ವನಿತಾ ಕೊರಳಿಗೆ ತಾಳಿ ಕಟ್ಟಿದ್ದಾನೆ. ಅದೇ ಜೋಷ್‌ಗೆ ಬಿದ್ದು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಮದುವೆ ನೋಂದಾಯಿಸಿದ್ದಾನೆ.


ಏನೇ ಸಂಸಾರವೆಂದರೂ ಭ್ರಮೆಗೂ ವಾಸ್ತವಕ್ಕೂ ವ್ಯತ್ಯಾಸವಿದೆಯಲ್ಲ, ಈಕೆ ಬಿಂದಾಸ್ ನಟಿ. ಆತ ಕರ್ಮಠ ಅಯ್ಯಂಗಾರಿ. ಒಂದೇ ವಯಸ್ಸಲ್ಲ, ಒಂದೇ ಜಾತಿಯಲ್ಲ, ಒಂದೇ ಸಂಪ್ರದಾಯವಲ್ಲ, ನೆತ್ತಿಗೇರಿದ್ದ ಪಿತ್ಥ ಕರಗುವ ಹೊತ್ತಿಗೆ ಕಾಲ ಮಿಂಚಿರಬೇಕು. ಡಾಲರ್ಸ್ ಕಾಲನಿಯ ವಶಿಷ್ಠಧಾಮ ಅಪಾರ್ಟ್‌ಮೆಂಟ್‌ನಿಂದ ವನಿತಾಳನ್ನು ಹೊರದಾಕಲು ವಿನಾಯಕ್ ಯತ್ನಿಸಿದನಾ? ಅಥವಾ ಇನ್ನಾರೋ ಹುಡುಗಿ ಜೊತೆ ಅಫೇರ್ ಶುರುವಿಟ್ಟನಾ ಗೊತ್ತಿಲ್ಲ.

ಸಿನಿಮಾ ಯಾವತ್ತಿದ್ದರೂ ಸಿನಿಮಾನೇ ತಾನೇ? ನಟಿಯೊಬ್ಬಳು ತನ್ನ ಅಭಿಮಾನಿಯನ್ನು ಮದುವೆಯಾಗುವುದೆಂದರೆ ಅಷ್ಟು ಸುಲಭಾನಾ?


ಬಿಬಿಎಂಪಿ ವಿಭಾಗ ಬಿಜೆಪಿ ತಿಪ್ಪರಲಾಗ







ಜುಲೈ 17ಕ್ಕೆ ಪಾಲಿಕೆ ಚುನಾವಣೆಯ ವೇಳಾಪಟ್ಟಿ ಹೊರಬಿತ್ತೆಂದರೆ ಅದು ಸರ್ಕಾರ ಮತ್ತು ಕೋರ್ಟ್ ಸಂಘರ್ಷದ ಸೂಕ್ಷ್ಮ ಘಟ್ಟ ಮುಟ್ಟಿದಂತೆಯೆ. ಕಳೆದೈದು ವರ್ಷಗಳಿಂದ ಬೆಂಗಳೂರನ್ನು ಇನ್ನಿಲ್ಲದಂತೆ ಮುಕ್ಕಿ ಮೂರಾಬಟ್ಟೆ ಮಾಡಿದ ನೂರಕ್ಕೂ ಅಧಿಕ ಬಿಜೆಪಿ ಕೌನ್ಸಿಲರ್‌ಗಳಿಗೆ ನಿರುದ್ಯೋಗವೇ ನರಕದಂತಾಗಿದೆ. ಏನೆಲ್ಲಾ ಹರಸಾಹಸ ಮಾಡಿಯಾದರೂ ಮತ್ತೆ ಪಾಲಿಕೆಯನ್ನು ಹಿಡಿಯಲೇಬೇಕೆಂಬ ಹರಕತ್ತಿಗೆ ಬಿದ್ದ ಬಿಜೆಪಿ ಕೌನ್ಸಿಲರ್‌ಗಳ



ದುರಾಸೆಗೆ ಖುದ್ದು ಬಿಜೆಪಿ ಎಮ್ಮೆಲ್ಲೇಗಳೇ ಅಡ್ಡಗಾಲಿಡುತ್ತಿರುವುದು ಕೂಡ ರಹಸ್ಯವೇನಲ್ಲ!

ಅಷ್ಟಕ್ಕೂ ಶತಗತಾಯ ಪಾಲಿಕೆ ಚುನಾವಣೆ ಮುಂದೂಡಲೇಬೇಕೆಂಬ ಹಠಕ್ಕೆ ಸಿದ್ದು ಸರ್ಕಾರ ಬಿದ್ದಿರುವುದೇಕೆ?

ಅದು ಸೋಲಿನ ಭೀತಿಯೇ? ಹಣಕಾಸು ಮುಗ್ಗಟ್ಟೆ? ಅಥವಾ ಹಗಲುದರೋಡೆಯ ವಿರುದ್ಧದ ಮುಂಜಾಗರೂಕತೆಯೆ?

ಸದ್ಯ ಬೆಂಗಳೂರಿಗೊದಗಿದ ದುರ್ಗತಿಯಿಂದ ಊರನ್ನೂ ಪಾಲಿಕೆಯನ್ನೂ ಬಚಾವು ಮಾಡಲೇಬೇಕೆಂದರೆ ಸಿದ್ದು ಸರ್ಕಾರಕ್ಕೆ ಉಳಿದಿರುವ ಏಕೈಕ ಮಾರ್ಗವೆಂದರೆ ಇಡೀ ಪಾಲಿಕೆಯನ್ನೇ ಬರಖಾಸ್ತು ಮಾಡುವುದು. ಬಿಬಿಎಂಪಿಯ ಸಾಲವೊಂದೇ 8 ಸಾವಿರ ಕೋಟಿ ಮುಟ್ಟಿದೆ. ಈ ಪೈಕಿ ಬ್ಯಾಂಕ್ ಸಾಲದ ಬಡ್ಡಿಯೆಂದು ವರ್ಷವೊಂದಕ್ಕೆ ಪಾಲಿಕೆ ಸರಿಸುಮಾರು ನಾನೂರು ಕೋಟಿಯಷ್ಟನ್ನು ಕಕ್ಕಲೇಬೇಕು. ಬೆಂಗಳೂರಿನ ಐತಿಹಾಸಿಕ ಸ್ಮಾರಕಗಳನ್ನೂ ಬಿಡದಂತೆ ಬ್ಯಾಂಕ್ ಸಾಲಕ್ಕೆ ಒತ್ತೆ ಇಟ್ಟಾಗಿದೆ. ವಿವಿಧ ಕಾಮಗಾರಿಗಳ ಬಾಕಿ ಬಿಲ್ಲೆಂದು ಪಾಲಿಕೆ ಉಳಿಸಿಕೊಂಡಿರುವ ಮೊತ್ತವೇ 3 ಸಾವಿರ ಕೋಟಿಗೂ ಅಧಿಕ. ಇನ್ನು ಚಾಲ್ತಿಯಲ್ಲಿರುವ ಕಾಮಗಾರಿಗಳ ಮೊತ್ತ ಲೆಕ್ಕ ಹಾಕಿದರೆ ಎಲ್ಲ ಸೇರಿ ಅದೇ 7 ಸಾವಿರ ಕೋಟಿ ಮುಟ್ಟುತ್ತದೆ.

ಕೌನ್ಸಿಲರ್ ಕರ್ಮ


ಇಂಥಾ ಪರಿಸ್ಥಿತಿಯಲ್ಲಿ ಮತ್ತೆ ಪಾಲಿಕೆಗೆ ಚುನಾವಣೆ ನಡೆದು ಇನ್ನೂರು ಮಂದಿಯಷ್ಟು ಕೌನ್ಸಿಲರ್‌ಗಳು, ಒಂದು ಡಜನ್ ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಸ್ಥಾಯಿ ಕಮಿಟಿಗಳ ಸದಸ್ಯರು, ಅವರ ಸಂಬಳ, ಭತ್ಯೆ ಕಾರುಗಳ ಬಾಡಿಗೆ, ಪೆಟ್ರೋಲು, ಬಾಟಾ, ಮೇಯರ್ ಉಪಮೇಯರುಗಳ ಫಂಡು ಎಲ್ಲವೂ ಸೇರಿತೆಂದರೆ ತಿಂಗಳೊಂದಕ್ಕೆ ಅದೇ ಐವತ್ತು ಕೋಟಿ ಮುಟ್ಟುತ್ತದೆ. ಇನ್ನು ಇನ್ನೂರು ಮಂದಿ ಕೌನ್ಸಿಲರ್‌ಗಳು ಸೇರಿಕೊಂಡು ಬೆಂಗಳೂರಿನ ಉದ್ಧಾರಕ್ಕೆ ನಿಂತರೆಂದರೆ ಮುಗಿದೇಹೋಯಿತು. ಅವರವರ ವಾರ್ಡುಗಳಿಗೆಂದೇ ಕೋಟಿ ಲೆಕ್ಕದ ಕಳ್ಳಬಿಲ್ಲು ಟೆಂಡರ್‌ಗಳು, ಅವರ ಚೇಲಾಗಳಿಗೆ ಪೀಸ್‌ವರ್ಕ್‌ಗಳು ಹೀಗೆ ಸಿಕ್ಕಸಿಕ್ಕದ್ದಕ್ಕೆಲ್ಲಾ ಪುರಪಿತೃಗಳು ಬಾಯಿಟ್ಟು ಬೆಂಗಳೂರೆಂಬುದು ಮತ್ತೆ ಲೂಟಿಯ ಹುತ್ತವಾಗಿ ನರಳಲೇ ಬೇಕು.

ಮೇಯರ್, ಉಪಮೇಯರ್ ಸೇರಿದಂತೆ ಇನ್ನೂರು ಮಂದಿ ಕಾರ್ಪೊರೇಟರ್‌ಗಳ ಜೇಬು ತುಂಬಿಸುವುದೇ ಏಕಮಾತ್ರ ದಂಧೆಯಾಯಿತೆಂದರೆ ರಸ್ತೆ, ಅಂಡರ್‌ಪಾಸ್, ಫುಟ್‌ಪಾತ್, ಪಾರ್ಕು, ಮೋರಿ, ಗಾರ್ಬೇಜ್, ಟ್ರಾಫಿಕ್, ಪಾರ್ಕುಗಳಿಗೆಲ್ಲ ದುಡ್ಡು ಹೊಂಚುವುದು ಎಲ್ಲಿಂದ?


ಈ ನಿಟ್ಟಿನಲ್ಲಿ ಸಿದ್ದು ಸರ್ಕಾರವನ್ನು ಪದೇಪದೇ ಪಜೀತಿಗೀಡು ಮಾಡುತ್ತಲೇ ಬಂದದ್ದು ಬಿಜೆಪಿ. ಪಾಲಿಕೆಯನ್ನು ವಿಸರ್ಜಿಸಿದ ಮರುಕ್ಷಣವೇ ಮತ್ತೆ ಚುನಾವಣೆ ನಡೆಸುವಂತೆ ಕೋರ್ಟ್ ಮೊರೆ ಹೊಕ್ಕಿದ್ದು ಬಿಜೆಪಿ ಕೌನ್ಸಿಲರ್‌ಗಳಾದ ಸಿ.ಕೆ. ರಾಮಮೂರ್ತಿ ಮತ್ತು ಸೋಮಶೇಖರ್. ಹೈಕೋರ್ಟ್ ಆದೇಶದ ವಿರುದ್ಧ ಸರ್ಕಾರ ಸುಪ್ರೀಂ ಮೆಟ್ಟಿಲೇರಬೇಕಾಯಿತು. ಸುಪ್ರೀಂಕೋರ್ಟ್‌ನಿಂದ ಮತ್ತೆ ಹೈಕೋರ್ಟಿಗೆ ಇಲ್ಲಿಂದ ವಾಪಸ್ಸು ಸುಪ್ರೀಂಗೆ ಹೀಗೆ ಕೋರ್ಟು ಕಟಕಟೆಗೆ ಅಲೆದಲೆದೇ ರೋಸತ್ತ ಸರ್ಕಾರಕ್ಕೆ ಪಾಲಿಕೆಯನ್ನೇ ರದ್ದು ಮಾಡಬೇಕಾದ ಅನಿವಾರ್ಯಕ್ಕೆ ತಂದೊಡ್ಡಿದ್ದೂ ಬಿಜೆಪಿಯೇ.


ಪಾಲಿಕೆಯ ವಿಭಜನೆಯನ್ನೇ ಬೆಂಗಳೂರಿನ ವಿಭಜನೆಯೆಂದು ಬೊಬ್ಬೆ ಹಾಕಿದ ಬಿಜೆಪಿ ನಾಯಕರಿಗೆ ಅದಕ್ಕೆ ಕಾರಣವಾಗಿದ್ದೂ ತಾವುಗಳೇ ಎಂಬ ಕನಿಷ್ಠ ಪರಿವೆಯಿಲ್ಲ!


ಕೇವಲ ಪಾಲಿಕೆ ಚುನಾವಣೆಯನ್ನು ಮುಂದೂಡಲೆಂದು ಸರ್ಕಾರ ವಿಧಾನಸಭೆಯಲ್ಲಿ ಪಾಲಿಕೆ ತ್ರಿಭಜನೆಯ ನಿರ್ಣಯ ಮಂಡಿಸಬೇಕಾಯಿತು. ವಿಧಾನ ಪರಿಷತ್ತಿನಲ್ಲಿ ತನಗಿದ್ದ ಸಂಖ್ಯಾಬಲದಿಂದ ಬಿಜೆಪಿ ಅದಕ್ಕೂ ಕೊಕ್ಕೆಯಿಟ್ಟಿತು. ಎ[illegible] ಎಲೆಕ್ಷನ್ ಮುಂದೂಡಲು ಕೊನೆಯ ಯತ್ನವೆಂಬ[illegible] ಸರ್ಕಾರ ಪಾಲಿಕೆ ಪುನರಚನಾ ವರದಿ ಮಂಡಿಸಹೊರಟ[illegible] ಅದು ಬಿಜೆಪಿಯ ಪಾಲಿಕೆ ಲೂಟಿ ವಿರುದ್ಧ ಸಿದ್ದು ಸರ್ಕಾ[illegible] ಅಂತಿಮ ರಣತಂತ್ರ. ಅದಕ್ಕೊಂದು ನಿವೃತ್ತ ಮುಖ್ಯ ಕಾರ್ಯದ[illegible] ಬಿ.ಎಸ್. ಪಾಟೀಲರ ನೇತೃತ್ವದ ಪಾಲಿಕೆ ಪುನರಚ[illegible] ಸಮಿತಿ ರಚಿಸಿತು. ಪಾಲಿಕೆಯ ಮಾಜಿ ಆಯುಕ್ತ ಸಿದ್ದ[illegible]




ಅನಂತ್ ಬಣಕ್ಕೆ ಪಾಲಿಕೆ ಬೇಡವಾದರೆ ಸದಾನಂದಗೌಡ ನಡೆದೇತೀರಲೆಂದರು!









ಮೇಲುನೋಟಕ್ಕೆ ರಾಜ್ಯ ಬಿಜೆಪಿ ನಾಯಕರೆಲ್ಲ ಪಾಲಿಕೆ ಚುನಾವಣೆಗೆಂದು ಬೊಬ್ಬೆ ಹಾಕುತ್ತಾರಾದರೂ ವಾಸ್ತವವಾಗಿ ಬೆಂಗಳೂರಿನ ಯಾವೊಬ್ಬ ಬಿಜೆಪಿ ಶಾಸಕನಿಗೂ ಪಾಲಿಕೆ ಅಸ್ತಿತ್ವ ಬೇಕಿಲ್ಲ. ತೀರ ಇತ್ತೀಚೆಗೆ ಅರ್ಧ ಡಜನ್ ಬಿಜೆಪಿ ಶಾಸಕರೇ ಪಾಲಿಕೆ ಎಲೆಕ್ಷನ್ ಮಾಡಬೇಡಿ ಎಂದು ಮುಖ್ಯಮಂತ್ರಿಗಳನ್ನು ಕಂಡು ದಮ್ಮಯ್ಯ ಗುಡ್ಡೆ ಹಾಕಿದರಂತೆ!

ಬೆಂಗಳೂರಿನ ಬಿಜೆಪಿ ಶಾಸಕರ ಬೆಂಬಲ ಕಂಡೇ ಮುಖ್ಯಮಂತ್ರಿ ಸಿದ್ದು ಕೂಡ ಪಾಲಿಕೆ ರದ್ದುಪಡಿಸುವ ದುಸ್ಸಾಹಸಕ್ಕೆ ಕೈಯಿಟ್ಟಿರುವುದು. ಪ್ರತಿ ಎಮ್ಮೆಲ್ಲೇ ಅಧೀನದಲ್ಲಿ ಏಳು ಅಥವಾ ಎಂಟು ಮಂದಿ ಕೌನ್ಸಿಲರ್‌ಗಳು ಹುಟ್ಟಿಕೊಂಡರೆಂದರೆ ಜನ ಕಷ್ಟ ತೋಡಿಕೊಂಡು ಕೌನ್ಸಿಲರ್‌ಗಳ ಮನೆಬಾಗಿಲು ಬಡಿಯುತ್ತಾರೇ ಹೊರತು ಎಮ್ಮೆಲ್ಲೇಗೆ ಯಾವುದೇ ಕಿಮ್ಮತ್ತಿಲ್ಲ. ಇದು ಗೊತ್ತಾಗಿಯೇ ಬಿಜೆಪಿಯ ಯಾವೊಬ್ಬ ಶಾಸಕನಿಗೂ ಪಾಲಿಕೆ ಬೇಕಿಲ್ಲ. ಪಾಲಿಕೆ ಅಸ್ತಿತ್ವದಲ್ಲಿಲ್ಲ ಎಂದಮೇಲೆ ಎಮ್ಮೆಲ್ಲೆಯೇ ಸರ್ವಾಧಿಕಾರಿ ಏಕಮೇವಾಧಿಪತಿ.

ಸದ್ಯ ಪಾಲಿಕೆ ಚುನಾವಣೆಯನ್ನು ಬಿಜೆಪಿಯೊಳಗಿದ್ದೇ ವಿರೋಧಿಸುತ್ತಿರುವುದು ಅನಂತ್‌ಕುಮಾರ್ ಬಣ. ಮಾಜಿ ಡಿಸಿಎಂ ಅಶೋಕ್ ಅನಂತ್ ಬಣದ ದಂಡನಾಯಕ. ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ, ಬೆಂಗಳೂರು ದಕ್ಷಿಣದ ಕೃಷ್ಣಪ್ಪ, ಮಲ್ಲೇಶ್ವರದ ಅಶ್ವತ್ಥ ನಾರಾಯಣ, ಯಲಹಂಕ ಶಾಸಕ ವಿಶ್ವನಾಥ್ ರೆಡ್ಡಿ, ದಾಸರಹಳ್ಳಿ ಮುನಿರಾಜು, ಬೊಮ್ಮನಹಳ್ಳಿ ಸತೀಶ್ ರೆಡ್ಡಿ, ಕೆ.ಆರ್. ಪುರಂನ ನಂದೀಶ್ ರೆಡ್ಡಿ ಮುಂತಾದವರ್‍ಯಾರಿಗೂ ಪಾಲಿಕೆ ಚುನಾವಣೆ ಬೇಕಿಲ್ಲ. ಹೇಳಿಕೇಳಿ ಇವರೆಲ್ಲರೂ ಆರ್. ಅಶೋಕ್ ಬೆಂಬಲಿಗರು ಮತ್ತು ರಾಷ್ಟ್ರನಾಯಕ ಅನಂತ್ ಸಾಹೇಬರ ಅನುಯಾಯಿಗಳು.

ಕಾಂಗ್ರೆಸ್ ಸರ್ಕಾರವಿದೆಯಾದ್ದರಿಂದ ತನಗೆ ಬೇಕಾದಂತೆ ಮೀಸಲಾತಿ ರೂಪಿಸಿಕೊಂಡು ಈಗಾಗಲೇ ನೂರಕ್ಕೂ ಅಧಿಕ ಮಂದಿ ಬಿಜೆಪಿ ಕೌನ್ಸಿಲರ್‌ಗಳು ಗೆಲ್ಲಲು ಸಾಧ್ಯವಾಗದ ಹಾಗೆ ಕಾಂಗ್ರೆಸ್ ಕೈಚಳಕ ಮೆರೆದಿದೆ. ಕಳೆದ ಐದು, ಹತ್ತು ವರ್ಷಗಳಿಂದ ಪಾಲಿ[illegible] ಗೆದ್ದು ಬರುತ್ತಿದ್ದ ಬಿ.ಆರ್. ನಂಜುಂಡಪ್ಪ, ಕಟ್ಟೆ ಸತ್ಯ, ರಂಗಣ್ಣ, ಶಾಂತಕುಮಾ[illegible] ರವೀಂದ್ರ, ಸಂಗಾತಿ ವೆಂಕಟೇಶ್, ಎಲ್. ಶ್ರೀನಿವಾಸ್, ಬಸವರಾಜು ಥ[illegible] ಕೌನ್ಸಿಲರ್‌ಗಳ್ಯಾರೂ ಮತ್ತೆ ತಮ್ಮ ಕ್ಷೇತ್ರದಲ್ಲಿ ಕಣಕ್ಕಿಳಿಯುವಂತಿಲ್ಲ. ಪಕ್ಕದ ವಾಡಿ[illegible] ಬಂದರೆ ಠೇವಣಿ ಗಿಟ್ಟುವುದು ಕಷ್ಟ. ಹೀಗಾಗಿ ಈ ಬಾರಿ ಬಿಜೆಪಿ ಏನೇ ಲಗಾ[illegible] ಹೊಡೆದರೂ ಪಾಲಿಕೆಯ ಬಹುತೇಕ ವಾರ್ಡುಗಳೆಲ್ಲ ಕಾಂಗ್ರೆಸ್ ಪಾಲಾಗುವ ಸಾಧ್ಯತೆಗ[illegible] ಹೆಚ್ಚು.

ಇಂಥಾದ್ದರಲ್ಲಿ ತಂತಮ್ಮ ಕ್ಷೇತ್ರಕ್ಕೆ ವಿರೋಧಿ ಕಾಂಗ್ರೆಸ್‌ನ ಕೌನ್ಸಿಲರ್‌ಗಳು ಗೆ[illegible] ಬಂದರೆಂದರೆ ತಮ್ಮ ಎಮ್ಮೆಲ್ಲೇಗಿರಿಗೆ ಈಗಿರುವ ಕಿಮ್ಮತ್ತೂ ಇರುವುದಿಲ್ಲ. ಜನ ತಮ್ಮ[illegible] ಮೂಸಿ ಕೂಡ ನೋಡುವುದಿಲ್ಲ ಎಂಬ ಲೆಕ್ಕಾಚಾರ ಬಿಜೆಪಿ ಶಾಸಕರದ್ದು. ಆ[illegible] ಬಿಜೆಪಿಯ ಮತ್ತೊಬ್ಬ ಕೇಂದ್ರ ಮಂತ್ರಿ ಸದಾನಂದಗೌಡರಿಗೆ ಅನಂತ್-ಅಶೋ[illegible] ಬಣದ ಉದ್ದೇಶ ಬಿಲ್‌ಕುಲ್ ಇಷ್ಟವಿಲ್ಲ. ಏಕೆಂದರೆ ಬೆಂಗಳೂರಿನ ಶಾಸಕರೆಲ್ಲ ಅನ[illegible] ಬೆಂಬಲಿಗರಾದ್ದರಿಂದ ಅವರ ಬಾಲ ಕಟ್ ಆಯಿತೆಂದರೆ ಅದು ತನಗೇ ಲಾಭ. [illegible] ಬೆಂಗಳೂರಿನ ಯಾವೊಬ್ಬ ಬಿಜೆಪಿ ಶಾಸಕರೂ ಸದಾನಂದಗೌಡರ ಬೆನ್ನಿಗಿಲ್ಲ. ಹಾಗಿ[illegible] ಅನಂತ್ ಬಣಕ್ಕೆ ಪಾಲಿಕೆ ಬೇಕಿಲ್ಲವಾದ್ದರಿಂದ ವಿರೋಧಿಗಳ ವಿರೋಧಕ್ಕಾದರೂ ಪಾಲಿ[illegible] ಚುನಾವಣೆ ನಡೆಯಲೆಂದು ಸದಾನಂದಗೌಡರು ಅಖಾಡಕ್ಕಿಳಿದಿದ್ದಾರೆ. ರಾಜ್ಯಪಾ[illegible] ವಜುಭಾಯಿ ವಾಲಾ ಸದಾನಂದಗೌಡರ ಮಾತಿಗೆ ಮಣೆ ಹಾಕುತ್ತಾರಾ ಅಥವಾ ಅನ[illegible] ಹಿತಾಸಕ್ತಿ ಕಾಯುತ್ತಾರಾ ಎಂಬುದೊಂದೇ ಪಾಲಿಕೆಯ ಭವಿಷ್ಯ ನಿರ್ಧರಿಸಲಿದೆ.

ಬಿಜೆಪಿಯ ಮತ್ತೊಬ್ಬ ನಾಯಕ ಸುರೇಶ್‌ಕುಮಾರ್ ಸದ್ಯ ಇವೆರಡೂ ಬಣಗಳ[illegible] ಅಂತರ ಕಾಯ್ದುಕೊಂಡು ಸಮಯ ಕಾಯುತ್ತಾ ಕೂತಿದ್ದಾರೆ!


...ತಜ್ಞ ರವಿಚಂದ್ರನ್, ಸದಸ್ಯ ಕಾರ್ಯದರ್ಶಿ ವಿ. ...ನ್ ಮುಂತಾದವರಿದ್ದ ಸಮಿತಿಯ ಶಿಫಾರಸುಗಳೇ ...ಯು ಷಡ್ಯಂತ್ರಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಸಮಿತಿಯ ಸರ್ಜರಿ

...ಎಸ್. ಪಾಟೀಲ್ ಸಮಿತಿ ಈಗಿರುವ ಪಾಲಿಕೆಯನ್ನೇ ...ಮಾಡಿ ಐದು ಹೊಸ ಪಾಲಿಕೆಗಳ ಸ್ಥಾಪನೆಗೆ ...ುವ ಶಿಫಾರಸ್ಸೊಂದೇ ಸಾಕು. ಈಗಿರುವ ಬಿಬಿಎಂಪಿ ...ನೇ ಅಸ್ತಿತ್ವ ಕಳೆದುಕೊಳ್ಳುತ್ತದೆ. ಮುಂದಿನ 25 ...ಳ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ...ಯನ್ನು ಐದು ಭಾಗಗಳಾಗಿ ವಿಂಗಡಿಸುವುದು ಸಮಿತಿ ...ರುವ ಮಾರ್ಗೋಪಾಯ. ಆ ಪ್ರಕಾರ ಮೇಯರ್ ...ಿ ಜನರಿಂದ ಆಯ್ಕೆಯಾಗಬೇಕು. ಈಗಿರುವ ಒಂದು

ನಾಗರಿಕರ ಪಾಲ್ಗೊಳ್ಳುವಿಕೆಯ ಕೊರತೆಯೂ ನೀಗಿದಂತಾಯ್ತು, ವಿವಿಧ ಸರ್ಕಾರಿ ಇಲಾಖೆಗಳ ಮಧ್ಯೆ ಸಮನ್ವಯದ ಕೊರತೆಯೂ ನೀಗುತ್ತದೆ. ಕೆಲಸಕ್ಕೆ ಬಾರದ 12 ಸ್ಥಾಯಿಸಮಿತಿಗಳನ್ನು ರದ್ದುಗೊಳಿಸುವುದರಿಂದ ವಲಯ ಆಯುಕ್ತರಿಗೆ ಹೆಚ್ಚಿನ ಅಧಿಕಾರ ಸಿಕ್ಕಂತಾಯ್ತು. ಕನ್ನಡಿಗರು ಅಲ್ಪಸಂಖ್ಯಾತರಾಗಿರುವ ಚಿಕ್ಕಪೇಟೆ, ಚಾಮರಾಜಪೇಟೆ, ಶಾಂತಿನಗರ, ಶಿವಾಜಿನಗರ ಮತ್ತು ಗಾಂಧಿನಗರಗಳನ್ನು ಒಂದೇ ವಲಯಕ್ಕೆ ಕಟ್ಟಿಹಾಕದೆ ಅವುಗಳನ್ನು ಬೇರೆ ಬೇರೆ ವಲಯಗಳಿಗೆ ಸೇರಿಸಿದ್ದರಿಂದಾಗಿ ಐದೂ ವಲಯಗಳಲ್ಲಿ ಕನ್ನಡಿಗರದ್ದೇ ನಿರ್ಣಾಯಕ ಸ್ಥಾನವಿದ್ದಂತಾಯ್ತು.

ಪುನರಚನಾ ಸಮಿತಿಯ ಇಂಥ ತೀರ್ಮಾನಗಳೆಲ್ಲವನ್ನೂ ಅಲ್ಲದೆ ಹೋದರೂ ಅರ್ಧದಷ್ಟನ್ನಾದರೂ ಜಾರಿಗೆ ತಂದರೆ



...ಾಬುದು ಕೇವಲ ನಾಮಕಾವಸ್ಥೆಯ ಆಳ್ವಿಕೆಯಿದ್ದಂತೆ. ...ಮೇಯರ್ ಅವಧಿ ಕನಿಷ್ಠ ಐದು ವರ್ಷವಿರಬೇಕು. ...ವ ಹನ್ನೆರಡು ಸ್ಥಾಯಿ ಸಮಿತಿಗಳ ಬದಲಾಗಿ ಕೇವಲ ... ಸ್ಥಾಯಿ ಸಮಿತಿಗಳು ಸಾಕು, ಈಗಿರುವ 200 ...ರ್ಡ್‌ಗಳಿಗೆ ಬದಲಾಗಿ 400 ವಾರ್ಡ್‌ಗಳ ...ರವನ್ನೂ ಸಮಿತಿ ಸೂಚಿಸಿದೆ.

...ವಲ್ಲದೆ ಸಮಿತಿ ಸೂಚಿಸಿದ ಮತ್ತೊಂದು ...ರವೆಂದರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ... ಮೊದಲ ಐದರಿಂದ 10 ವರ್ಷಗಳ ಕಾಲ ...ಮಂತ್ರಿಗಳೇ ಇದರ ಅಧ್ಯಕ್ಷರಾಗಿರುತ್ತಾರೆ. ಆ ನಂತರ ...ಗಕ್ಕೆ 5 ವರ್ಷದ ಮೇಯರ್ ಬರುವುದು. ಈ ...ರ್ ಜನರಿಂದ ನೇರವಾಗಿ ಆಯ್ಕೆಯಾಗುತ್ತಾರಾದ್ದರಿಂದ ...ಬೇರೆಯದೇ ಮಹತ್ವವಿರುತ್ತದೆ. ಇಡೀ ಬೆಂಗಳೂರಿಗೆ ... ಮೇಯರ್ ಸೃಷ್ಟಿಯಾಗಿ ಬೆಂಗಳೂರಿನ ವಿಭಜನೆಯ ... ಹುಟ್ಟುವುದಿಲ್ಲ.

...ಮ ಪುನರಚನಾ ಸಮಿತಿಯ ಮುಖ್ಯ ಸಲಹೆಯಷ್ಟೆ. ... ವಲಯಗಳ ಮೇಯರ್‌ಗಳಲ್ಲದೆ, ನಾನೂರು ...ಗಳ ಪೈಕಿ ಹತ್ತು ಮಂದಿ ಕೌನ್ಸಿಲರುಗಳು, 27 ...ಶಾಸಕರ ಪೈಕಿ ಐದು ಮಂದಿ, ಜಿಲ್ಲಾ ಪಂಚಾಯ್ತಿಗಳ ... ಅಧ್ಯಕ್ಷರುಗಳು, ಪೊಲೀಸ್ ಕಮೀಷನರ್, ...ಂಡಳಿ ಪ್ರತಿನಿಧಿ, ಸರ್ಕಾರಿ ಇಲಾಖೆಗಳ ಪ್ರಮುಖರು ...ೂ ಗ್ರೇಟರ್ ಬೆಂಗಳೂರು ...ರದಲ್ಲಿರುತ್ತಾರಾದ್ದರಿಂದ ಕೌನ್ಸಿಲರ್‌ಗಳೆಂಬ ಲೋಕಲ್ ...ಗಳ ಹಾವಳಿಯಿರುವುದಿಲ್ಲ, ಮುಂದೊಮ್ಮೆ 1300 ... ವ್ಯಾಪ್ತಿಯ ಬಿಡಿಎ ವಲಯವನ್ನೂ ಸೇರಿಸಿ ...ೂರನ್ನು ವಿಸ್ತರಿಸುವುದರಿಂದ ಅದಕ್ಕೊಂದು ...ನಾಬದ್ಧ ಗುರಿಯಿರುತ್ತದೆ. ಇದಕ್ಕೆಂದೇ ಗ್ರೇಟರ್ ...ೂರು ಹಣಕಾಸು ಆಯೋಗವನ್ನೂ ರಚಿಸಲಾಗುತ್ತದೆ.

ಗ್ರೇಟರ್ ಬೆಂಗಳೂರು

...ದು ಐದೂ ಪಾಲಿಕೆಗಳ ಹಣಕಾಸು ನಿರ್ವಹಣೆಯ ...ಬಾರಿಕೆ ವಹಿಸಲಿದ್ದು, ಬಜೆಟ್‌ನ ಗುಣದೋಷ, ...ಗಾರಿಗಳ ಮೌಲ್ಯಮಾಪನ, ಕಾರ್ಯಕ್ಷಮತೆಯ ...ಚಾರಣೆ ಎಲ್ಲವನ್ನೂ ಈ ಆಯೋಗ ನಿಭಾಯಿಸಲಿದೆ. ...ದ ವಾರ್ಡ್ ಕಮಿಟಿಗಳನ್ನು ಬಲಪಡಿಸುವುದು, ...ರ ಸಮಸ್ಯೆಗಳಿಗೆ ಸ್ಪಂದಿಸಲೆಂದೇ ಓಂಬಡ್ಸ್‌ಮ್ಯಾನ್ ...ುಗಳನ್ನು ಸೃಷ್ಟಿಸುವುದು, ನಗರಕ್ಕೆ ಹೊಂದಿಕೊಂಡಂತೆ ...ವ್ಯಾಪ್ತಿಯ 25 ಹಳ್ಳಿಗಳನ್ನು ಗ್ರೇಟರ್ ಬೆಂಗಳೂರು ...ತರುವುದು, ಬೆಂಗಳೂರು ನಗರಕ್ಕೆ ಪ್ರತ್ಯೇಕವಾಗಿಯೇ ...ಕಾಯ್ದೆ ತರುವುದು; ಇತ್ಯಾದಿ ಶಿಫಾರಸ್ಸುಗಳನ್ನು ... ಪಾಟೀಲ್ ಸಮಿತಿ ಮಾಡಿದೆ.

...ಗಿದ್ದ ದುಬಾರಿ ನಾಮಕಾವಸ್ಥೆಯ ಒಂದು ವರ್ಷದ ...ರ್ ಹುದ್ದೆಗೆ ಹೋಲಿಸಿದರೆ ಜನರಿಂದ ನೇರವಾಗಿ ...ವರ್ಷಕ್ಕೆ ಆಯ್ಕೆಯಾಗುವ ಮೇಯರ್ ಮತ್ತೆ ಗೆದ್ದು ...ಬರಲಾದರೂ ಕೆಲಸ ಮಾಡಲೇಬೇಕು. ನಗರಾಡಳಿತದಲ್ಲಿ

ಎಕ್ಕುಟ್ಟ ಬಿಬಿಎಂಪಿಗೊಂದು ಕಾಯಕಲ್ಪ ಮಾಡಿದಂತಾಗುವುದಂತೂ ಸತ್ಯ. ಮೇಲುನೋಟಕ್ಕೆ ಪಾಲಿಕೆ ಎಲೆಕ್ಷನ್ ಮುಂದೂಡಲೆಂದೇ ಸರ್ಕಾರ ಇಂಥಾದೊಂದು ಸಮಿತಿ ಹುಟ್ಟುಹಾಕಿ ಆತುರಾತುರದ ವರದಿ ಮಾಡಿಸಿದಂತಿದೆ ನಿಜ. ಹಾಗಂತ ಮತ್ತೆ ಅದೇ ಮೇಯರ್ ಫಂಡು, ಕೌನ್ಸಿಲರುಗಳ ಲೂಟಿ, ಅದೇ ರಸ, ಅದೇ ಕಲ್ಲು ಹೊಸಬಿಲ್ಲು ಹಾವಳಿಯಿಂದ ಮುಕ್ತಿಯಾದರೂ ಸಿಗುತ್ತದೆಯಲ್ಲವೇ?

ರಾಜ್ಯಪಾಲರ ರಾಜಕೀಯ!

ಇದು ಬಿಜೆಪಿ ಷಡ್ಯಂತ್ರಕ್ಕೆ ಸಿದ್ದು ಸರ್ಕಾರ ರೂಪಿಸಿದ ಪ್ರತಿತಂತ್ರ. ಇದನ್ನು ಹಾಲಿ ಅಧಿವೇಶನದಲ್ಲೇ ಮಂಡಿಸಿ ಬಹುಮತದ ನಿರ್ಣಯ ಕೈಗೊಂಡು ರಾಜ್ಯಪಾಲರಿಂದ ಅಂಗೀಕಾರವಾಯಿತೆಂದರೆ, ಅಲ್ಲಿಗೆ ಬಿಬಿಎಂಪಿಯೇ ರದ್ದಾದ ಹಾಗೆಯೆ. ಪಾಲಿಕೆಯೇ ರದ್ದಾಯಿತೆಂದರೆ ಅದಕ್ಕೆ ಚುನಾವಣೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲವಲ್ಲ!

ಆದರೆ ಸಮಸ್ಯೆಯಿರುವುದು ರಾಜ್ಯಪಾಲರ ಅಂಗೀಕಾರ ಪಡೆಯುವಲ್ಲಿ. ಈಗಾಗಲೇ ತ್ರಿಭಜನೆಯ ನಿರ್ಣಯವನ್ನು ರಾಜ್ಯಪಾಲರು ವಾಪಸ್ಸು ಕಳಿಸಿದ್ದಾಗಿದೆ. ಈಗ ಮತ್ತೆ ಅದೇ ರೀತಿ ವಾಪಸ್ಸು ಮಾಡಲಾಗುವುದಿಲ್ಲ. ವಿಧಾನಸಭೆಯ ಬಹುಮತದ ನಿರ್ಣಯವೊಂದನ್ನು ರಾಜ್ಯಪಾಲರು ಎರಡನೇ ಬಾರಿಗೆ ತಿರಸ್ಕರಿಸುವ ಪ್ರಶ್ನೆಯೇ ಇಲ್ಲ. ಹಾಗೊಮ್ಮೆ ಒಂದು ತಿಂಗಳ ಮಟ್ಟಿಗೆ ರಾಜ್ಯಪಾಲರೇನಾದರೂ ಕಾಲಹರಣ ಮಾಡಿದರೆಂದರೆ ಅಲ್ಲಿಗೆ ಎಲೆಕ್ಷನ್ ಮುಂದೂಡುವ ಸರ್ಕಾರದ ಹೋರಾಟಕ್ಕೆ ಸೋಲಾದಂತೆಯೆ. ಅತ್ತ ನಿರ್ಣಯಕ್ಕೆ ಅಂಗೀಕಾರವನ್ನೂ ಹಾಕದೆ ತಿರಸ್ಕರಿಸದೆಯೂ ಮಾಡದೆ ಪರಿಶೀಲನೆಗೆಂದೇ ಇಟ್ಟುಕೊಂಡು ಚುನಾವಣೆ ತನಕ ರಾಜ್ಯಪಾಲರು ಕಾಲತಳ್ಳಿದರೆಂದರೆ ವಿಧಿಯಿಲ್ಲದೆ ಸರ್ಕಾರ ಪಾಲಿಕೆ ಚುನಾವಣೆಗೆ ತಲೆಕೊಡಲೇಬೇಕು.

ಇಂಥಾದ್ದೊಂದು ಸಂದಿಗ್ಧ ಪಜೀತಿಗೆ ಸರ್ಕಾರವನ್ನೂ ಬೆಂಗಳೂರಿನ ಭವಿಷ್ಯವನ್ನೂ ತಂದು ನಿಲ್ಲಿಸಿದ್ದು ಬಿಜೆಪಿಯೆ. ಒಮ್ಮೆ ಚೆಂಡು ರಾಜ್ಯಪಾಲರ ಅಂಗಳಕ್ಕೆ ಬಂದು ಬಿತ್ತೆಂದರೆ ಅದು ಬಿಜೆಪಿಯ ನಿರ್ಧಾರಕ್ಕೆ ಬಂದು ನಿಂತಂತೆಯೆ. ಏಕೆಂದರೆ ರಾಜ್ಯಪಾಲ ವಜುಭಾಯಿ ವಾಲಾ ಹೇಳಿಕೇಳಿ ಬಿಜೆಪಿಯ ಆಜ್ಞಾಪಾಲಕ. ಹೈಕೋರ್ಟ್ ಈಗಾಗಲೇ ಚುನಾವಣೆಯ ಪಟ್ಟು ಹಾಕಿಯಾಗಿದೆ. ಜುಲೈ 17ಕ್ಕೆ ರಾಜ್ಯ ಚುನಾವಣಾ ಆಯೋಗ ವೇಳಾಪಟ್ಟಿಯನ್ನೂ ಪ್ರಕಟಿಸಲಿದೆ. ವಿಧಾನಸಭೆಯ ಅಧಿವೇಶನದಲ್ಲಿ ಗ್ರೇಟರ್ ಬೆಂಗಳೂರಿನ ನಿರ್ಣಯವೂ ಅಣಿಗೊಂಡಿದೆ. ಪ್ರಶ್ನೆಯೊಂದೇ ರಾಜ್ಯಪಾಲರು ಅಂಗೀಕಾರ ಹಾಕುತ್ತಾರಾ ಅಥವಾ ಕಾಲಹರಣ ಮಾಡುತ್ತಾರಾ?

ಅಂಗೀಕರಿಸಿದ್ರೆ ಅದರ ರಾಜ್ಯ ಬಿಜೆಪಿ ನಾಯಕರಿಗೇ ಪಾಲಿಕೆ ಎಲೆಕ್ಷನ್ ಬೇಕಿಲ್ಲವೆಂದರ್ಥ. ಕಾಲ ನೂಕಿದರೆಂದರೆ ಪಾಲಿಕೆಗೆ ಪಹರಿಸುವ ಬಿಜೆಪಿ ದಾಹಕ್ಕೆ ಯಶಸ್ಸಾದಂತೆಯೇ ಲೆಕ್ಕ.


■ ರಾ.ಸೋಮನಾಥ್

ಬಿಜೆಪಿ ಸೈತಾನ್ ಸಚ್ ಬೋಲ್ತಾ ಹೈ!

ನಮ್ಮ ಸರಸ್ವತಿ ಸಮ್ಮಾನ್ ಸಾಹಿತಿ ಭೈರಪ್ಪನವರು ಅನ್ನಭಾಗ್ಯ ಅದಿಕೊಂಡಿದ್ದರಿಂದ ಸಿಟ್ಟಾದ ಕೆಲವು ಅನ್ನಪ್ರಿಯರು ಮೈಸೂರಲ್ಲೇ ಸಭೆ ಮಾಡಿ ಭೈರಣ್ಣನ ಮಾನವನ್ನ ಮೂರು ಕಾಸಿಗೆ ಹರಾಜು ಹಾಕಿದರಂತಲ್ಲಾ, ಇದರಿಂದ ಮತ್ತೂ ಕೆರಳಿದ ಭೈರಪ್ಪ ಕಾದಂಬರಿ ಕೆರೆಯುವ ನಿಷ್ಠೆಯಲ್ಲೇ ಪುಟಗಟ್ಟಲೆ ಪ್ರತಿಕ್ರಿಯೆ ಬರೆದು ಪತ್ರಿಕೆಗೆ ಕೊಟ್ಟರಂತಲ್ಲಾ, "ಸರಕಾರ ಫ್ಯಾಕ್ಟರಿ ಹಾಕಿ ಉದ್ಯೋಗ ಕೊಟ್ಟರೆ ಆ ಉದ್ಯೋಗದಿಂದ ಸಂಬಳ ಪಡೆದ ನೌಕರರು ತೆರಿಗೆ ಕಟ್ಟುತ್ತಾರೆ, ಸಂಜೆ ಕುಡಿಯುತ್ತಾರೆ, ಬೊಂಡ ತಿನ್ನುತ್ತಾರೆ, ಅವರ ಮೇಲಿನ ಟ್ಯಾಕ್ಸ್‌ನಿಂದ ಸರಕಾರದ ಖಜಾನೆಯೇ ತುಂಬಿತುಳುಕುತ್ತೆ" ಎಂದು ಗುಜರಾತಿನಿಂದ ಬಂದ ಮಾರ್ವಾಡಿಯಂತೆ ಮಾತನಾಡಿದ್ದಾರಲ್ಲಾ, ಭೈರಣ್ಣನ ಮಾತುಗಳು ಅನ್ನಭಾಗ್ಯದ ವಿರೋಧಿಗಳಿಗೆಲ್ಲಾ ಆಪ್ಯಾಯಮಾನವಾಗಿ ಕಾಣಿಸಿ, ಹಳೆಮನುಷ್ಯನಾದ ಡಿ.ಎಸ್. ನಾಗಭೂಷಣ "ಭೈರಪ್ಪನ ಮಾತಿಗೆ ನನ್ನ ಸಂಪೂರ್ಣ ಸಹಮತವಿದೆ. ಅದಕ್ಕಾಗಿಯೇ ನನ್ನ ಪತ್ರಿಕೆ ಹೊಸ ಮನುಷ್ಯನಲ್ಲಿ ಹಳೆ ಮನುಷ್ಯರ ಅಭಿಪ್ರಾಯ ಪ್ರಕಟಿಸಿದ್ದೇನೆ" ಎಂದರಂತಲ್ಲಾ, ಥೂತ್ತೇರಿ!

* * *

ಈ ಭೈರಪ್ಪ ಅನ್ನಭಾಗ್ಯ ವಿರೋಧಿಸಲು ಸಾಕ್ಷಿಯಾಗಿ ಬಳಸಿಕೊಂಡಿರುವುದು ಸೆಲೂನ್ ಮಾಲೀಕನೊಬ್ಬನ ಅಭಿಪ್ರಾಯ. ಅಲ್ಲಿಗೆ 'ಭೈರಪ್ಪ ಹೋದಾಗ ಮಾಲೀಕನಿಗೆ ಅಷ್ಟೊಂದು ಕೆಲಸವಿರುವುದಿಲ್ಲ. ಭೈರಪ್ಪ ಮನೆಯಲ್ಲೇ ಮಕ ಚವ್ರರ



ಮಾಡಿಕೊಳ್ಳುವುದರಿಂದ ತಲೆಯ ಮೇಲಿನ ಹದಿನಾರು ಕೂದಲು ನೀಟು ಮಾಡುವುದು ಅಷ್ಟು ಕಷ್ಟವಲ್ಲ. ಆಗಿನ ಲೋಕಾಭಿರಾಮದ ಮಾತಿನಲ್ಲಿ ಕ್ಷೌರದಂಗಡಿ ಮಾಲೀಕ ಅನ್ನಭಾಗ್ಯ ವಿರೋಧಿಸಿರುವುದು ಸರಿ. ಯಾಕೆಂದರೆ, ನಮ್ಮ ನಡುವೆ ಇರುವ ಕ್ಷೌರಿಕ ಬಂಧುಗಳು ಈವರೆಗೆ ನಿರುದ್ಯೋಗವನ್ನು ಅನುಭವಿಸಿಲ್ಲ, ಅನ್ನಕ್ಕೂ ತೊಂದರೆಯಿಲ್ಲ. ದಿನದಲ್ಲಿ ಮೂರು ಕಟಿಂಗ್, ಆರು ಶೇವಿಂಗ್ ಮಾಡಿದರಾಯ್ತು, ಅವನಿಗೆ ಹಸಿದ ಹೊಟ್ಟೆಗಳು ಜ್ಞಾಪಕ ಬರಲಾರವು. ಅಂತವನ ಅಭಿಪ್ರಾಯವೇ ಅಂತಿಮ ಎಂಬಂತೆ ಬರೆದಿರುವ ಭೈರಪ್ಪ ತನ್ನ ಕೃತಿಗಳ ಅಜೆಂಡಾಕ್ಕೆ ಹೇಗೆ ನೇತು ಬಿದ್ದಿದ್ದಾರೊ ಹಾಗೇ ಅನ್ನಭಾಗ್ಯದ ಅಭಿಪ್ರಾಯಕ್ಕೂ ಗಂಟುಬಿದ್ದಿದ್ದಾರೆ. ಆದ್ದರಿಂದ ಆತನನ್ನ ಕನ್ನಡ ಸಾಹಿತ್ಯದ ನವ್ಯ ವಿಮರ್ಶಕರು ನಿರ್ಲಕ್ಷಿಸಿದಂತೆ ನಾವೂ ಕೂಡ ನಿರ್ಲಕ್ಷಿಸಿಬಿಡೋಣ ಎಂದು ಮರುಳ ಸಿದ್ದಪ್ಪನವರ ಕಡೆ ಸಾಹಿತಿಗಳು ಮಾತನಾಡಿಕೊಂಡರಂತಲ್ಲ, ಥೂತ್ತೇರಿ!!

* * *

ಥೂತ್ತೇರಿ

▸ ಯಾಹೂ

ಬೆಳಗಾವಿಯ ಮೇಲೆ ದಂಡೆತ್ತಿ ಹೋದಂತೆ ದಾಳಿಯಿಟ್ಟಿದ್ದ ಮಂತ್ರಿ ಮಹೋದಯರು ಮತ್ತು ಶಾಸಕ ಶೋಷಕರು ವಾರ ಕಳೆಯುವಷ್ಟರಲ್ಲಿ ಉತ್ಸಾಹವನ್ನೇ ಕಳೆದುಕೊಂಡು ಕಡೆಕಡೆಗೆ ಸದನದಲ್ಲಿ 20 ಜನರಿದ್ದರಂತಲ್ಲಾ, ಯಾಕೀಗೆಂದು ಸುವರ್ಣಸೌಧದ ಹೊರಗಿದ್ದ ಹೊಸ ಶಾಸಕನನ್ನು ಕೇಳಿದರೆ "ನಮಗೆ ಇಲ್ಲಿ ಊಟ ಸೆಟ್ಟಾಗದಿಲ್ಲ, ಹೋಗ್ಲಿ ಸದನದ ಒಳಕೆ ಹೋಗಣ ಅಂದ್ರೆ ಯಾರೂ ಚೆನ್ನಾಗಿ ಮಾತಾಡಲ್ಲ. ಆ ಬಿಜೆಪಿಗಳು ಇವತ್ತಿಗೂ ಸದನದ ಭಾಷೆಗೇನೇ ಕಲಿಲಿಲ್ಲ, ನಾವು ಚರ್ಚೆನ ಎಷ್ಟು ಬೇಕಾದ್ರು ಕೇಳ್ತೀವಿ. ಜಗಳನ ಬಹಳ ಹೊತ್ತು ಸಹಿಸಿಗಳಕ್ಕಾಗಲ್ಲ, ಅದ್ಕೆ ಬೇಜಾರಾಯ್ತು, ಹೊರಗೆ ಬಂದು ನಿಂತಿದ್ದಿನಿ" ಅಂದನಲ್ಲಾ, ಹಳೆ ಮೈಸೂರಿನಿಂದ ಬೆಳಗಾವಿಗೆ ಹೋಗಿ ವಾರದಲ್ಲೇ ಬೇಸರಪಟ್ಟುಕೊಳ್ಳುವ ಈ ಶಾಸಕರಿಗೆ ಹೋಲಿಸಿದರೆ ನಮ್ಮ ಉತ್ತರ ಕರ್ನಾಟಕದ ಶಾಸಕರು ಈವರೆಗೂ ಬೆಂಗಳೂರಿಗೆ ಬಂದು ಉತ್ಸಾಹವನ್ನೇ ಕಳೆದುಕೊಂಡಿಲ್ಲವಲ್ಲಾ, ಥೂತ್ತೇರಿ!!!

* * *

ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಭಾಗದ ಜನರ ಸಮಸ್ಯೆಯ ಚರ್ಚೆಯಾಗುತ್ತದೆಂದು ಆ ಭಾಗದ ಜನ ಕಾದಿದ್ದರಂತಲ್ಲಾ, ಆದರೆ ಜೆಡಿಎಸ್‌ನವರು ಆ ಭಾಗದಲ್ಲಿ ಪಾರ್ಟಿ ಕಟ್ಟಲೋಸ್ಕರ ರೈತರ ಹೆಗಲ ಮೇಲಿನ ಹಸಿರು ಟವಲ್ ತೆಗೆದು ಹೆಗಲಿಗಾಕಿಕೊಂಡು, ಸಾವಿರಾರು ಜನರನ್ನ ಸೇರಿಸಿ, ಈ ಭಾಗದಿಂದ ಏನಾದರೂ ಮಾಡಿ 20 ಶಾಸಕರನ್ನ ಆರಿಸಿಕೊಂಡು ಹೋಗಬೇಕೆಂದು ಚರ್ಚಿಸುತ್ತಿದ್ದೆಯಂತಲ್ಲಾ, ಯಾವ ಪಾರ್ಟಿಯಲ್ಲಿದ್ದರಲೂ ಯೋಗ್ಯನಲ್ಲದ ಪಾಟೀಲ್ ನಡಹಳ್ಳಿ ಎಂಬ ತ್ರಿಶಂಕು ಶಾಸಕ, ಫೈಲ್ ಹಿಡಿದು ಜೆಡಿಎಸ್ ಗುಂಪಿಗೆ ಬಂದು "ಪ್ರತ್ಯೇಕತಾ ಕೂಗಿಗೆ ಇನ್ನಷ್ಟು ಪಾಯಿಂಟು ಬೇಕ್ರಿ ಸರ್" ಎಂದು ಕುಮಾರಣ್ಣನ ಹತ್ತಿರಕ್ಕೆ ಬಂದನಂತಲ್ಲಾ, ಕೂಡಲೇ ಕುಮಾರಣ್ಣ "ಸ್ವಲ್ಪ ಇರಿ ಬ್ರದರ್" ಎಂದಾಗ ಸುತ್ತಲಿದ್ದ ಜೆಡಿಎಸ್‌ನವರೇ ಅಚ್ಚರಿಗೊಂಡರಂತಲ್ಲಾ, ಇನ್ನ ಇಂತದ್ದೇ ಒಂದು ಫೈಲ್ ಹಿಡಿದು ಸಿಎಂ ಸಹಿಗೆ ಹೋದ ಅಂಬರೀಶಣ್ಣ ತನ್ನ ಹಿಂಬಾಲಕರ ಸ್ಥಾನಮಾನದ ಬಗ್ಗೆ ಸಹಿ ಪಡೆಯಲು ಸಿದ್ದು ಎದುರು ಫೈಲ್ ಹಿಡಿದಾಗ "ಬೆಂಗಳೂರಲ್ಲಿ ಹಾಕ್ತಿನಿ ನಡಿ" ಎಂದರಂತಲ್ಲಾ, ಆಗ ಸಿಟ್ಟಾದ ಅಂಬಿ ಸದನವನ್ನ ತ್ಯಜಿಸಿ ಗೆಳೆಯನ ಭುಜ ಹಿಡಿದುಕೊಂಡೇ ಬೆಂಗಳೂರು ತಲುಪಿದನಂತಲ್ಲಾ, ಥೂತ್ತೇರಿ!!

* * *

ಪ್ರಪಂಚದಲ್ಲಿ ಕೈಗಾರಿಕೆಗಳು ಹುಟ್ಟಿಕೊಂಡು ಇನ್ನೂರು ವರ್ಷಗಳಾಗಿವೆ. ಅಂದಿನಿಂದ ನಿರಂತರವಾಗಿ ಮನುಷ್ಯನ ದಾಳಿ ಇಲ್ಲಿನ ಗುಡ್ಡ, ಕಾಡು, ಬೆಟ್ಟ, ನದಿ ಮೇಲೆ ನಡೆದಿದೆ. ಅಷ್ಟೇ ಅಲ್ಲ, ಭೂಗರ್ಭಕ್ಕೂ ಕೈಹಾಕಿದ್ದಾನೆ. ಇದರ ಪರಿಣಾಮ ಜಗತ್ತಿನಲ್ಲಿ ತಾಪಮಾನ ಏರಿದೆ. ಅಪರೂಪದ ಜೀವರಾಶಿ ಒಂದೊಂದೇ ಕಣ್ಮರೆಯಾಗುತ್ತಿದೆ. ನಮ್ಮೆದುರು ಜಲಕ್ಷಾಮವಿದೆ. ಬಹಳ ದೂರ ಏನೂ ಇಲ್ಲ, ಇನ್ನು ಇಪ್ಪತ್ತು ವರ್ಷಗಳಲ್ಲಿ ಭೂಮಂಡಲದಲ್ಲಿ ಏನಾದರೂ ಆಗಬಹುದು. ಇದು ವಿಜ್ಞಾನಿಗಳು ಜಗತ್ತಿಗೆ ಕೊಟ್ಟಿರುವ ಎಚ್ಚರಿಕೆ. ಆದರೆ ನಮ್ಮ ಮೋದಿ ಆಸ್ಥಾನದ ಬೋಳುಬುರುಡೆ ಜ್ಯೋತಿಷಿಯೊಬ್ಬ "ಇನ್ನ ಕೇವಲ 25 ವರ್ಷದಲ್ಲಿ ಅಚ್ಛೇ ದಿನಗಳನ್ನು ಕಾಣಲಿದ್ದೇವೆ. ಯಾರೂ ಹೆದರಬೇಡಿ. ಇನ್ನ 25 ವರ್ಷಕ್ಕೆ ಭಾರತ ಜಗತ್ತಿನಲ್ಲೇ ಸರ್ವಶ್ರೇಷ್ಠ ಬದ್ಧ ದೇಶವಾಗಿ ಕಂಗೊಳಿಸುತ್ತದೆ. ಅಲ್ಲಿಯವರೆಗೂ ಎಲ್ಲವನ್ನೂ ಸಹಿಸಿಕೊಳ್ಳಿ" ಎಂದನಂತಲ್ಲಾ, ಅದೂ ಅತ ಅನಿಲ ದುರಂತ ಸಂಭವಿಸಿದ ಭೋಪಾಲ್‌ನಲ್ಲಿ ನಿಂತು ಹೇಳಿದ್ದನ್ನ ಕೇಳಿದ ಭೋಪಾಲ್ ನಾಗರು "ಕ್ಯಾ ಬೋಲ್ತಾ ಹೈ ಎ ಬಿಜೆಪಿ ಸೈತಾನ್. ಸಚ್ ಬೋಲ್ತಾ ಹೈ" ಎಂದು ನಕ್ಕರಂತಲ್ಲಾ, ಥೂತ್ತೇರಿ!!! ■

ವ್ಯಾಪಂ ಬಿಜೆಪಿಯ ಕಿಲ್ಲರ್ ಸ್ಕ್ಯಾಂಡಲ್!!

"ಮಧ್ಯಪ್ರದೇಶದ ವ್ಯಾಪಂ ಹಗರಣ". ಸುದ್ದಿ ಮಾಧ್ಯಮಗಳಲ್ಲಿ ಆಗಾಗ ಈ ಸುದ್ದಿ ಬಂದಹಾಗೇ ಮಾಯವಾಗಿ ಬಿಡುತ್ತದೆ. ಇದೀ ದೇಶದ ಇತಿಹಾಸದಲ್ಲಿ ಅಂದರೆ ನಿರ್ವಿಕ್ಷವಾಗಿ ಹಗರಣಗಳ ಇತಿಹಾಸದಲ್ಲೇ ಇದೊಂದು ವಿಶಿಷ್ಟವಾದ ಹಗರಣ. ಈ ಹಗರಣದಲ್ಲಿ ಮಾಮೂಲಿಯಂತೆ ಬರೀ ಅವ್ಯವಹಾರ, ಅಕ್ರಮಗಳು ಮಾತ್ರ ನಡೆದಿಲ್ಲ. ಈ ಹಗರಣ ಹೊರಬಿದ್ದ ಈ ಎರಡು ವರ್ಷಗಳಲ್ಲಿ ಸಾಲು ಸಾಲು ಕೊಲೆಗಳು ನಡೆದುಹೋಗಿವೆ. ಒಂದಲ್ಲ, ಎರಡಲ್ಲ, ಬರೋಬ್ಬರಿ 48 ಕೊಲೆಗಳು! ಈ ಕೊಲೆಗಳ ಸರಣಿ ಇನ್ನೂ ಮುಗಿದಂತೆ ಕಾಣುತ್ತಿಲ್ಲ. ದಿನಗಳು ಉರುಳಿದಂತೆಲ್ಲಾ ಹೆಣಗಳು ಬೀಳುತ್ತಲೇ ಇವೆ. ಈ ರಾಕ್ಷಸ ಹಗರಣ ಪ್ರತಿ ವಾರವೂ ಹೊಸಹೊಸ ಬಲಿ ಬೇಡುತ್ತಲೇ ಇದೆ.

ಜುಲೈ 4ರಂದು ಈ ಬಗ್ಗೆ ವರದಿ ಮಾಡಲಿಕ್ಕಾಗಿ ಅಕ್ಷಯ್ ಸಿಂಗ್ ಎಂಬ 38 ವರ್ಷ ವಯಸ್ಸಿನ ಆಜ್‌ತಕ್ ಟಿವಿ ಚಾನೆಲ್‌ನ ಯುವ ಪತ್ರಕರ್ತ ದೆಹಲಿಯಿಂದ ಭೋಪಾಲ್‌ಗೆ ಬಂದಿದ್ದ. ಎರಡು ವರ್ಷಗಳ ಹಿಂದೆ ರೈಲ್ವೆ ಹಳಿಗಳ ಬದಿಯಲ್ಲಿ ಹೆಣವಾಗಿ ಹೋದ ನಮ್ರತಾ ದಾಮೋರ್ ಎಂಬ 24 ವರ್ಷ ವಯಸ್ಸಿನ ಮೆಡಿಕಲ್ ಸ್ಟೂಡೆಂಟ್‌ನ ಸಾವಿನ ಬಗ್ಗೆ ತನಿಖೆ ನಡೆಸುವುದು ಆತನ ಉದ್ದೇಶವಾಗಿತ್ತು. ಕೊಲೆಯಾದ ನಮ್ರತಾಳ ತಂದೆ ಮೆಹತಾಬ್ ಸಿಂಗ್‌ರ ಸಂದರ್ಶನ ಮಾಡಿ, ಮುಂದಿನ ತನಿಖೆಗೆ ಹೊರಡುತ್ತಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಕುಸಿದುಬಿದ್ದ. ಮೆಹತಾಬ್ ಸಿಂಗ್ ಹೇಳಿರುವುದೇನೆಂದರೆ ಸುಮಾರು ಅರ್ಧ ಗಂಟೆಯ ಸಂದರ್ಶನ ಮುಗಿಸುತ್ತಿದ್ದ ವೇಳೆಯಲ್ಲೇ ಅಕ್ಷಯ್ ಕೆಮ್ಮಲು ಶುರು ಮಾಡಿದ. ಬಾಯಿಂದ ವಿಪರೀತ ನೊರೆ ಬರಲು ಶುರುವಾಯ್ತು. ಮೊದಲಿಗೆ ಆತನನ್ನು ಸರ್ಕಾರಿ ಆಸ್ಪತ್ರೆಯೊಂದಕ್ಕೆ ಕರೆತರಲಾಯ್ತು. ನಂತರ ಖಾಸಗಿ ಆಸ್ಪತ್ರೆಗೆ ಸೇರಿಸಲಾಯ್ತು. ಅಲ್ಲೇ ಆತ ಸಾವನ್ನಪ್ಪಿದ. ಆತನ ಮರಣೋತ್ತರ ಪರೀಕ್ಷೆಯ ವರದಿಯ ಪ್ರಕಾರ ಇದು ಸಹಜವಾದ ಸಾವು.. ಹೃದಯಾಘಾತ! ಬಾಯಲ್ಲಿ ನೊರೆ ಬರುತ್ತಿದ್ದು ವಿಷಪ್ರಾಶನ ಆಗಿರಬಹುದೆಂದು ಆತನ ಬಂಧುಗಳ ಅನುಮಾನ.



ಮರುದಿನ ಅಂದರೆ ಜುಲೈ 5ರಂದು ದೆಹಲಿಯ ಹೋಟೆಲೊಂದರಲ್ಲಿ ಡಾಕ್ಟರ್ ಅರುಣ್ ಶರ್ಮ ಎಂಬ ಮತ್ತೊಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಹೆಣವಾಗಿ ಹೋದರು. ಈತ ಕೂಡ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಜಬಲ್‌ಪುರ್‌ನ ನೇತಾಜಿ ಸುಭಾಷ್‌ಚಂದ್ರ ಬೋಸ್ ಮೆಡಿಕಲ್ ಕಾಲೇಜಿನ ಡೀನ್ ಆಗಿದ್ದವರು. ಇನ್ನೂ ಕುತೂಹಲಕಾರಿ ಸಂಗತಿಯೇನೆಂದರೆ ಇವರು ಈ ಕಾಲೇಜಿಗೆ ಡೀನ್ ಆಗಿ ಬಂದಿದ್ದದ್ದು ತೀರಾ ಇತ್ತೀಚೆಗಷ್ಟೆ. ಈ ಹಿಂದೆ ಡೀನ್ ಆಗಿದ್ದ ಡಾಕ್ಟರ್ ಡಿ.ಕೆ.ಸಕಾಲೆ ಅವರಿಗೂ ಇದೇ ಗತಿಯಾಗಿತ್ತು. ಇಲ್ಲಿಗೆ ಒಂದು ವರ್ಷದ ಹಿಂದೆ ಅಂದರೆ 2014ರ ಜುಲೈ 4ರಂದು ತಮ್ಮ ಮನೆಯ ಆವರಣದಲ್ಲೇ ಸುಟ್ಟು ಕರಕಲಾದ ಶವ ಪತ್ತೆಯಾಗಿತ್ತು. ಪೊಲೀಸರು ಅದನ್ನು ಆತ್ಮಹತ್ಯೆ ಎಂದು ಹೇಳದಿದ್ದರೂ ಮಾಧ್ಯಮಗಳು ಅದು ಆತ್ಮಹತ್ಯೆಯೇ ಎಂದು ತೀರ್ಪು ಪ್ರಕಟಿಸಿಬಿಟ್ಟಿದ್ದವು.

ಡಿ.ಕೆ.ಸಕಾಲೆಯವರ ಆಪ್ತರಾಗಿದ್ದ ಅರುಣ್ ಶರ್ಮ ಪ್ರಕಾರ ಸಕಾಲೆ ಆತ್ಮಹತ್ಯೆ ಮಾಡಿಕೊಳ್ಳುವಂಥ ವ್ಯಕ್ತಿಯಲ್ಲ. ಹೀಗಾಗಿ ತಮ್ಮ ಗೆಳೆಯನ ಸಾವಿನ ಬಗ್ಗೆ ಸೂಕ್ತ ತನಿಖೆಗೆ ಒತ್ತಾಯಿಸಿದ್ದರು; ಮಾತ್ರವಲ್ಲ ವ್ಯಾಪಂ ಹಗರಣಕ್ಕೆ ಸಂಬಂಧಿಸಿ ತಮ್ಮ ಕಾಲೇಜಿನಲ್ಲಿ ಲಭ್ಯವಿದ್ದ ಎಲ್ಲ ದಾಖಲೆಗಳನ್ನು ಒದಗಿಸಿ, ತನಿಖಾ ತಂಡಕ್ಕೆ ಸಂಪೂರ್ಣ ಸಹಕಾರ ಕೊಟ್ಟಿದ್ದರು. ಹೀಗಾಗಿ ಒಂದೇ ಕಾಲೇಜಿನ ಇಬ್ಬರು ಡೀನ್‌ಗಳು ಬಲಿಯಾಗಿಹೋದರು.


ಅದರ ಮರುದಿನ ಅಂದರೆ ಜುಲೈ 6ರಂದು ಸಬ್ ಇನ್ಸ್‌ಪೆಕ್ಟರ್ ತರಬೇತಿಯಲ್ಲಿದ್ದ ಅನಾಮಿಕಾ ಖುಶ್ವಾಹ ಎಂಬ ಯುವತಿ ಸಾಗರ್ ಜಿಲ್ಲೆಯ ಕೆರೆಯೊಂದರ ಬಳಿ ಹೆಣವಾಗಿ ಬಿದ್ದಿದ್ದಳು. 2014ರಲ್ಲಿ ಅಕ್ರಮ ನೇಮಕಾತಿಯಾದವರ ಪಟ್ಟಿಯಲ್ಲಿ ಈಕೆಯ ಹೆಸರೂ ಇತ್ತು. ಅದೇ ದಿನ ಪ್ರವಾಸಿ ಠಾಣದ ಪೊಲೀಸ್ ಔಟ್‌ಪೋಸ್ಟ್ ಒಂದರ ಸೀಲಿಂಗ್ ಫ್ಯಾನ್‌ಗೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಶವ ಪತ್ತೆಯಾಯ್ತು. ಆತನ ಹೆಸರು ರಮಾಕಾಂತ ಪಾಂಡೆ. ಆತ ಕೂಡ ಪೊಲೀಸ್ ಸೇವೆಯಲ್ಲಿದ್ದವನೇ. ವ್ಯಾಪಂ ಹಗರಣದಲ್ಲಿ ಈತ ಮಧ್ಯವರ್ತಿಯಾಗಿದ್ದ ಎಂಬ ಆರೋಪ ಆತನ ಮೇಲಿತ್ತು. ಪೊಲೀಸರು ಮಾಮೂಲಿಯಂತೆ ಆತ್ಮಹತ್ಯೆ ಎಂದು ದಾಖಲಿಸಿಕೊಂಡು ಕೇಸು ಮುಕ್ತಾಯಗೊಳಿಸಿದ್ದಾರೆ.

ಇಲ್ಲಿಗೆ ಒಂದು ವಾರದ ಹಿಂದಷ್ಟೆ, ಅಂದರೆ ಜೂನ್ 28ರಂದು ಒಂದೇ ದಿನ ಈ ವ್ಯಾಪಂ ಭೂತ ಎರಡು ಬಲಿ ತೆಗೆದುಕೊಂಡಿತ್ತು. ಒಬ್ಬ ನರೇಂದ್ರಸಿಂಗ್ ತೋಮರ್ ಎಂಬ 29 ವರ್ಷದ ಯುವಕ. ಈತ ಪಶುವೈದ್ಯಾಧಿಕಾರಿಯಾಗಿದ್ದ. ವ್ಯಾಪಂ ನೇಮಕಾತಿಯಲ್ಲಿ ಖೊಟ್ಟಿ ಅಭ್ಯರ್ಥಿಗಳಿಂದ ಪರೀಕ್ಷೆ ಬರೆಸಿ ಪಾಸು ಮಾಡಿಸುವ ದಂಧೆಯಲ್ಲಿ ಪಳಗಿದ್ದ. ಇದೇ ಆರೋಪದ ಮೇಲೆ ಆತನನ್ನು ಬಂಧಿಸಲಾಗಿತ್ತು. ಇಂದೋರ್ ಜೈಲಿನಲ್ಲಿದ್ದ ಆತನನ್ನು ಅಂದು ರಾತ್ರಿ 11.15ರ ವೇಳೆಗೆ ಆಸ್ಪತ್ರೆಗೆ ದಾಖಲಿಸಲು ಪ್ರಯತ್ನಿಸಿದ್ದರು. ವೈದ್ಯರು ಆತ ಆಗಲೇ ಮರಣ ಹೊಂದಿದ್ದಾಗಿ ಘೋಷಿಸಿದ್ದರು. ಆತನಿಗೆ ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿಕೊಂಡಿತು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಹಾರ್ಟ್ ಅಟ್ಯಾಕ್ ಆಗಿ ಸತ್ತುಹೋದ ಎಂಬುದು ಜೈಲು ಅಧಿಕಾರಿಗಳ ಮತ್ತು ಪೊಲೀಸರ ವಿವರಣೆ. ಆದರೆ ಅಂದು ಸಂಜೆಯಷ್ಟೆ ಆತನೊಂದಿಗೆ ಮಾತನಾಡಿದ್ದ ಬಂಧುಗಳ ಪ್ರಕಾರ ಆತನಿಗೆ ಅಂಥ ಯಾವ ಸಮಸ್ಯೆಯೂ ಇರಲಿಲ್ಲ. ಸಾಕ್ಷ್ಯ ನಾಶ ಮಾಡಲು ಆತನನ್ನು ಕೊಲೆ ಮಾಡಲಾಗಿದೆ.

ಅದೇ ದಿನ ರಾಜೇಂದ್ರ ಆರ್ಯ ಎಂಬ 40 ವರ್ಷ ವಯಸ್ಸಿನ ವ್ಯಕ್ತಿ ನಿಗೂಢವಾಗಿ ಸಾವನ್ನಪ್ಪಿದ. ಆತ ಸಾಗರ್ ಮೆಡಿಕಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದ. ಮೆಡಿಕಲ್ ಪ್ರವೇಶ ಪರೀಕ್ಷೆ ಅಕ್ರಮಗಳಲ್ಲಿ ಭಾಗಿಯಾಗಿದ್ದ ಆರೋಪದಲ್ಲಿ ಬಂಧಿತನಾಗಿ ಜಾಮೀನಿನ ಮೇಲೆ ಹೊರಬಂದಿದ್ದ. ಬೆಳಗ್ಗೆ 8ರ ವೇಳೆಗೆ ಜ್ವರ ಮತ್ತು ವಾಂತಿಯ ಕಾರಣಕ್ಕೆ ಆತನನ್ನು ಆಸ್ಪತ್ರೆಗೆ ಸೇರಿಸಲಾಯ್ತು. ಆತ ಆಸ್ಪತ್ರೆಯಿಂದ ಮನೆಗೆ ಬರಲೇ ಇಲ್ಲ. ಲಿವರ್ ಸೋಂಕಿನಿಂದ ಸತ್ತಿದ್ದಾಗಿ ವರದಿಗಳಲ್ಲಿ ದಾಖಲಾಗಿದೆ. ಆದರೆ ಕುಟುಂಬದವರು ಈ ಸ್ಟೋರಿಯನ್ನು ನಂಬಲು ತಯಾರಿಲ್ಲ. ಏನೋ ಸಂಚು ನಡೆದಿದೆ, ಆಸ್ಪತ್ರೆಯವರು ಸತ್ಯ ಮುಚ್ಚಿಡುತ್ತಿದ್ದಾರೆ ಎಂಬುದು ಅವರ ಗುಮಾನಿ.



ಈ ಹಿಂದೆ ಪ್ರಸ್ತಾಪ ಮಾಡಲಾದ ನಮ್ರತಾ ದಾಮೋರ್ ಎಂಬ ಮೆಡಿಕಲ್ ವಿದ್ಯಾರ್ಥಿನಿಯದು ಮತ್ತೊಂದು ದಾರುಣ ಕತೆ. ಅಕ್ರಮ ಮಾರ್ಗಗಳಲ್ಲಿ ಸೀಟು ಪಡೆದವರ ಪಟ್ಟಿಯಲ್ಲಿ ಈಕೆಯ ಹೆಸರೂ ಕೂಡ ಇದೆ. 2012ರ ಜನವರಿ 7ರಂದು ಈಕೆ ಕಾಲೇಜಿನಿಂದ ಇಂದೋರ್‌ನ ತನ್ನ ಮನೆಗೆ ಬರಲೇ ಇಲ್ಲ. ಕುಟುಂಬದವರು ಮಿಸ್ಸಿಂಗ್ ಕಂಪ್ಲೈಂಟ್ ಕೊಟ್ಟರು. ಅದೇ ದಿನ ಉಜ್ಜಯಿನಿ ರೈಲ್ವೆ ನಿಲ್ದಾಣದ ಬಳಿ ಗುರುತು ಪತ್ತೆಹಚ್ಚಲಾಗದ ಸ್ಥಿತಿಯಲ್ಲಿದ್ದ ಯುವತಿಯ ಶವ ಸಿಕ್ಕಿತ್ತು. 'ಗುರುತು ಪತ್ತೆಯಾಗದ ಕಾರಣ' ಅಲ್ಲಿನ ಪೊಲೀಸರು ಆ ಶವವನ್ನು ಸಂಸ್ಕಾರ ಮಾಡಿ ಮುಗಿಸಿದ್ದರು. ಆಕೆಯ ಬಟ್ಟೆಯಲ್ಲಿ ವೀರ್ಯದ ಕಲೆಗಳು ಕಂಡುಬಂದಿದ್ದವು.



ಅತ್ಯಾಚಾರ ಮಾಡಿ ಕೊಲೆ ಎಸಗಿರುವುದು ಮೇಲುನೋಟಕ್ಕೆ ಎದ್ದು ಕಾಣುತ್ತಿತ್ತು, ಆದ್ದರಿಂದ ಪೊಲೀಸರು ಮೊದಲಿಗೆ ಅಸಹಜ ಸಾವು/ ಕೊಲೆ ಪ್ರಕರಣ ದಾಖಲಿಸಿಕೊಂಡರು. ನಂತರ ತಮ್ಮ ತನಿಖೆ ಮುಂದುವರೆಸಿ ಅದೊಂದು ಆತ್ಮಹತ್ಯೆ ಎಂದು ಕೈತೊಳೆದುಕೊಂಡಿದ್ದರು.

ಆದರೆ ಇತ್ತೀಚೆಗೆ ನಡೆದ ಮರು ಮರಣೋತ್ತರ ಪರೀಕ್ಷೆಯಲ್ಲಿ ಸಾವಿಗೆ ಮುಂಚಿತವಾಗಿ ಆಕೆಯ ದೇಹದ ಮೇಲೆ ತೀವ್ರ ಗಾಯಗಳಾಗಿದ್ದನ್ನು, ಬಲವಂತವಾಗಿ ಉಸಿರುಗಟ್ಟಿಸಿದ್ದರಿಂದ ಸಾವು ಸಂಭವಿಸಿದೆ ಎಂಬುದನ್ನು ಬಹಿರಂಗವಾಗಿದೆ.

ಹೀಗೆ ಬರೆಯುತ್ತಾ ಹೋದರೆ ಈ ಕಿಲ್ಲರ್ ವ್ಯಾಪಂ ಹಗರಣದಲ್ಲಿ ಒಟ್ಟು 48 ವೃತ್ತಾಂತಗಳಿವೆ. ಇವುಗಳಲ್ಲಿ "ರಸ್ತೆ ಅಪಘಾತ" ಅಥವ "ಹೃದಯಾಘಾತ"ದಿಂದ ಸತ್ತವರೇ ಹೆಚ್ಚು. ಇನ್ನೂ ಕೆಲವರು "ಆತ್ಮಹತ್ಯೆ" ಮಾಡಿಕೊಂಡಿದ್ದಾರೆ. ಒಬ್ಬೊಬ್ಬರದು ಒಂದೊಂದು ರೀತಿ. ಸ್ಥಳಾಭಾವದಿಂದ ಆ ವಿವರಗಳಿಗೆ ಹೋಗುತ್ತಿಲ್ಲ. ಆದರೆ ಇಲ್ಲಿ ಹೇಳಲೇಬೇಕಾದ ಮತ್ತೊಂದು ಪ್ರಕರಣವಿದೆ.

ಈ ಪ್ರಕರಣದ ಕೇಂದ್ರವ್ಯಕ್ತಿ ಮಧ್ಯಪ್ರದೇಶ ರಾಜ್ಯಪಾಲ ರಾಮ್‌ನರೇಶ್ ಯಾದವ್ ಅವರ ಸ್ವಂತ ಪುತ್ರ ಶೈಲೇಶ್ ಯಾದವ್. 50 ವರ್ಷ ವಯಸ್ಸಿನ ಈತ ರಾಜ್ಯಪಾಲರ ಅಧಿಕೃತ ನಿವಾಸದಲ್ಲಿ ಸತ್ತುಬಿದ್ದಿದ್ದ. ಶಿಕ್ಷಕರ ನೇಮಕಾತಿ ಅಕ್ರಮದಲ್ಲಿ ಆತ ಕೂಡ ಆರೋಪಿ. ಶವಪರೀಕ್ಷೆಯಿಂದ ಸಾವಿನ ಕಾರಣ ಸ್ಪಷ್ಟಗೊಂಡಿಲ್ಲ. ಕಾಂಗ್ರೆಸ್‌ನ ಮಾಜಿ ನಾಯಕ ಈ ರಾಮನರೇಶ್ ಯಾದವ್ ಬಗ್ಗೆ ಕೂಡ ಇದೀಗ ವ್ಯಾಪಂ ಹಗರಣದ ಆರೋಪ ಕೇಳಿಬರುತ್ತಿದ್ದು ಆತನ ಹುದ್ದೆಗೆ ಕತ್ತರಿ ಹಾಕಲು ನವದೆಹಲಿ ತಯಾರಿ ನಡೆಸಿದೆ ಎಂಬ ಸುದ್ದಿ ಈಗ ಹರಡಿದೆ.

ಹೀಗೆ ಕೊಲೆಯಾದವರು (ಅಥವ ಅಸಹಜವಾಗಿ ಸತ್ತವರು) ಯಾರು? ಕೊಲೆಯಾದವರಲ್ಲಿ ಬಹುಪಾಲು ಮಂದಿ ನೇಮಕಾತಿಯಾಗಿದ್ದ ಅಭ್ಯರ್ಥಿಗಳು ಮತ್ತು ಉನ್ನತ ಶಿಕ್ಷಣಕ್ಕೆ ಸೀಟು ಪಡೆದುಕೊಂಡಿದ್ದ ವಿದ್ಯಾರ್ಥಿಗಳು. ಮತ್ತೂ ಕೆಲವರು ಈ ದಂಧೆಯ ಮಧ್ಯವರ್ತಿಗಳು. ಇವರಲ್ಲಿ ಹಲವರು ಈ ಹಗರಣದ ವಿವಿಧ ಕೇಸುಗಳಲ್ಲಿ ಆರೋಪಿತರಾಗಿದ್ದರು. ಈ ಹಗರಣದಲ್ಲಿ ಭಾಗಿಯಾಗಿದ್ದ ಉನ್ನತ ಹಂತದ ರಾಜಕಾರಣಿಗಳು ಮತ್ತು ಅಧಿಕಾರಿಗಳ ವಿರುದ್ಧ ಇವರು ಸಾಕ್ಷಿ ಹೇಳಲು ಹೊರಟಿದ್ದರು. ಅರ್ಥದಲ್ಲಿ ಕೊಲೆಯಾದ ಆ ನತದೃಷ್ಟರು ವ್ಯಾಪಂ ಹಗರಣದ ತನಿಖೆಗೆ ಸಹಕಾರ ನೀಡುತ್ತಿದ್ದರು.

ಏನಿದು ವ್ಯಾಪಮ್ ?

ಮಧ್ಯಪ್ರದೇಶ್ ವ್ಯಾವಸಾಯಿಕ್ ಪರೀಕ್ಷಾ ಮಂಡಲ್ (ಎಂಪಿಪಿಇಬಿ) ಎಂಬ ಸಾಂವಿಧಾನಿಕ ಸಂಸ್ಥೆಯೊಂದಿದೆ. 'ವ್ಯಾಪಮ್' ಎಂಬುದು ಈ ಹಿಂದಿ ಹೆಸರಿನ ಸಂಕ್ಷಿಪ್ತ ರೂಪ. ನಮ್ಮ ಕೆಪಿಎಸ್‌ಸಿ ಸಂಸ್ಥೆಯ ರೀತಿಯಲ್ಲಿ ಹಲವು ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಮಾಡುವ ಹೊಣೆ ಈ ಸಂಸ್ಥೆಯದು. ಅದಕ್ಕೆ ಅಗತ್ಯವಿರುವ ಪರೀಕ್ಷೆ ಹಾಗೂ ಸಂದರ್ಶನಗಳನ್ನು ಇದು ನಡೆಸುತ್ತದೆ. ಅಷ್ಟು ಮಾತ್ರವಲ್ಲದೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಮುಂತಾದ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರವೇಶ ಪರೀಕ್ಷೆಗಳನ್ನು ನಡೆಸಿ ಸೀಟುಗಳನ್ನು ಹಂಚಿಕೆ ಮಾಡುವ ಹೊಣೆಗಾರಿಕೆಯೂ ಇದೇ ಸಂಸ್ಥೆಯದು.

ಪೊಲೀಸ್ ಕಾನ್ಸ್‌ಟೇಬಲ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳು, ರೆವಿನ್ಯೂ ಇಲಾಖೆಯ ವಿವಿಧ ಅಧಿಕಾರಿಗಳು, ಬ್ಯಾಂಕುಗಳ ನೇಮಕಾತಿ ಮುಂತಾದ ಹತ್ತಾರು ಇಲಾಖೆಗಳ ನೇಮಕಾತಿಯಲ್ಲಿ ಹಾಗೂ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟುಗಳ ಹಂಚಿಕೆಯಲ್ಲಿ ಹತ್ತಾರು

ಶಿವರಾಜಸಿಂಗ್ ಚೌಹಾಣ್‌ರ ಅಭಿವೃದ್ಧಿ!

ಸತತ 3ನೇ ಬಾರಿ ಬಿಜೆಪಿಯನ್ನು ಗೆಲ್ಲಿಸಿ ಸಿಎಂ ಆಗಿರುವ ಶಿವರಾಜಸಿಂಗ್ ಚೌಹಾಣ್‌ರ ಜನಪ್ರಿಯತೆ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿಯೋ ಸುದ್ದಿ. ಅವರ ಅಭಿವೃದ್ಧಿ ಕಾರ್ಯಗಳನ್ನು ಹೊಗಳದವರೇ ವಿರಳ. ಆದರೆ ವಾಸ್ತವದಲ್ಲಿ ಚೌಹಾಣ್ ಮಾದರಿ ಕೂಡ ಕರ್ನಾಟಕದಲ್ಲಿ ಬಿಜೆಪಿ ಅನುಸರಿಸಿದ ಮಾದರಿಯೇ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಕಳೆದ 6 ದಶಕಗಳಲ್ಲಿ ಈ ದೇಶದ ಬಹುತೇಕ ಭ್ರಷ್ಟ ಪಕ್ಷಗಳು ಅನುಸರಿಸಿದ ಮಾದರಿಯೇ ಎಂಬುದರಲ್ಲಿ ಅನುಮಾನವಿಲ್ಲ.

ವಿಷಯ ಹೀಗಿದ್ದರೂ ಮಾಧ್ಯಮಗಳನ್ನು 'ಸರಿಯಾಗಿ' ಹ್ಯಾಂಡಲ್ ಮಾಡಿ, ಪ್ರಚಾರ ಗಿಟ್ಟಿಸುವ ವಿಷಯದಲ್ಲಿ ಚೌಹಾಣ್ ಮೋದಿಗಿಂತ ಕಡಿಮೆಯೇನಿಲ್ಲ. ಯಾಕೆಂದರೆ ಅದು ಆತ ಬೆಳೆದುಬಂದ ಹಿನ್ನೆಲೆಯಲ್ಲಿದೆ.

ಈತ ತನ್ನ 13ನೇ ವಯಸ್ಸಿನಲ್ಲಿ, ಅಂದರೆ 1972ರಲ್ಲೇ ಆರೆಸ್ಸೆಸ್ ಸೇರಿಕೊಂಡು ತರಬೇತಿ ಪಡೆದವರು. 5 ಬಾರಿ ಎಂಪಿಯಾಗಿ ಆರಿಸಿ ಬಂದವರು. ಬಿಜೆಪಿ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದವರು. ಬಿಜೆಪಿ ಯುವ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು. 2005ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ, ನಂತರ 2008ರಲ್ಲಿ ಹಾಗೂ ಮತ್ತೆ 2013ರಲ್ಲಿ ಹೀಗೆ ಸತತ ಮೂರನೇ ಬಾರಿಗೆ ಮುಖ್ಯಮಂತ್ರಿ ಗದ್ದುಗೆಗೇರಿದವರು.

2007ರಲ್ಲೇ 'ಡಂಪರ್ ಸ್ಕ್ಯಾಮ್' ಎಂದು ಕುಖ್ಯಾತಗೊಂಡಿದ್ದ ಭ್ರಷ್ಟಾಚಾರ ಹಗರಣದಲ್ಲಿ ಸಿಕ್ಕಿಬಿದ್ದು ಲೋಕಾಯುಕ್ತ ತನಿಖೆಗೆ ಒಳಗಾಗಿದ್ದರು. ಅಂಥ ತನಿಖೆಗಳ ಹಣೆಬರಹ ಏನೆಂಬುದು ನಮಗೆ ಗೊತ್ತಿದೆ. ಕೆಲ ವರ್ಷಗಳ ನಂತರ ಆರೋಪದಿಂದ ಖುಲಾಸೆಗೊಂಡರು. ಕರ್ನಾಟಕದಂತೆಯೇ ಮಧ್ಯಪ್ರದೇಶ ಕೂಡ ಗಣಿ ಹಗರಣಗಳಿಗೆ ಕುಖ್ಯಾತಿ. ವ್ಯತ್ಯಾಸವೆಂದರೆ ಒಡೆದ ಮನೆಯಾಗಿದ್ದ ಕರ್ನಾಟಕದ ಬಿಜೆಪಿಯ ಮಂತ್ರಿಗಳು ಮಾತ್ರವಲ್ಲದೆ ಮುಖ್ಯಮಂತ್ರಿ ಕೂಡ ಇಂಥಾ ಪ್ರಕರಣಗಳಲ್ಲಿ ಜೈಲು ಸೇರಿದ್ದರು. ಆದರೆ ಹತ್ತಾರು ವರ್ಷಗಳಿಂದ ಮಧ್ಯಪ್ರದೇಶ ಸರ್ಕಾರ ಮತ್ತು ಬಿಜೆಪಿ ಪಕ್ಷದ ಮೇಲೆ ಬಿಗಿಹಿಡಿತ ಹೊಂದಿರುವ ಚಾಣಾಕ್ಷ ಮುಖ್ಯಮಂತ್ರಿ ಚೌಹಾಣ್ ಇಂಥ ಹಗರಣಗಳ ಅಸಂಖ್ಯಾತ ಫೈಲುಗಳನ್ನು ಕುಂದಿ ಕೆಳಗೆ ಹಾಕಿ ಗಟ್ಟಿಯಾಗಿ ಕೂತುಬಿಟ್ಟಿದ್ದಾರೆ. ಪರಿಣಾಮವಾಗಿ ಕರ್ನಾಟಕವನ್ನು ಮೀರಿಸುವಂಥ ಅದೆಷ್ಟೋ ಗಣಿ ಅಕ್ರಮಗಳು ಸದ್ದುಗದ್ದಲವಿಲ್ಲದೆ ಸಾಗುತ್ತಲೇ ಇವೆ.

ಶಿವರಾಜ್‌ಸಿಂಗ್ ಚೌಹಾಣ್‌ರ ಸ್ವಂತ ಬಾವಮೈದನ ಸಂಜಯ್‌ಸಿಂಗ್ ಮಸಾನಿ ಎಂಬುವವನ ಕಂಪನಿಗೆ ಅಕ್ರಮವಾಗಿ ಪಿಡಬ್ಲ್ಯೂಡಿ ಗುತ್ತಿಗೆ ನೀಡಿದ ಹಗರಣ ಕಳೆದ ವರ್ಷ ಬೆಳಕಿಗೆ ಬಂತು. 180 ಪುಟಗಳ ಸಾಕ್ಷ್ಯಾಧಾರಗಳನ್ನು ವಿರೋಧ ಪಕ್ಷಗಳು ಹೈಕೋರ್ಟ್‌ಗೆ ಸಲ್ಲಿಸಿದ್ದವು. ಕೋರ್ಟ್ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿ ತನಿಖೆಗೆ ಆದೇಶಿಸಿದೆ.

ಈಗ ವ್ಯಾಪಂ ಹಗರಣದ ಉರುಳಿನಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿರುವ ಚೌಹಾಣ್ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ತನಿಖೆಯನ್ನು ಸಿಬಿಐಗೆ ವಹಿಸಿದ್ದೇನೋ ಆಗಿದೆ. ಆದರೆ ಈಗ ಮೋದಿಯ ಪಂಜರದ ಗಿಳಿಯಾಗಿರುವ ಸಿಬಿಐನಿಂದ ನಾವು ಹೆಚ್ಚಿನದನ್ನು ನಿರೀಕ್ಷಿಸುವುದು ಮೂರ್ಖತನವಾದೀತು!

ಸಾವು ಕೂಡ ತಮಾಷೆಗಾಗಿ!!

ಕಳೆದ ಎರಡು ವರ್ಷಗಳಿಂದ ಈ ಹಗರಣದ ಬಗ್ಗೆ ಪ್ರಶ್ನೆ ಎದುರಾದಾಗೆಲ್ಲ ಈ 'ದೇಶಭಕ್ತರು' ನೀಡಿರುವ ಪ್ರತಿಕ್ರಿಯೆ ಈ ಪಕ್ಷದ ಹೂರಣವನ್ನು ಬಿಚ್ಚಿಡುತ್ತದೆ. ಕೆಲವೊಂದು ಸ್ಯಾಂಪಲ್‌ಗಳು ಹೀಗಿವೆ.

ಸ್ವತಃ ಸಿಎಂ ಚೌಹಾಣ್ ಪದೇಪದೇ ಹೇಳುತ್ತಾ ಬಂದಿದ್ದೇನೆಂದರೆ 'ವಿರೋಧ ಪಕ್ಷಗಳಿಗೆ ನಿರುದ್ಯೋಗದ ಸಮಸ್ಯೆ ಇರುವುದರಿಂದ ಹೀಗೆಲ್ಲಾ ಟೀಕೆ ಮಾಡುತ್ತಾರೆ' ಎಂದು.

ಚೌಹಾಣ್‌ರ ಮೇಲೆಯೇ ಆರೋಪ ಬಂದಿದ್ದಕ್ಕೆ ಪ್ರತಿಕ್ರಿಯಿಸಿದ ಪಕ್ಷದ ನಾಯಕಿ ಉಮಾಭಾರತಿ "ಶಿವರಾಜ ಸಿಂಗ್ ಚೌಹಾಣ್‌ರವರು ಗಂಗಾ ಮಾತೆಯಷ್ಟೇ ಪವಿತ್ರರಾಗಿದ್ದಾರೆ" ಎಂದಿದ್ದಾಳೆ. ತಮ್ಮ ತೆವಲುಗಳಿಗಾಗಿ ಇವರು ಧರ್ಮ ಕರ್ಮ ಎಲ್ಲ ಬಿಟ್ಟು ಮಾತಾಡಲು ತಯಾರಾಗಿರುತ್ತಾರೆ ಅಲ್ಲವೆ?

ಈ ಹಗರಣಕ್ಕೆ ಸಂಬಂಧಿಸಿ ಸರಣಿ ಸಾವುಗಳಾಗುತ್ತಿರುವುದರ ಬಗ್ಗೆ ಪ್ರಶ್ನಿಸಿದಾಗ ಗೃಹ ಮಂತ್ರಿ ಬಾಬುಲಾಲ್ ಗೌರ್ ಹೇಳಿದ್ದೇನು ಗೊತ್ತೆ? "ಹುಟ್ಟಿದವರೆಲ್ಲಾ ಒಂದಲ್ಲಾ ಒಂದು ದಿನ ಸಾಯಲೇಬೇಕು ಬಿಡಿ" ಅಂತ. ಆತ ಮಧ್ಯಪ್ರದೇಶದ ಪೊಲೀಸ್ ಇಲಾಖೆಯನ್ನು ನಿರ್ವಹಿಸುವ ಗೃಹಮಂತ್ರಿ!

ಅಕ್ಷಯ್ ಸಿಂಗ್ ಎಂಬ ಪತ್ರಕರ್ತನ ಸಾವಿನ ಬಗ್ಗೆ ಕೇಶವ್ ವಿಜಯ್ ವರ್ಗಿಯಾ ಎಂಬ ಮತ್ತೊಬ್ಬ ಮಂತ್ರಿ ಹಾಗೂ ರಾಜ್ಯ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಹೇಳಿದ್ದು "ಸತ್ತುಹೋದ ಜರ್ನಲಿಸ್ಟ್ ವಿಷಯ ಬಿಟ್ಟುಬಿಡ್ರಿ, ಅವನೇನು ನನಗಿಂತಾ ದೊಡ್ಡೋನಾ?" ಅಂತ. ಮಾಧ್ಯಮಗಳಲ್ಲಿ ಇದು ಸುದ್ದಿಯಾದ ನಂತರ "ನಾನು ತಮಾಷೆಗೆ ಹಾಗೆ ಹೇಳಿದ್ದೆ" ಎಂದ. ಹೌದು ನಿಜ. ಸಾವಿನ ಸರಣಿಯನ್ನು ಸೃಷ್ಟಿಸುವುದು ಇವರಿಗೆ ತಮಾಷೆಯೇ. ಸತ್ತವರ ಬಗ್ಗೆ ಆಡಿಕೊಳ್ಳುವುದೂ ತಮಾಷೆಗಾಗಿಯೇ.

ಆದರೆ ಈ ದೇಶ ಇಂಥ ಕೊಲೆಗಡುಕರನ್ನು ಗಂಭೀರವಾಗಿ ಪರಿಗಣಿಸುವುದು ಯಾವಾಗ?

...ಗೊಂದಲೂ ವ್ಯಾಪಂ ಭ್ರಷ್ಟಾಚಾರ ನಡೆಯುತ್ತಿದೆ. ತಲೆಯೇರು ಕೇಳೋರು ಯಾರೂ ಇಲ್ಲ, ಬಿಜೆಪಿಯ ...ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ಅವರ ...ಮಯಕೆ, 'ಅಭಿವೃದ್ಧಿ ಕಾರ್ಯ'ಗಳ ಪ್ರಚಾರದ ಭರಾಟೆ ...ಬಿರುಸಿನಲ್ಲಿರುವುದರಿಂದ ನಮ್ಮ ಮಾಧ್ಯಮಗಳಿಗೆ ...ಅಷ್ಟು ದೊಡ್ಡ ಸುದ್ದಿಯೆನಿಸುತ್ತಿಲ್ಲ, ಸರಣಿ ಕೊಲೆಗಳು ...ಂತವಾದಾಗ ಆಗೊಂದು ಈಗೊಂದು ಸುದ್ದಿ ...ಕುಗಳು ಮಿಂಚಿ ಮಾಯವಾಗುತ್ತವೆ ಅಷ್ಟೆ.

...ಹಗರಣ ಬೆಳಕಿಗೆ ಬಂದಿದ್ದು ಹೇಗೆ?

...ಸರ್ಕಾರದ ವಾರ್ಷಿಕ ಲೆಕ್ಕಪತ್ರಗಳ ಆಡಿಟ್ ಮಾಡುವ ...ವಿಧಾನಿಕ ಸಂಸ್ಥೆ ವ್ಯಾಪಂನ ನೇಮಕಾತಿಯಲ್ಲಿ ಮತ್ತು ...ಯ ಹಣಕಾಸು ವಹಿವಾಟಿನಲ್ಲಿ ಅವ್ಯವಹಾರ ...ವಿದೆ ಎಂಬುದನ್ನು 2009ರಲ್ಲಿ ಪತ್ತೆ ಮಾಡಿತು. ...ದೋರ್‌ನಲ್ಲಿ ಪ್ರಾಕ್ಟೀಸ್ ಮಾಡುತ್ತಿರುವ ಡಾಕ್ಟರ್ ...ದ್ ರೈ ಎಂಬ ವೈದ್ಯ ಈ ಬಗ್ಗೆ ತನಿಖೆಗೆ ...ದೇಶಿಸುವಂತೆ ಕೈಕೋರ್ಟ್‌ನಲ್ಲಿ ಪಿಐಎಲ್ ...ಲಿಸಿದರು. ಅಕ್ರಮ ನೇಮಕಾತಿಯಿಂದಾಗಿ ವಂಚಿತರಾದ ...ನ್ರ ವಿದ್ಯಾರ್ಥಿಗಳ ಪೋಷಕರು ಕೂಡ ವಿವಿಧ ಪಿಐಎಲ್ ...ಲಿಸಿದರು. ಹೈಕೋರ್ಟ್‌ನ ಇಂದೋರ್ ವಿಭಾಗೀಯ ... ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ...ಪಂ ಮತ್ತು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯ ...ಗಳಿಗೆ ನೋಟಿಸ್ ಜಾರಿ ಮಾಡಿತು. ಸರ್ಕಾರದ ...ಜಾಯಿಷಿಯನ್ನು ಒಪ್ಪದ ಕೋರ್ಟ್ ತನ್ನದೇ ...ಸ್ತುವಾರಿಯಲ್ಲಿ ವಿಶೇಷ ತನಿಖಾ ...ಕ(ಎಸ್‌ಐಟಿ)ವೊಂದನ್ನು ನೇಮಕ ಮಾಡಿತು.

2013ರಲ್ಲಿ ಎಸ್‌ಐಟಿ ತನಿಖೆ ಶುರುವಾದ ನಂತರ ...ಪ್ರಕರಣದ ಆಳ ಅಗಲಗಳು ತೆರೆದುಕೊಳ್ಳುತ್ತಲೇ ... ಕೋರ್ಟ್‌ನ ಉಸ್ತುವಾರಿಯಲ್ಲಿ ತನಿಖೆ ...ವಾದಂತೆಯೇ ಮಧ್ಯಪ್ರದೇಶ ಸರ್ಕಾರ ಸ್ಪೆಷಲ್ ಟಾಸ್ಕ್ ...ರ್ಸ್ (ಎಸ್‌ಟಿಎಫ್) ರಚಿಸಿದೆ. ಈ ಎಸ್‌ಟಿಎಫ್ ...ಐಟಿಗೆ ತನಿಖೆಯಲ್ಲಿ ಸಹಕಾರ ನೀಡುತ್ತಿದೆ. ಕೆಲ ...ಳುಗಳ ಹಿಂದೆ ಬರೋಬ್ಬರಿ 23 ಸಾವಿರ ಪುಟಗಳ ...ರ್ಜ್‌ಶೀಟನ್ನು ಸ್ಪೆಷಲ್ ಟಾಸ್ಕ್ ಫೋರ್ಸ್ ಕೋರ್ಟಿಗೆ ...ಸಿದೆ.

ಇದುವರೆಗೆ ಸುಮಾರು 2000 ಮಂದಿಯನ್ನು ಈ ...ರಣದ ವಿವಿಧ ಪ್ರಕರಣಗಳಲ್ಲಿ ಬಂಧಿಸಲಾಗಿದೆ. ಅದರಲ್ಲಿ ...ವರು ಇನ್ನೂ ಜೈಲಿನಲ್ಲೇ ಕೊಳೆಯುತ್ತಿದ್ದಾರೆ. ಆದರೆ ... ಗಮನಿಸಲೇಬೇಕಾದ ಮುಖ್ಯ ಸಂಗತಿಯೆಂದರೆ ... ಬಂಧಿತರಾದವರಲ್ಲಿ ಬಹುತೇಕರು ವಿದ್ಯಾರ್ಥಿಗಳು ...ವ ಅವರ ಪೋಷಕರು. ಒಂದು ರೀತಿಯಲ್ಲಿ ಇವರೂ ...ತ ವ್ಯಾಪಂ ಹಗರಣದ ಬಲಿಪಶುಗಳು! ಅಂದರೆ ...ಂತರ ರೂಪಾಯಿ ಹಣ ತೆತ್ತು ಸೀಟು ಪಡೆದು, ... ಜೈಲುಪಾಲಾಗಿದ್ದಾರೆ.

ಈ ಹಗರಣದ ಅಕ್ರಮ ದಂಧೆಯ ರೂವಾರಿಗಳಾದ ...ಷ್ಠಿತ ವ್ಯಕ್ತಿಗಳು ಇಂದಿಗೂ ಆರಾಮಾಗಿದ್ದಾರೆ. ಅಟಾರ್ನಿ ...ರಲ್ ಮುಕುಲ್ ರೋಹಟಗಿ ಅವರ ಪ್ರಕಾರ ಇನ್ನೂ ...00 ಮಂದಿ ಅರೆಸ್ಟ್ ಆಗಬೇಕಿದೆ". ಹಲವು ವಿಐಪಿಗಳು ...ಲೆಮರೆಸಿಕೊಂಡಿದ್ದಾರೆ." ರೆಡ್‌ಹ್ಯಾಂಡ್ ರೀತಿಯಲ್ಲಿ ...ಸಿದ್ದ ಕೆಲವು ವಿಐಪಿಗಳನ್ನಷ್ಟೆ ಬಂಧಿಸಲಾಗಿದೆ. ಇದುವರೆಗೆ ...ಗೆ ಬಂಧಿತರಾದ ವಿಐಪಿಗಳಲ್ಲಿ ಉನ್ನತ ಶಿಕ್ಷಣ ಸಚಿವ ...ಕಾಂತ ಶರ್ಮ ಹಾಗೂ ಬಿಜೆಪಿಯ ಮಾಜಿ ಸಚಿವ ... ಮೈನಿಂಗ್ ಬ್ಯಾರನ್ ಎಂದು ಕುಖ್ಯಾತನಾಗಿರುವ ...ಧೀರ್ ಶರ್ಮ ಪ್ರಮುಖರು.

ಅಕ್ರಮದ ಹಾದಿಗಳೆಷ್ಟು?

...ವ್ಯಾಪಂ ನೇಮಕಾತಿ ಅಕ್ರಮಗಳಲ್ಲಿ ಹತ್ತಾರು ...ಮಾರ್ಗಗಳನ್ನು ಬಳಸಲಾಗಿದೆ. ಕೆಲವೊಂದು ಪ್ರಕರಣಗಳಲ್ಲಿ ...ವೇಶ ಪರೀಕ್ಷೆಗೆ ಫಲಾನುಭವಿ ಅಭ್ಯರ್ಥಿಯ ಪರವಾಗಿ ... ಅಭ್ಯರ್ಥಿಗಳಿಂದ ಪರೀಕ್ಷೆ ಬರೆಸಲಾಗಿದೆ. ಅಭ್ಯರ್ಥಿಯ ...ಫೋಟೋ ಒಂದನ್ನು ಬಿಟ್ಟು ಉಳಿದೆಲ್ಲ ಮಾಹಿತಿಗಳು ...ಫಲಾನುಭವಿ ಅಭ್ಯರ್ಥಿಯದೇ ಇರುತ್ತದೆ. ಪರೀಕ್ಷೆ ...ಗದಿಸಿದ ಡಮ್ಮಿ ಅಭ್ಯರ್ಥಿಯ ಫೋಟೋ ತೆಗೆದು ... ಅಭ್ಯರ್ಥಿಯ ಫೋಟೋ ಅಂಟಿಸಲಾಗಿದೆ.

ಮತ್ತೆ ಕೆಲವು ಪ್ರಕರಣಗಳಲ್ಲಿ ಅಭ್ಯರ್ಥಿಗಳು ಉತ್ತರ ...ಕೆಗಳಲ್ಲಿ ಖಾಲಿ ಜಾಗಗಳನ್ನು ಬಿಡುವಂತೆ ...ಸಲಾಗುತ್ತದೆ. ನಿಗದಿತ ಅಂಕ ನೀಡಿದ ತರುವಾಯ ...ಕ್ಕೆ ಹೊಂದುವಂತೆ ಉತ್ತರ ಪತ್ರಿಕೆಗಳನ್ನು ಭರ್ತಿ ...ಕೊಳ್ಳಲಾಗಿದೆ. ಮತ್ತೆ ಕೆಲವೊಂದು ಕೇಸುಗಳಲ್ಲಿ ...ನು ಹಾಳೆಗಳನ್ನು ಲಗತ್ತಿಸಿ, ಉತ್ತರಗಳನ್ನು ತುಂಬಿಸಿ ...ತ ಅಂಕಗಳಿಗೆ ತಾಳೆ ಮಾಡಲಾಗಿದೆ.

...ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟು ಹಂಚಿಕೆಗ ...ಪ್ರವೇಶ ಪರೀಕ್ಷೆಗಳಲ್ಲಿ ನಡೆಯುತ್ತಿದ್ದ ನಾಟಕ ಮತ್ತೊಂದು ...ದು. ಕಾಸಿಗೆ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳ ಪಕ್ಕದಲ್ಲಿ ...ದ ಹಂತದ ಬ್ರಿಲಿಯಂಟ್ ಸ್ಟೂಡೆಂಟ್ ಒಬ್ಬನನ್ನು ...ಷ ಈಗಾಗಲೇ ವೈದ್ಯಕೀಯ ಅಥವ ಇನ್ನಿತರೆ ...ದುತ್ತಿರುವ ಪ್ರತಿಭಾವಂತರೊಬ್ಬರನ್ನು ಡಮ್ಮಿ ...ಯಾಗಿ ಕೂರಿಸಲಾಗುತ್ತದೆ. ಕೆಲವೊಂದು ಪ್ರಕರಣಗಳಲ್ಲಿ ಪರೀಕ್ಷೆಯ ಕೊನೆಯಲ್ಲಿ ಈ ಅಭ್ಯರ್ಥಿಗಳು ತಮ್ಮ ಉತ್ತರ ಪತ್ರಿಕೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡಿದ್ದಾರೆ. ಕೆಲವು ಪ್ರಕರಣಗಳಲ್ಲಿ ಡಮ್ಮಿ ಅಭ್ಯರ್ಥಿಯ ಪತ್ರಿಕೆಯನ್ನು ನೋಡಿ ಸುಲಭವಾಗಿ ಕಾಪಿ ಹೊಡೆಯಲು ವ್ಯವಸ್ಥೆ ಮಾಡಿರುತ್ತಾರೆ. ಪರೀಕ್ಷೆ ಬರೆಯುವ ಡಮ್ಮಿ ಅಭ್ಯರ್ಥಿ, ಪರೀಕ್ಷಾ ಕೊಠಡಿಯ ಮೇಲ್ವಿಚಾರಕರು ಹಾಗೂ ವ್ಯಾಪಂ ಮಂಡಳಿಯ ಅಧಿಕಾರಿಗಳು ಎಲ್ಲರೂ ಶಾಮೀಲಾಗಿ ಒಂದು ದಶಕಕ್ಕೂ ಹೆಚ್ಚುಕಾಲದಿಂದ ಅತ್ಯಂತ ಸುವ್ಯವಸ್ಥಿತವಾಗಿ ಈ ದಂಧೆ ನಡೆಯುತ್ತಾ ಬಂದಿದೆ.

ವ್ಯಾಪಂ ಸಂಸ್ಥೆಯೇ ಹೈಕೋರ್ಟ್‌ಗೆ ಸಲ್ಲಿಸಿದ ಹೇಳಿಕೆಯ ಪ್ರಕಾರ 1120 ಮಂದಿ ಅಭ್ಯರ್ಥಿಗಳಿಗೆ ಸಂಬಂಧಿಸಿದ ದಾಖಲೆಗಳು ಮಂಡಳಿಯ ಕಚೇರಿಯಿಂದ ನಾಪತ್ತೆಯಾಗಿವೆ ಎಂದರೆ ಪರಿಸ್ಥಿತಿಯನ್ನು ಸುಲಭವಾಗಿ ಊಹಿಸಬಹುದು. ಹಗರಣ ಹೊರಬೀಳುತ್ತಿದ್ದಂತೆ ಕೆಲವು ಸಂಸ್ಥೆಗಳು ವಿದ್ಯಾರ್ಥಿಗಳನ್ನು ಡಿಬಾರ್ ಮಾಡಿದ್ದಾರೆ. ನೌಕರಿ



ಅಕ್ಷಯ್ ಸಿಂಗ್







ನರೇಂದ್ರ ತೋಮರ್

ಗಿಟ್ಟಿಸಿಕೊಂಡ ಅನೇಕರನ್ನು ಸಸ್ಪೆಂಡ್ ಮಾಡಲಾಗಿದೆ. ಈ ಕ್ರಮಗಳನ್ನು ಕೈಗೊಂಡು ಮಧ್ಯಪ್ರದೇಶದ ಸಿಎಂ ಶಿವರಾಜಸಿಂಗ್ ಚೌಹಾಣ್ ತಮ್ಮ ಸರ್ಕಾರದ ಸಾಧನೆಗೆ ತಾವೇ ಶಹಬ್ಬಾಸ್‌ಗಿರಿ ಹೇಳುತ್ತಾ ಬಂದಿದ್ದಾರೆ. ಮಾಧ್ಯಮಗಳು ಅವರ ಜೊತೆಸೇರಿ ಬಹುಪರಾಕ್ ಹೇಳುತ್ತಾ ಬಂದಿವೆ.

ಆದರೆ ಇಲ್ಲಿ ನಾವು ನೆನಪಿಟ್ಟುಕೊಳ್ಳಲೇಬೇಕಾದ ಒಂದು ಅಂಶವಿದೆ. ಈ ಹಗರಣದಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜಸಿಂಗ್ ಚೌಹಾಣ್, ಆತನ ಪತ್ನಿ ಸಾಧನಾ ಸಿಂಗ್ ಮತ್ತು ಅವರ ಆಪ್ತವಲಯದ ಹಲವು ವ್ಯಕ್ತಿಗಳು ಹಾಗೂ ಕ್ಯಾಬಿನೆಟ್‌ನ ಹಲವು ಮಂತ್ರಿಗಳು, ಶಾಸಕರು ಭಾಗಿಯಾಗಿದ್ದಾರೆಂಬ ಆರೋಪ ಪದೇಪದೇ ಕೇಳಿಬಂದಿದೆ.

ವಿಐಪಿ ಕ್ರಿಮಿನಲ್‌ಗಳು!

ಇದುವರೆಗೆ ಸಿಕ್ಕಿಬಿದ್ದಿರುವವರಲ್ಲಿ ಮಧ್ಯಪ್ರದೇಶದ ಬಿಜೆಪಿಯ ಹಿರಿಯ ನಾಯಕ, ಉನ್ನತ ಶಿಕ್ಷಣ ಸಚಿವ ಲಕ್ಷ್ಮಿಕಾಂತ್ ಶರ್ಮ ಪ್ರಮುಖರು. ವ್ಯಾಪಂ ಮಂಡಳಿ ಈತನ ಉಸ್ತುವಾರಿಯಲ್ಲೇ ಇದೆ. ಟೀಚರ್‌ಗಳ ನೇಮಕಾತಿಯಲ್ಲಿ ಅವ್ಯವಹಾರ ನಡೆಸಿರುವ ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ಈತನ ಮೇಲೆ ಕೇಸು ದಾಖಲಿಸುವುದು ಅನಿವಾರ್ಯವಾಯಿತು. ತಪ್ಪಿಸಿಕೊಳ್ಳಲು ನಾನಾ ಕಸರತ್ತು ನಡೆಸಿದರೂ ಹೈಕೋರ್ಟ್ ಕಠಿಣವಾಗಿದ್ದರಿಂದ ಈತ ಅನಿವಾರ್ಯವಾಗಿ ಕಾನೂನುಕ್ರಮಕ್ಕೆ ಒಳಗಾಗಬೇಕಾಯ್ತು. ಹೈಕೋರ್ಟ್ ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ಆದೇಶಿಸಿದ ನಂತರ ತನ್ನ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಆತನ ಮೇಲೆ ವ್ಯಾಪಂಗೆ ಸಂಬಂಧಿಸಿ 3 ಎಫ್‌ಐಆರ್‌ಗಳು ದಾಖಲಾಗಿವೆ.

ಮಂತ್ರಿ ಲಕ್ಷ್ಮಿಕಾಂತ್ ಶರ್ಮನಡಿಯಲ್ಲಿ ವಿಶೇಷ ಕರ್ತವ್ಯಾಧಿಕಾರಿಯಾಗಿರುವ ಓ.ಪಿ.ಶುಕ್ಲಾ ಎಂಬ ವ್ಯಕ್ತಿಯೊಬ್ಬನಿದ್ದ, ಏನೇ ಆಗಲಿ ವಿಶೇಷ ಕರ್ತವ್ಯ ಮಾಡಬೇಕಲ್ಲವೆ? ಮೆಡಿಕಲ್ ಸೀಟು ಅಕ್ರಮ ದಂಧೆ ನಡೆಸುವ ವಿಶೇಷ ಕರ್ತವ್ಯ ನಿರ್ವಹಿಸಿ ಇದೀಗ ಸಿಕ್ಕಿಬಿದ್ದಿದ್ದಾನೆ.

ಈ ಹಗರಣದ ಗಾಡ್‌ಫಾದರ್ ಸ್ಥಾನದಲ್ಲಿ ಸುಧೀರ್ ಶರ್ಮ ಎಂಬ ವ್ಯಕ್ತಿಯೊಬ್ಬನಿದ್ದಾನೆ. ಈತ ಅಂತಿಂಥ ಮನುಷ್ಯನಲ್ಲ, ಮಧ್ಯಪ್ರದೇಶದ ಮೈನಿಂಗ್ ಬ್ಯಾರನ್ ಎಂದೇ ಪ್ರಸಿದ್ಧ. ಸಿಎಂ ಚೌಹಾಣ್ ಹಾಗೂ ಮಂತ್ರಿ ಲಕ್ಷ್ಮಿಕಾಂತ ಶರ್ಮರಿಗೆ ಈತ ಪರಮಾಪ್ತ, ಆರೆಸ್ಸೆಸ್ ನಾಯಕ ಸುರೇಶ್ ಸೋನಿ ಮತ್ತು ಈತನ ನಡುವಿನ ನಂಟು ಕೂಡ ಲೋಕಪ್ರಸಿದ್ಧ. ಮೂಲತಃ ಸಾಮಾನ್ಯ ಲೆಕ್ಚರರ್ ಆಗಿದ್ದ ಈ ಮಹಾನುಭಾವ ಸಾವಿರಾರು ಕೋಟಿಗಳ ಧಣಿಯಾಗಿ ಬೆಳೆದುಬಂದ ಹಾದಿಯೂ ನಿಗೂಢವೇ.

2005ರಲ್ಲಿ ಚೌಹಾಣ್ ಸಿಎಂ ಆದ ನಂತರ ಈತ ತನ್ನ ನೌಕರಿ ಬಿಟ್ಟು ಗಣಿ ಸಂಪತ್ತಿನ ಲೂಟಿಗಿಳಿದು ಕ್ರಮೇಣ ಮೈನಿಂಗ್ ಬ್ಯಾರನ್ ಎಂಬ ಬಿರುದು ಗಳಿಸಿಕೊಳ್ಳುವವರೆಗೂ ಬೆಳೆದಿದ್ದಾನೆ. ಕರ್ನಾಟಕದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಮಗ ಜನಾರ್ದನರೆಡ್ಡಿ ಸಾವಿರಾರು ಕೋಟಿಗಳ ಗಣಿ ಹಗರಣ ನಡೆಸಿದ್ದನ್ನು ಈತನಿಗೆ ಹೋಲಿಸಬಹುದು. ಮೈನಿಂಗ್ ಮಾಫಿಯಾ ಕೇಸಿನಲ್ಲಿ ಸಿಕ್ಕಿಬಿದ್ದಿದ್ದ ಶರ್ಮ ಮೇಲೆ ಪ್ರಕರಣ ದಾಖಲಿಸಿ ಸಿಬಿಐ ಆತನನ್ನು ಬಂಧಿಸಿತ್ತು. ಇದೀಗ ಈತನ ಸಾಮ್ರಾಜ್ಯದಲ್ಲಿ ಎಸ್‌ಆರ್ ಫೆರೋ ಅಲಾಯ್ಸ್, ಎಸ್‌ಆರ್ ಸೆರಾಮಿಕ್ಸ್, ಶಿವಾಲಿಕ ಮಿನರಲ್ಸ್, ಆರ್ಚಿಡ್ ಬಯೋಟೆಕ್ ಮುಂತಾದ ಹತ್ತಾರು ಕಂಪನಿಗಳಿವೆ. ಅನೇಕ ಶಾಲಾ ಕಾಲೇಜುಗಳೂ ಈತನ ಒಡೆತನದಲ್ಲಿವೆ. ಅಧಿಕೃತ ಲೆಕ್ಕಾಚಾರದ ಪ್ರಕಾರವೇ ಈತನ ಆಸ್ತಿ ಮೌಲ್ಯ 4000 ಕೋಟಿಗಳು!

ಡಾಕ್ಟರ್ ವಿನೋದ್ ಭಂಡಾರಿ ಎಂಬ ವೈದ್ಯ ಕಂ ಉದ್ಯಮಿ ಈ ಹಗರಣದಲ್ಲಿ ಪ್ರಮುಖ ಲಿಂಕ್ ಪರ್ಸನ್. ಅಧಿಕಾರಿಗಳು, ರಾಜಕಾರಣಿಗಳು ಮತ್ತು ಅಭ್ಯರ್ಥಿಗಳು ಹಾಗೂ ಪೋಷಕರ ನಡುವೆ ಮಧ್ಯವರ್ತಿಯಾಗಿದ್ದು ಡೀಲ್ ಕುದುರಿಸುತ್ತಿದ್ದವರಲ್ಲಿ ಈತ ಪ್ರಮುಖ ವ್ಯಕ್ತಿ. ಈತನ ಮೇಲೆ ಕೇಸು ದಾಖಲಾಗುತ್ತಿದ್ದಂತೆ ಈತ ತಲೆ ಮರೆಸಿಕೊಂಡ. ತಲೆ ಮರೆಸಿಕೊಂಡಿದ್ದು ಈ ದೇಶದಲ್ಲಲ್ಲ, ಕಾರ್ಪೊರೇಟ್ ಕಂಪನಿಗಳು, ಇತರ ಕಾಳಸಂತೆಯ ಖದೀಮರು, ಭ್ರಷ್ಟ ರಾಜಕಾರಣಿಗಳು ತಮ್ಮ ಸಾಕಷ್ಟು ಕಪ್ಪು ವ್ಯವಹಾರ ನಡೆಸುತ್ತಿರುವುದು ಮಾರಿಷಸ್ ಎಂಬ ಒಂದು ದ್ವೀಪ ರಾಷ್ಟ್ರದಿಂದ. ಮೋದಿ ವಿದೇಶಿ ಪ್ರವಾಸದ ಹೆಸರಿನಲ್ಲಿ ಇಲ್ಲಿ ಎರಡು ದಿನ ಉಳಿದಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಉಚಿತವೆನಿಸುತ್ತದೆ.

ಈ ಮಹಾನುಭಾವ ಕೂಡ ಅದೇ ದೇಶಕ್ಕೆ ಪರಾರಿಯಾಗಿ ತಲೆ ಮರೆಸಿಕೊಂಡ. ಮಧ್ಯಪ್ರದೇಶ ಹೈಕೋರ್ಟ್ ಆತನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ ನಂತರವೇ ಆತ ಭಾರತಕ್ಕೆ ವಾಪಸ್ ಬಂದಿದ್ದು.

ಮತ್ತೊಬ್ಬ ವಿಐಪಿ ಪಂಕಜ್ ತ್ರಿವೇದಿ. ಈತ ವ್ಯಾಪಂ ಪರೀಕ್ಷಾ ಮಂಡಳಿಯ ನಿಯಂತ್ರಣಾಧಿಕಾರಿ. ಕೋಟ್ಯಾಂತರ ರೂಪಾಯಿ ಹಣ ಮತ್ತು ಆಸ್ತಿಪಾಸ್ತಿಗಳ ದಾಖಲೆ ಪತ್ರಗಳನ್ನು ಆತನಿಂದ ವಶಪಡಿಸಿಕೊಳ್ಳಲಾಗಿದೆ. ಇಂದೋರ್‌ನ ಮೆಡಿಕಲ್ ಕಾಲೇಜೊಂದರಲ್ಲಿ ಈತ ಪಾಲುದಾರಿಕೆ ಹೊಂದಿರುವುದು ಬಯಲಾಗಿದೆ. ಸುಧೀರ್ ಶರ್ಮನೇ ಲಾಬಿ ನಡೆಸಿ ತ್ರಿವೇದಿಯನ್ನು ಈ ಹುದ್ದೆಗೆ ತಂದಿದ್ದು ಈಗ ಬಯಲಾಗಿದೆ.

ಎಸ್‌ಐಟಿ ತನಿಖೆ ಆರಂಭವಾಗಿ ಮೇಲುನೋಟಕ್ಕೆ ಅಕ್ರಮ ಎಸಗಿರುವುದು ಕಂಡುಬಂದು ಬಂಧಿತರಾದ ಕಳಂಕಿತ ಅಭ್ಯರ್ಥಿಗಳ ನೌಕರಿಯನ್ನು ಅಥವ ಕಾಲೇಜು ಸೀಟನ್ನು ರದ್ದುಪಡಿಸಲು ಸಂಬಂಧಿತ ಆಡಳಿತ ಮಂಡಳಿಗಳು ಕ್ರಮಕೈಗೊಂಡವು. ಆಗ ಇದೇ ಪಂಕಜ್ ತ್ರಿವೇದಿ ಅಂಥ ಇಲಾಖೆಯ ಮುಖ್ಯಸ್ಥರಿಗೆ ಹಾಗೂ ಕಾಲೇಜು ಆಡಳಿತ ಮಂಡಳಿಗೆ ಪತ್ರ ಬರೆದು ಈ ಅಭ್ಯರ್ಥಿಗಳಿಂದ 'ತಪ್ಪಿತಸ್ಥರೆಂದು ಸಾಬೀತಾದರೆ ತಾವು ಪಡೆದುಕೊಂಡಿದ್ದ ಹುದ್ದೆ ಅಥವ ಸೀಟನ್ನು ಬಿಟ್ಟುಕೊಡುವುದಾಗಿ' ಘೋಷಣಾಪತ್ರ ಬರೆಸಿಕೊಂಡು ಯಥಾಸ್ಥಿತಿಯಲ್ಲಿ ಅವರು ಮುಂದುವರೆಸಬೇಕೆಂದು ಶಿಫಾರಸ್ಸು ಪತ್ರ ಕಳಿಸಿದ್ದ. ಅಂದರೆ ಇಷ್ಟೆಲ್ಲಾ ಕೇಸುಗಳು ಬಿದ್ದ ಮೇಲೂ ಆರೋಪಿತರನ್ನು ರಕ್ಷಿಸಲು ಹೀಗೆ ಬಹಿರಂಗವಾಗಿ ಮುಂದಾಗುತ್ತಾನೆಂದರೆ ಆತನಿಗೆ ಸರ್ಕಾರದ ಮೇಲೆ, ಮಂತ್ರಿ ಮಹೋದಯರ ಮೇಲೆ ಎಷ್ಟೊಂದು ವಿಶ್ವಾಸವಿದೆ ಎಂಬುದನ್ನು ಯೋಚಿಸಿ.

ಈ ಸಾವು ನ್ಯಾಯವೇ?

ಹೀಗೆ ನಾನಾ ಅಕ್ರಮಗಳನ್ನೆಸಗಿ ಸಾವಿರಾರು ಕೋಟಿ ಲೂಟಿ ಮಾಡಿರುವ ಈ ಸ್ವಘೋಷಿತ 'ಭಕ್ತ'ರ ಕೂಟ ತಮ್ಮ ಅಕ್ರಮಗಳ ವಿರುದ್ಧ ಸಾಕ್ಷ್ಯ ನುಡಿಯಲು ಹೊರಟಿದ್ದ ಜನರ ಜೀವಗಳನ್ನೇ ಬಲಿ ತೆಗೆದುಕೊಳ್ಳುತ್ತಿದ್ದಾರೆ ಎಂಬುದು ಫಿರ್ಯಾದಿಗಳ ಆರೋಪ. ಈ ವಾದವನ್ನು ಅಲ್ಲಗಳೆಯಲು ಸದ್ಯಕ್ಕೆ ಅಂಥ ಬಲವಾದ ಕಾರಣಗಳಿಲ್ಲ. ಇದೆಲ್ಲಾ ಹೋಗಲಿ; ತನಿಖೆ ನಡೆಸುತಿದ್ದ ಎಸ್‌ಟಿಎಫ್ ಹೈಕೋರ್ಟ್‌ಗೆ ಸಲ್ಲಿಸಿದ ಅಫಿಡೆವಿಟ್ ಪ್ರಕಾರವೇ ಈ ಹಗರಣಕ್ಕೆ ಸಂಬಂಧಿಸಿ ನಡೆದ ಅಸಹಜ ಹಾಗೂ ಅನುಮಾನಾಸ್ಪದ ಸಾವುಗಳ ಸಂಖ್ಯೆ 25. ವಾಸ್ತವಾಂಶಗಳನ್ನು ಪರಿಶೀಲಿಸಿದಾಗ ಇಂಥಾ ಸಾವಿನ ಸಂಖ್ಯೆ 48ಕ್ಕೆ ಮುಟ್ಟಿದೆ. ಹೀಗೆ ಸತ್ತವರು ಅರ್ಥಾತ್ ಕೊಲೆಯಾದವರು ಯಾರು? ಒಂದೋ ಆರೋಪಿತರು ಅಥವ ಈ ಪ್ರಕರಣದ ವಿವಿಧ ರೀತಿಯ ಸಾಕ್ಷಿಗಳು. ಬಹುತೇಕರು 25ರಿಂದ 30 ವಯಸ್ಸಿನವರು! ಸಾಕಷ್ಟು ಮಂದಿ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು!!

ಅಂದರೆ ಏನರ್ಥ?

ಉನ್ನತ ಹಂತದ ರಾಜಕಾರಣಿಗಳು, ಅಧಿಕಾರಿಗಳು, ಕ್ರಿಮಿನಲ್ ಗ್ಯಾಂಗ್‌ಗಳು ಮತ್ತು ಪೊಲೀಸ್ ಇಲಾಖೆ ಎಲ್ಲರೂ ಒಟ್ಟಾಗಿ ಒಂದು ಮಾಫಿಯಾ ರೀತಿಯಲ್ಲಿ ಆಪರೇಟ್ ಆಗುತ್ತಿದೆಯೇನೋ ಎಂಬ ಬಲವಾದ ಸಂಶಯ ಕಾಡತೊಡಗುತ್ತದೆ. ಕಾಲೇಜಿನ ಡೀನ್‌ಗಳನ್ನು, ಕೊನೆಗೆ ಪ್ರಸಿದ್ಧ ಚಾನೆಲ್‌ಗಳ ಪತ್ರಕರ್ತರನ್ನೂ ಬಲಿತೆಗೆದುಕೊಳ್ಳುವ ಮಟ್ಟಕ್ಕೆ ಈ ಕಿಲ್ಲರ್ ಸ್ಕ್ಯಾಂಡಲ್ ಬೆಳೆದುನಿಂತಿದೆ.

ಸುಪ್ರಿಂ ಕೋರ್ಟಿನ ಉಸ್ತುವಾರಿಯಲ್ಲಿ ಸಿಬಿಐ ತನಿಖೆಯಾಗಬೇಕೆಂದು ವಿದ್ಯಾರ್ಥಿಗಳು, ಪೋಷಕರು ಹಾಗೂ ವಿರೋಧ ಪಕ್ಷಗಳು ಒಕ್ಕೊರಲಿನಿಂದ ಬೇಡಿಕೆ ಇಟ್ಟಿದ್ದರೂ ಅದನ್ನು ಖಂಡತುಂಡವಾಗಿ ವಿರೋಧಿಸುತ್ತಾ ಬಂದ ಸಿಎಂ ಚೌಹಾಣ್ ಕೋರ್ಟ್ ಛೀಮಾರಿ ಹಾಕಿ ಆದೇಶಿಸಿದ ನಂತರ ಈಗ ವಿಧಿಯಿಲ್ಲದೆ ಸಿಬಿಐಗೆ ವಹಿಸಲು ಒಪ್ಪಿದ್ದಾರೆ.

ಇಲ್ಲಿ ಪ್ರಧಾನಿ ಮೋದಿಯ ನಡೆಯನ್ನು ನಾವು ಗಮನಿಸಬೇಕು. ಎಲ್ಲದರ ಬಗ್ಗೆಯೂ 'ಮನ್ ಕಿ ಬಾತ್' ಹೆಸರಿನಲ್ಲಿ ಪುಂಖಾನುಪುಂಖವಾಗಿ ಮಾತಾಡುವ ಮೋದಿ, ಬಿಜೆಪಿಯ ತಟ್ಟೆಯಲ್ಲಿ ಬಿದ್ದಿರುವ ಹೆಗ್ಗಣದ ವಿಷಯದ ಬಗ್ಗೆ ಮಾತ್ರ ಬಾಯೇ ಬಿಚ್ಚಿಲ್ಲ. ಕರ್ನಾಟಕದಲ್ಲಿ ಪ್ರಾಮಾಣಿಕ ಅಧಿಕಾರಿಯೆನಿಸಿಕೊಂಡಿದ್ದ ಡಿಕೆ ರವಿ ತನ್ನ ವೈಯಕ್ತಿಕ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ದುರ್ಬಳಕೆ ಮಾಡಿಕೊಂಡು, ಬಿಜೆಪಿ ಪಕ್ಷದವರು ದೇಶ ಮಟ್ಟದಲ್ಲಿ ಹೇಗೆ ಅಬ್ಬರ ಸೃಷ್ಟಿಸಿದರು ಎಂಬುದನ್ನು ಒಮ್ಮೆ ನೆನಪಿಸಿಕೊಳ್ಳಿ. ಈ ವಿಷಯದಲ್ಲಿ ಅಮಿತ್ ಶಾನಿಂದ ಕರ್ನಾಟಕದ ಬಿಜೆಪಿ ನಾಳಯಕ್ಕೆ ರವಾನೆಯಾಗಿದ್ದ ಆದೇಶಗಳನ್ನು ಒಮ್ಮೆ ನೆನಪಿಸಿಕೊಳ್ಳಿ. ನಮ್ಮ ಮಾಧ್ಯಮಗಳು ಎತ್ತ ಕಡೆ ಸಾಗುತ್ತಿವೆ ಎಂಬುದರ ದರ್ಶನವಾಗುತ್ತದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ದಾವಣಗೆರೆ ನಗರಪಾಲಿಕೆ: ಶಾಮನೂರು ದೊಡ್ಡಿಯಲ್ಲಿ ಜೋಡಿ ಹೆಗ್ಗಣ!



ದಾವಣಗೆರೆ ನಗರ ಪಾಲಿಕೆಯ ಪರಿಸ್ಥಿತಿ ಅಕ್ಷರಶಃ ಬಾಣಲಿಯಿಂದ ಬೆಂಕಿಗೆ ನೆಗೆದಂತಾಗಿದೆ. ಈ ಹಿಂದೆ ಭರ್ತಿ ಐದು ವರ್ಷ ಅಧಿಕಾರದಲ್ಲಿದ್ದ ಬಿಜೆಪಿ ಕಾರ್ಪೊರೇಟರ್‌ಗಳ ಅಂದಾದುಂಧಿ ಕಂಡು ಬೇಸತ್ತು ಹೋಗಿದ್ದ ಮತದಾರ ಕಳೆದ ನಗರಪಾಲಿಕೆ ಚುನಾವಣೆಯಲ್ಲಿ ಅವರಿಗೆ ಗೇಟ್‌ಪಾಸ್ ಕೊಟ್ಟು ಮನೆಗೆ ಗದುಮಿದ್ದಲ್ಲದೆ ಕಾಂಗ್ರೆಸ್‌ಗೆ ಭರ್ಜರಿ ಬಹುಮತ ನೀಡಿ, ಇಡೀ ನಗರಪಾಲಿಕೆಯನ್ನು 'ಹಸ್ತ'ದ ಅಂಗೈಗೆ ಒಪ್ಪಿಸಿದ್ದ. ಕಾಂಗ್ರೆಸ್‌ನ ಈ ಭಾರೀ ಗೆಲುವಿನಲ್ಲಿ ಬಿಜೆಪಿಯ ಹೊಣೆಗೇಡಿ ಆಡಳಿತದ ಪಾಲು ಎಷ್ಟಿದೆಯೋ ಅದರ ಎರಡರಷ್ಟು ಶ್ರೇಯಸ್ಸು ಸಲ್ಲಬೇಕಾದ್ದು ಮಾಜಿಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ್‌ಗೆ. ಈ ಹಿಂದೆ ಮಲ್ಲಿಕಾರ್ಜುನ್ ಶಾಸಕರಾಗಿದ್ದಾಗ, ಕ್ರೀಡಾ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ನಗರದ ಅಭಿವೃದ್ಧಿಗೆಂದು ಕ್ರಿಯಾಶೀಲವಾಗಿ ಓಡಾಡಿ ಮಾಡಿದ್ದ ಜನೋಪಕಾರಿ ಕಾರ್ಯಗಳು ಮತ್ತು ಅವರ ಮೇಲಿನ ಭರವಸೆಯಿಂದಲೇ ಮತಪ್ರಭು ಕಾಂಗ್ರೆಸ್‌ನತ್ತ ಒಲವು ತೋರಿದ್ದು. ಆದರೆ ಜನರಿಟ್ಟಿದ್ದ ಆ ಭರವಸೆಯನ್ನು ಈಡೇರಿಸುವ ಯಾವ ಲಕ್ಷಣಗಳೂ ಶಾಮನೂರು ಕುಟುಂಬದ ಕಡೆಯಿಂದ ಈವರೆಗೆ ಕಂಡುಬಂದಿಲ್ಲ. ಮುಖ್ಯವಾಗಿ ಯಾವ ಎಸ್.ಎಸ್. ಮಲ್ಲಿಕಾರ್ಜುನ್ ಮೇಲೆ ನಂಬಿಕೆಯಿಟ್ಟು ಜನ ವೋಟು ಹಾಕಿದ್ದರೋ ಅದೇ ಮಲ್ಲಿಕಾರ್ಜುನ್, ಎಂಪಿ ಎಲೆಕ್ಷನ್‌ನಲ್ಲಿ ಸೋತ ನಂತರ ಸಾರ್ವಜನಿಕ ಬದುಕಿನಿಂದಲೇ ವಿಮುಖರಾಗಿ ಹೋಗಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಧಣಿ ಫ್ಯಾಮಿಲಿಯ ಕೆಲ ಜೀ ಹುಜೂರ್ ಗಿರಾಕಿಗಳು ತಾವೇ ಶಾಮನೂರು ಪಾಳಯದ ಪವರ್ ಆಫ್ ಅಟಾರ್ನಿಗಳೆಂಬಂತೆ ನಗರಪಾಲಿಕೆಯನ್ನು ಲೂಟಿ ಹೊಡೆಯುತ್ತಿದ್ದಾರೆ. ಅಂತವರ ಪಟ್ಟಿಯಲ್ಲಿ ಮುಂಚೂಣಿಯಲ್ಲಿ ನಿಲ್ಲೋದು ದಿನೇಶ್ ಶೆಟ್ಟಿ ಮತ್ತು ಎ. ನಾಗರಾಜ್ ಎಂಬ ಜೋಡಿ ಹೆಗ್ಗಣಗಳ ಹೆಸರು. ಅಂದಹಾಗೆ, ದಿನೇಶ್ ಶೆಟ್ಟಿ ಇಲ್ಲಿ ಕಾರ್ಪೊರೇಟರ್ ಆಗಿ ದರ್ಬಾರು ನಡೆಸುತ್ತಿದ್ದರೆ, ನಾಗರಾಜ್‌ನದ್ದು 'ಅಮ್ಮಾವ್ರ ಗಂಡ'ನ ಕಾರುಬಾರು; ಅರ್ಥಾತ್, ಹೆಂಡತಿ ರೇಖಾಳ ಕಾರ್ಪೊರೇಟರ್‌ಗಿರಿಯನ್ನು ಚಲಾಯಿಸಿಕೊಂಡು ಲೂಟಿ ಮಾಡುತ್ತಿದ್ದಾನೆ.

ಶಾಮನೂರು ಶಿವಶಂಕರಪ್ಪನ ಮಾನಸಪುತ್ರನ ಗೆಟಪ್ಪಿನಲ್ಲಿ ಚಿಕ್ಕಳಮಕ್ಕಳ ಕೂತು ಪಾಲಿಕೆಯನ್ನು ಮೇಯುತ್ತಿರುವ ದಿನೇಶ್ ಶೆಟ್ಟಿಯ ಉಪಟಳ ಶುರುವಾದದ್ದು ಇಂದು-ನಿನ್ನೆಯಲ್ಲ. ಸರಿಸುಮಾರು ಮಲ್ಲಿಕಾರ್ಜುನ್ ದಾವಣಗೆರೆ ರಾಜಕಾರಣಕ್ಕೆ ಎಂಟ್ರಿ ಕೊಟ್ಟಾಗಲೇ ಈ ಶೆಟ್ಟಿಗಾರು ಕೂಡ ಮಲ್ಲಿಕಾರ್ಜುನ್ ಚಾಕರಿ ನೆಪದಲ್ಲಿ ರಾಜಕಾರಣದಲ್ಲಿ ಕೈಯಾಡಿಸಲು ಶುರು ಮಾಡಿದವನು. ಈ ಶೆಟ್ಟಿ ಮೂಲಕವೇ ಮಲ್ಲಿಕಾರ್ಜುನ್‌ನ ರಾಜಕೀಯ ಪಡಸಾಲೆಗೆ ಅಡಿಯಿಟ್ಟವನು ಎ. ನಾಗರಾಜ ಅಲಿಯಾಸ್ ತಲೆಮಟ್ ನಾಗರಾಜ. ಈ ಇಬ್ಬರು, ಶಾಮನೂರು ರಾಜಕಾರಣದ ನಡುಮನೆಯಿಂದ ಮಲ್ಲಿಕಾರ್ಜುನರ ಅಂತಃಪುರದ ಸಪ್ಲೈಯರುಗಳಾಗಿ ಬಡ್ತಿ ಪಡೆದದ್ದೇ ತಡ ಮೆಲ್ಲಗೆ ದಾವಣಗೆರೆಯ ಆಗಿನ ನಗರಸಭಾ ರಾಜಕಾರಣದ ಕಡೆಗೂ ಹೆಜ್ಜೆಹಾಕಿದರು. ಅಲ್ಲಿಂದಾಚೆಗೆ ತಡವಾಗಲೇ ಇಲ್ಲ, ಶಾಮನೂರು ದಣಿ ಮತ್ತು ಮಲ್ಲಿಕಾರ್ಜುನ್ ಹೆಸರುಗಳ ಮರ್ಜಿಯಲ್ಲೇ ಈ ಜೋಡಿ ನಗರಪಾಲಿಕೆ ಚುನಾವಣೆಯಲ್ಲಿ ಗೆದ್ದು ಕಾರ್ಪೊರೇಟರ್‌ಗಳಾಗಿ ನಗರಕ್ಕೆ ಅಮರಿಕೊಂಡರು. ಅಲ್ಲಿಂದ ಇಬ್ಬರು, ಹೆಚ್ಚೂಕಡಿಮೆ ಹದಿನೈದು ವರ್ಷಗಳ ಕಾಲ ಪಾಲಿಕೆ ಪಡಸಾಲೆಯನ್ನು ತಮ್ಮ ಮೇವಿನ ಕೊಟ್ಟಿಗೆಯನ್ನಾಗಿಸಿಕೊಂಡಿದ್ದಾರೆ.

2008ರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದಿದ್ದರಿಂದ ಕೊಂಚ ದೂರ ಉಳಿದಿದ್ದ ಈ ಜೋಡಿ ಅಂಡುಸುಟ್ಟ ಬೆಕ್ಕಿನಂತೆ ಪತರುಗುಟ್ಟುತ್ತಲೇ ಇದ್ದರು. ಆದರೆ 2013ರ ಚುನಾವಣೆಯಲ್ಲಿ ಬಿಜೆಪಿಗಳ ಅಖಂಡ ಭ್ರಷ್ಟಾಚಾರಕ್ಕೆ ಬೇಸತ್ತ ಮತದಾರ, 41 ಸದಸ್ಯರ ಬಲದ ಪಾಲಿಕೆಯಲ್ಲಿ 39 ಜನ ಕೈ ಪಾರ್ಟಿಯ ಸದಸ್ಯರು ಗೆಲ್ಲಿಸಿ ಪುನಃ ಪಾಲಿಕೆ ಚುಕ್ಕಾಣಿಯನ್ನು ಕಾಂಗ್ರೆಸ್ ಕೈಗೆ ಒಪ್ಪಿಸಿದ್ದೇ ತಡ ಈ ಹೆಗ್ಗಣದ್ವಯರು ಪಾಲಿಕೆಯ ಖಜಾನೆಗೆ ಬಿಲ ತೋಡುವುದನ್ನು ಮತ್ತೆ ಶುರುವಿಟ್ಟುಕೊಂಡಿದ್ದಾರೆ. ಇತ್ತ ವಯೋವೃದ್ಧ ಧಣಿ ಕೂತರೆ ಏಳಲಿಕ್ಕಾಗದ ಪರಿಸ್ಥಿತಿಯಲ್ಲಿದ್ದರೂ ಮಕ್ಕಳ ಭವಿಷ್ಯಕ್ಕಾಗಿ ಮಂತ್ರಿಗಿರಿ ಉಳಿಸಿಕೊಳ್ಳುವ ಕಸರತ್ತು ನಡೆಸುತ್ತಿದ್ದಾರೆ, ಅತ್ತ ಎಸ್.ಎಸ್.



ಮಲ್ಲಿಕಾರ್ಜುನ್ ಸತತ ಎರಡನೇ ಬಾರಿ ಎಂ.ಪಿ. ಎಲೆಕ್ಷನ್‌ನಲ್ಲಿ ಸೋತ ಖೇದದಲ್ಲೇ ಜನರಿಂದ ಕಣ್ಮರೆಯಾಗಿ ದೇವದಾಸನಂತಾಗಿದ್ದಾರೆ; ಒಟ್ಟಿನಲ್ಲಿ ಹೇಳೋರು, ಕೇಳೋರು ಯಾರೂ ಇಲ್ಲದಂತಾಗಿರುವ ಸಂದರ್ಭವನ್ನು ಶೆಟ್ಟಿ ಮತ್ತು ನಾಗರಾಜ್ ಮಜಬೂತಾಗೇ ಬಳಸಿಕೊಳ್ಳುತ್ತಿದ್ದಾರೆ. ಕಳೆದ ಎರಡು ವರ್ಷದಲ್ಲಿ ಇವರಿಬ್ಬರ ಪಾರುಪತ್ಯದಲ್ಲಿ ನಗರಪಾಲಿಕೆಯಲ್ಲಿ ನಡೆದಿರುವ ಹಗರಣಗಳೇ ಪಾಲಿಕೆಯ ದುಸ್ಥಿತಿಯನ್ನು ಬಿಚ್ಚಿಡುತ್ತವೆ.

ಹಗರಣಗಳ ಸರಮಾಲೆ


ಖಜಾನೆಯಿಂದ ಕೋಟಿಗಟ್ಟಲೆ ರೊಕ್ಕ ಖಾಲಿಯಾಗುತ್ತಿದೆ, ಆದರೆ ಆ ಅಮೌಂಟು ಖರ್ಚಾದ ಯಾವ ಕುರುಹುಗಳೂ ದಾವಣಗೆರೆಯ ಭೌಗೋಳಿಕ

"ಅಚ್ಛೆ ದಿನ್" ಬರುತ್ತಿದೆ, ಆದರೆ ಯಾರಿಗೆ?

ಅಂದು ಯುಪಿಎ ಸರ್ಕಾರದ ಅವಧಿಯಲ್ಲಿ ಆರಂಭಿಸಲಾಗಿದ್ದ ಸಮಾಜೋ ಆರ್ಥಿಕ ಮತ್ತು ಜಾತಿವಾರು ಗಣತಿಯ ಆಂಶಿಕ ಅಂಕಿಅಂಶಗಳನ್ನು ಇತ್ತೀಚೆಗೆ ಮೋದಿ ಸರ್ಕಾರ ಬಿಡುಗಡೆಗೊಳಿಸಿದೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ (ಎನ್‌ಎಸ್‌ಎಸ್‌ಒ) ನಡೆಸಿದ ಸಮೀಕ್ಷೆಯ ವರದಿಯೂ ಸರಿಸುಮಾರು ಇದೇ ಕಾಲಕ್ಕೆ ಹೊರಬಿದ್ದಿದೆ. ಆದರೆ ಜಾತಿ ಮತ್ತು ಧಾರ್ಮಿಕ ಗಣತಿಯ ಫಲಿತಾಂಶವನ್ನು ತಡೆಹಿಡಿಯಲಾಗಿದೆ. ಸರ್ಕಾರದ ಈ ನಡೆ ಬಹಳಷ್ಟು ಅನುಮಾನಗಳಿಗೆ ಕಾರಣವಾಗಿದೆ. ಬಹುಶಃ ಇದರ ಹಿಂದೆ ಚುನಾವಣಾ ರಾಜಕೀಯ ಲೆಕ್ಕಾಚಾರಗಳು ಕೆಲಸ ಮಾಡಿರಬೇಕೆಂದು ತೋರುತ್ತದೆ. ಸಮಾಜೋ ಆರ್ಥಿಕ ಗಣತಿಯ ಅಂಕಿಅಂಶಗಳು ಹಳ್ಳಿಗಾಡಿನ ಜನರ ದುರ್ಭರ ಬದುಕಿನ ವಾಸ್ತವವನ್ನು ತೆರೆದಿಡುವುದರೊಂದಿಗೆ ಜನಸಾಮಾನ್ಯರ ಪಾಲಿಗೆ ಆರೋಗ್ಯ ಮತ್ತು ಶಿಕ್ಷಣ ಸೇವೆಗಳು ಹೇಗೆ ದುಬಾರಿಯಾಗುತ್ತಾ ಬರುತ್ತಿವೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ. ಮೋದಿ ಸರ್ಕಾರಕ್ಕೆ ಇದೆಲ್ಲ ತಿಳಿದಿರಲಿಲ್ಲವೆಂದಲ್ಲ, ಆದರೂ ಅದು ಈ ಎರಡು ಪ್ರಮುಖ ವಲಯಗಳಿಗೆ ನೀಡಬೇಕಾದ ಬಜೆಟ್ ಅನುದಾನದ ಮೇಲೆ ಉದ್ದೇಶಪೂರ್ವಕವಾಗಿ ಕತ್ತರಿಪ್ರಯೋಗ ಮಾಡಿದೆ. ಅದೇ ಸಮಯದಲ್ಲಿ ಮೇಲ್ವರ್ಗಗಳು ಮತ್ತು ಕಾರ್ಪೊರೇಟು ಕುಳಗಳಿಗೆ ಒಂದು ಲಕ್ಷ ಕೋಟಿಗೂ ಅಧಿಕ ಮೌಲ್ಯದ ಪರೋಕ್ಷ ಸಬ್ಸಿಡಿಗಳನ್ನು ಮೊಗೆಮೊಗೆದು ಕೊಟ್ಟಿದೆ. ಪುರಾವೆ ಸಹಿತ ಬಯಲಾಗಿರುವ ಈ ದಾಖಲೆಗಳು ಮೋದಿ ಸರ್ಕಾರದ "ಅಚ್ಛೆ ದಿನ್" ಘೋಷಣೆ ಯಾರನ್ನು ಉದ್ದೇಶಿಸಿದ್ದಾಗಿದೆ ಮತ್ತು ಅದರ ನೈಜ ಫಲಾನುಭವಿಗಳು ಯಾರು ಎಂಬುದನ್ನು ಸಾರಿ ಹೇಳುತ್ತಿವೆ.

ಗಣತಿಯ ಅಂಕಿಅಂಶಗಳು ತಿಳಿಸುವಂತೆ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪ್ರತಿ 100 ಕುಟುಂಬಗಳ ಪೈಕಿ 56 ಕುಟುಂಬಗಳಿಗೆ ಸ್ವಂತ ಭೂಮಿ ಇಲ್ಲ, ಇವರಲ್ಲಿ 30 ಕುಟುಂಬಗಳು ದಿನಗೂಲಿಯಲ್ಲಿ ಬದುಕು ಸಾಗಿಸುತ್ತಿವೆ. 23.5 ಕುಟುಂಬಗಳಲ್ಲಿರುವ 25 ವರ್ಷಕ್ಕೆ ಮೇಲ್ಪಟ್ಟವರು ಅನಕ್ಷರಸ್ಥರು. ಗ್ರಾಮೀಣ ಭಾಗದ ಶೇಕಡಾ 25.7ರಷ್ಟು ಜನರ ದೈನಂದಿನ ಸರಾಸರಿ ಆದಾಯ ರೂ. 27ಕ್ಕಿಂತಲೂ ಕಡಿಮೆ ಇದೆ. ರೂ. 27 ಯೋಜನಾ ಆಯೋಗ ವಿಧಿಸಿರುವ ಮಿತಿಯಾಗಿದೆ. ವಾಸ್ತವವಾಗಿ ಇವತ್ತು ವ್ಯಕ್ತಿಯೊಬ್ಬ ಕನಿಷ್ಠ ಅನ್ನ, ನೀರು, ಬಟ್ಟೆ, ಮನೆ, ಮೂಲಭೂತ ಶಿಕ್ಷಣ ಮತ್ತು ಆರೋಗ್ಯ ಸೇವೆಗಳಿಗೆ ಮಾಡಬೇಕಿರುವ ವೆಚ್ಚವನ್ನು ಲೆಕ್ಕಹಾಕಿದರೆ ರೂ. 27 ಎಲ್ಲಿಲ್ಲಿಗೂ ಸಾಲದು.

ಎನ್‌ಎಸ್‌ಎಸ್‌ಒ ಸಮೀಕ್ಷೆ ಪ್ರಕಾರ ಕಳೆದ ಏಳು ವರ್ಷಗಳಿಂದ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಬೆಲೆ ಸತತವಾಗಿ ಏರುತ್ತಾ ಬರುತ್ತಿದೆ. ಇದಕ್ಕೆ ಮುಖ್ಯ ಕಾರಣ ಸಾರ್ವಜನಿಕ ವಲಯದ ಶಿಕ್ಷಣಸಂಸ್ಥೆಗಳು ಮತ್ತು ಆಸ್ಪತ್ರೆಗಳ ಸಂಖ್ಯೆಯಲ್ಲಿ ಹೆಚ್ಚಳ ಆಗದಿರುವುದು ಮತ್ತು ಅವುಗಳ ಗುಣಮಟ್ಟದಲ್ಲೂ ಸುಧಾರಣೆ ಆಗದಿರುವುದು. ಇಂತಹ




ಪರಿಸ್ಥಿತಿಯಲ್ಲಿ ಹೆಚ್ಚೆಚ್ಚು ಜನ ಹಲವಾರು ಪಟ್ಟು ದುಬಾರಿಯಾಗಿರುವ ಖಾಸಗಿ ವಲಯದ ಮೊರೆಹೋಗದೆ ಗತ್ಯಂತರವಿಲ್ಲ ಎಂದಾಗಿದೆ. ಪರಿಣಾಮವಾಗಿ ಅನೇಕ ಕುಟುಂಬಗಳು ಇಂದು ಶಿಕ್ಷಣ ಮತ್ತು ಆರೋಗ್ಯ ಸೇವೆಗಳಿಗಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಉದಾಹರಣೆಗೆ 2007-14ರ ಅವಧಿಯಲ್ಲಿ ಸರಾಸರಿ ಶಿಕ್ಷಣ ವೆಚ್ಚದಲ್ಲಿ ಎರಡು ಪಟ್ಟು ಹೆಚ್ಚಳ ಆಗಿದೆ. ಪರಿಣಾಮವಾಗಿ ಸಾಲ ಮಾಡಲೇಬೇಕಾಗಿ ಬಂದಿರುವ ಕಮ್ಮಿ ಆದಾಯದ ಕುಟುಂಬಗಳ ತಾಪತ್ರಯ ಹೇಳತೀರದಾಗಿದೆ. ನಮ್ಮ ಪುರುಷಪ್ರಧಾನ ಸಮಾಜದಲ್ಲಿ ಇದರ ಬಿಸಿ ಮೊದಲು ತಟ್ಟುವುದೆ ಕುಟುಂಬದ ಹೆಣ್ಮಕ್ಕಳ ಮೇಲೆ. ಅದಕ್ಕೇ ಪ್ರಾಥಮಿಕ ಶಾಲೆಗಳಿಗೆ ಸೇರುವ ಮಕ್ಕಳಲ್ಲಿ ಶೇಕಡಾ 50ರಷ್ಟು ಹುಡುಗರು ಉನ್ನತ ಶಿಕ್ಷಣವನ್ನು ಮುಗಿಸುತ್ತಾರಾದರೆ ಹುಡುಗಿಯರ ಶೇಕಡಾವಾರು ಪ್ರಮಾಣ ಬರೀ 20ರಷ್ಟಿದೆ.

ಇವೆಲ್ಲಾ ಅಂಕಿಅಂಶಗಳ ಅರಿವಿದ್ದ ಮೋದಿ ಸರ್ಕಾರ ಬಜೆಟ್ಟು ತಯಾರಿಯ ವೇಳೆ ತನ್ನ ಅಸಲಿ ಗುಣವನ್ನು ತೋರ್ಪಡಿಸಿದೆ. ಅಳಿವಿನಂಚಿನಲ್ಲಿರುವ ಸಾರ್ವಜನಿಕ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಮೇಲಕ್ಕೆತ್ತಿ ಜನಸಾಮಾನ್ಯರ ಬದುಕನ್ನು ಹಸನುಗೊಳಿಸುವ ಬದಲು ಆ ಸೇವೆಗಳಿಗೆ ಹಿಂದಿಗಿಂತ ಕಡಿಮೆ ಅನುದಾನವನ್ನು ನೀಡಿದೆ. ಈ ರೀತಿ ಅನುದಾನದಲ್ಲಿ ಕಡಿತ ಮಾಡುತ್ತಿರುವುದು ಕಳೆದ ಒಂದು ದಶಕದಲ್ಲಿ ಇದೇ ಮೊದಲ ಬಾರಿಗೆ. ಪರಿಣಾಮವಾಗಿ ನಾಲ್ಕು ಇಲಾಖೆಗಳು - ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕುಡಿಯುವ ನೀರು ಮತ್ತು ನೈರ್ಮಲ್ಯ ಹಾಗು ಮಾನವ ಸಂಪನ್ಮೂಲ ಅಭಿವೃದ್ಧಿ - ಹಣಕಾಸಿನ ಕೊರತೆ ಎದುರಿಸುತ್ತಿವೆ. 2014-15ಕ್ಕೆ ಹೋಲಿಸಿದರೆ 2015-16ರ ಬಜೆಟ್ಟಿನಲ್ಲಿ ಒಟ್ಟು 40,205 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕಡಿಮೆ ಮಾಡಲಾಗಿದೆ. ಇದರಲ್ಲಿ ಕೇಂದ್ರ ಯೋಜನೆಗಳಷ್ಟೆ ಅಲ್ಲದೆ ರಾಜ್ಯ ಯೋಜನೆಗಳಿಗೆ ನೀಡುವ ಸಹಾಯಧನವೂ ಸೇರಿದೆ.

ಸಬ್ಸಿಡಿಗಳನ್ನೆಲ್ಲ ತೆಗೆದುಹಾಕಲು ಪಣ ತೊಟ್ಟಿರುವ ಮೋದಿ ಸರ್ಕಾರದ ಕೆಂಗಣ್ಣು ಮೊದಲು ಬಿದ್ದುದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲೆ. ಅಂತೆಯೆ ಡಿಸೆಂಬರ್ 2014ರಲ್ಲಿ ಅದು 2014-15ರ ಸಾಲಿನ ಬಜೆಟ್ಟಿಗೆ ತಿದ್ದುಪಡಿ ತಂದು ಇಲಾಖೆಗೆ ಮೀಸಲಿಟ್ಟಿದ್ದ ಅನುದಾನದಲ್ಲಿ ಶೇಕಡಾ 20ರಷ್ಟು (6500 ಕೋಟಿ ರೂಪಾಯಿ) ಕಡಿತ ಮಾಡಿತು. ಮುಂದೆ 2014-15ರ ಬಜೆಟ್ಟಿನಲ್ಲೂ ಅದೇ ಮೊತ್ತವನ್ನು ಉಳಿಸಿಕೊಂಡಿತು. ಬಳಿಕ ಸರ್ಕಾರದ ಗೃಧ್ರದೃಷ್ಟಿ ಮಿಕ್ಕ ಮೂರು ಇಲಾಖೆಗಳ ಮೇಲೆ ಹೊರಳಿತು. ತಕ್ಷಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುದಾನದಲ್ಲಿ ಶೇಕಡಾ 52ರಷ್ಟು (10,818 ಕೋಟಿ ರೂಪಾಯಿ) ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅನುದಾನದಲ್ಲಿ ಶೇಕಡಾ 59ರಷ್ಟು (?9026 ಕೋಟಿ ರೂಪಾಯಿ) ಕಡಿತವಾಯಿತು. ಕೊನೆಯದಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಅನುದಾನದಲ್ಲಿ ಶೇಕಡಾ 20ರಷ್ಟನ್ನು (13,853 ಕೋಟಿ ರೂಪಾಯಿ) ಕಿತ್ತುಹಾಕಿತು. ಇದರ ನೇರ ಪರಿಣಾಮ ಆಗಿರುವುದು ಬ್ಲಾಕ್ ಮಟ್ಟದ ಮಾದರಿ ಶಾಲೆಗಳ ಸ್ಥಾಪನೆಯಂತಹ ಶೈಕ್ಷಣಿಕ ಕಾರ್ಯಕ್ರಮಗಳ ಮೇಲೆ.

ಆದುದರಿಂದ ಮೋದಿಯ "ಅಚ್ಛೆ ದಿನ್" ಭರವಸೆಯನ್ನು ನಂಬಿದ ಜನಸಾಮಾನ್ಯರೀಗ ತಲೆಗೆ ಕೈಹೊತ್ತು ಕೂರುವಂತಹ ಪರಿಸ್ಥಿತಿ ಬಂದಿದೆ. ಮೋದಿಯ ಸರ್ಕಾರ ಜನಸಾಮಾನ್ಯರನ್ನು ಕಡೆಗಣಿಸಿರುವುದಷ್ಟೆ ಅಲ್ಲ, ಉಳ್ಳವರಿಗೆ ತೆರಿಗೆ, ಸುಂಕ ಇತ್ಯಾದಿಗಳಲ್ಲಿ ವಿನಾಯಿತಿ, ರಿಯಾಯಿತಿಗಳನ್ನು ನೀಡುವ ಮೂಲಕ ಅವರನ್ನು ಇನ್ನಷ್ಟು ಧನವಂತರನ್ನಾಗಿಸಲು ಮಸಲತ್ತು ಮಾಡುತ್ತಿದೆ! ಉದಾಹರಣೆಗೆ 2014-15ರ ಸಾಲಿನಲ್ಲಿ ಚಿನ್ನ, ವಜ್ರ ಮತ್ತು ಆಭರಣಗಳ ಆಮದು ಸುಂಕದಲ್ಲಿ ಕೊಟ್ಟ ರಿಯಾಯಿತಿ/ವಿನಾಯಿತಿಗಳಿಂದಾಗಿ ಖಜಾನೆಗೆ 75,592 ಕೋಟಿ ರೂಪಾಯಿ ನಷ್ಟವಾಗಿದೆ. ಇನ್ನು ಕಾರ್ಪೊರೇಟುಗಳಿಗೆ ಆದಾಯ ತೆರಿಗೆಯಲ್ಲಿ ನೀಡಿದ ನಾನಾ ವಿಧದ ವಿನಾಯಿತಿಗಳ ಮೊತ್ತವೇ ಬರೋಬ್ಬರಿ 62,399 ಕೋಟಿ ರೂಪಾಯಿ ಆಗುತ್ತದೆ! ಮೋದಿ ಸರ್ಕಾರ ಕೇವಲ ಈ 75,592+ 62,399 = 1,37,991 ಕೋಟಿ ರೂಪಾಯಿಗಳಲ್ಲದೆ ಇನ್ನೂ ಇಂತಹ ಅನೇಕ



ವಿನಾಯಿತಿ, ರಿಯಾಯಿತಿಗಳನ್ನು ದಯಪಾಲಿಸಿದೆ. ಇವು ಶ್ರೀಮಂತ ವರ್ಗ ಹಾಗೂ ಕಾರ್ಪೊರೇಟುಗಳಿಗೆ ಕೊಟ್ಟಿರುವ ಪರೋಕ್ಷ 'ಸಬ್ಸಿಡಿ' ಎಂದು ಖುದ್ದು ಸರ್ಕಾರವೆ ಒಪ್ಪಿಕೊಂಡಿದೆ! (Statement of Revenue Impact of Tax Incentives). ಮೋದಿ ಸರ್ಕಾರಕ್ಕೆ ಜನಸಾಮಾನ್ಯರ ಆರೋಗ್ಯ ಶಿಕ್ಷಣಗಳಂತಹ ಮೂಲಭೂತ ವ್ಯವಸ್ಥೆಗಳ ಅಭಿವೃದ್ಧಿಗಿಂತ ಸಿರಿವಂತರ ಜೋಳಿಗೆ ತುಂಬಿಸುವುದೇ ಮುಖ್ಯ ಎಂಬುದನ್ನು ಸಾಬೀತುಪಡಿಸಲು ಇಷ್ಟು ಸಾಕಲ್ಲವೆ?

ಇತ್ತೀಚಿನ ದಿನಗಳಲ್ಲಿ ಮೋದಿ ಸರ್ಕಾರದ ಕೆಲವೊಂದು ಮಂತ್ರಿಮಹೋದಯರುಗಳು ಮತ್ತು ಕೆಲವು ಬಿಜೆಪಿ ಮುಖ್ಯಮಂತ್ರಿಗಳು ಭಾಗಿಯಾಗಿದ್ದಾರೆನ್ನಲಾದ ಭ್ರಷ್ಟಾಚಾರದ ಪ್ರಕರಣಗಳು ಭಾರಿ ಸುದ್ದಿಯಲ್ಲಿವೆ. ಆದರೆ ಭಾರತೀಯ ಸಮಾಜದ ಮೇಲೆ ಈ ಭ್ರಷ್ಟಾಚಾರಕ್ಕಿಂತಲೂ ಹಲವು ಪಟ್ಟು ಅಧಿಕ ಹಾನಿಯುಂಟುಮಾಡಲಿರುವುದು ಬಜೆಟ್ಟಿನಲ್ಲಿ ಮಾಡಿರುವ ಕತ್ತರಿಪ್ರಯೋಗಗಳು. ಇದರಿಂದಾಗಿ ಮೂಲಭೂತ ಅವಶ್ಯಕತೆಗಳು ಮತ್ತು ಅಭಿವೃದ್ಧಿಯ ಅವಕಾಶಗಳಿಂದ ವಂಚಿತರಾಗಲಿರುವ ಜನಸಾಮಾನ್ಯರ ಪಾಡು ನಾಯಿಪಾಡು ಆಗಲಿದೆ. ಇಳಿಮುಖವಾಗಲಿರುವ ಆರೋಗ್ಯವಂತ, ಸುಶಿಕ್ಷಿತ ದುಡಿಯುವ ವರ್ಗದ ಸಂಖ್ಯೆ ದೇಶದ ಸರ್ವತೋಮುಖ ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಬೀರಲಿದೆ. ಏರುಮುಖವಾಗಲಿರುವ ಬಡವ ಶ್ರೀಮಂತರ ನಡುವಿನ ಅಂತರ ಅಂತಿಮವಾಗಿ ಸಾಮಾಜಿಕ ಕ್ಷೋಭೆಗೆ ಕಾರಣವಾಗಲಿದೆ.

(ಆಧಾರ: ಡಾ। ರಾಹುಲ್ ಪಾಂಡೆ, ಸಿಟಿಜನ್ ನ್ಯೂಸ್ ಸರ್ವಿಸ್)


…ಪ್ಪಿಯಲ್ಲಿ ಪ್ರತ್ಯಕ್ಷವಾಗಿ ಕಾಣಿಸುತ್ತಿಲ್ಲ. ಇದಕ್ಕೊಂದು ಉತ್ತಮ ಉದಾಹರಣೆಯೆಂದರೆ ಇವರಿಬ್ಬರೂ ಸೇರಿ ಮಾಡಿರುವ ದಸರಾ ಹಬ್ಬ! ವರ್ಷಕ್ಕೆ ಎಷ್ಟು ದಸರಾ ಹಬ್ಬ ಬರುತ್ತೆ ಅಂತ ಪ್ರಶ್ನೆ ಕೇಳಿದರೆ ಒಂದನೇ ಕ್ಲಾಸ್ ಹುಡುಗ ಕೂಡಾ ವರ್ಷಕ್ಕೆ ಒಂದೇ ದಸರಾ ಅಂತ ಉತ್ತರಿಸುತ್ತಾನೆ. ಆದರೆ ಈ ಕಿಲಾಡಿ ಜೋಡಿ ವರ್ಷಕ್ಕೆ ಮೂರು ದಸರಾ ಹಬ್ಬ ಮಾಡಿದೆ. ಅದೂ ಪಾಲಿಕೆ ಹಣದಿಂದ ಅನ್ನೋದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ.

2014 ರ ಜುಲೈನಲ್ಲಿ ಪಾಲಿಕೆಯಿಂದ ದಸರಾ ಹಬ್ಬ ಆಚರಿಸಲು 1,04,539 ರೂ. ಬಿಡುಗಡೆಯಾಗಿದೆ. ಆದರೆ ಅದೇ ವರ್ಷ ಆಗಸ್ಟ್ ತಿಂಗಳಲ್ಲಿ ಮತ್ತದೇ ದಸರಾ ಹಬ್ಬದ ಹೆಸರಲ್ಲಿ ಮತ್ತೆ 50 ಸಾವಿರ ಖರ್ಚು ತೋರಿಸಲಾಗಿದೆ. ಅದೇಬಂತೆ ಸೆಪ್ಟಂಬರ್‌ನಲ್ಲಿ ಮತ್ತೆ ದಸರಾ ಹೆಸರಲ್ಲಿ …41,474 ರೂ.ಗಳನ್ನು ಖಜಾನೆಯಿಂದ ಎತ್ತಲಾಗಿದೆ. ಅಲ್ಲಿಗೆ 2014 ರಲ್ಲಿ ಒಂದೇ ವರ್ಷ ಮೂರು ಬಾರಿ ನಾಡಹಬ್ಬವನ್ನು ಬರೋಬ್ಬರಿ 3 ಲಕ್ಷದಷ್ಟು ಮೊತ್ತದಲ್ಲಿ ನಡೆಸಲಾಗಿದೆ! ಅಷ್ಟೇ ಅಲ್ಲ, ನಾಡಹಬ್ಬದ ಹೆಸರಲ್ಲಿ ಜುಲೈನಲ್ಲಿ ಬಿಡುಗಡೆ ಮಾಡಿಸಿಕೊಂಡ ಹಣದಲ್ಲಿ …7,071 ರೂಪಾಯಿಯನ್ನು ನಗರದಲ್ಲಿರುವ ಗುಡಿಗೋಪುರಗಳಿಗೆ ಸುಣ್ಣ ಬಣ್ಣ ಬಳಿಯಲು ಬಳಸಿಕೊಳ್ಳಲಾಗಿದೆ ಅಂತ ದಾಖಲೆಗಳು ಸೃಷ್ಟಿಯಾಗಿವೆ. ಅದೂ ಸಾಲದೆಂಬಂತೆ ಇದೇ ಕಾರಣಕ್ಕೆ ಮತ್ತೊಂದು ಕಂತಿನಲ್ಲಿ 16,772 ರೂ. ಬಿಡುಗಡೆಯಾಗಿದೆ. ಆದರೆ ಅತ್ಲಾಗಿಟ್ಟು ಗುಡಿಗಳ ಕಥೆಯಿರಲಿ ಗ್ರಾಮದೇವತೆ ದುಗ್ಗಮ್ಮನ ದೇವಸ್ಥಾನ ಕೂಡಾ ದಸರಾಗೋಸ್ಕರ ಬಣ್ಣ ಬಳಿಸಿಕೊಂಡಿದ್ದನ್ನು ದಾವಣಗೆರೆ ಜನ ಕಂಡಿಲ್ಲ.

ಇದು ದಸರಾ 'ದಿಬ್ಬಣ'ವಾದರೆ, ಆಸ್ತಿ ಖರೀದಿಯಲ್ಲೂ ಇಂತದ್ದೇ ಗೋಲ್‌ಮಾಲ್ ನಡೆಸಿದ್ದಾರೆ ಈ ಜೋಡಿ. 2014-15ನೇ ಸಾಲಿನಲ್ಲಿ ಆಯವ್ಯಯದಲ್ಲಿ ಆಶ್ರಯ ಯೋಜನೆ ಹೆಸರಲ್ಲಿ ಜಮೀನು ಖರೀದಿಗಾಗಿ ಬರೋಬ್ಬರಿ 1 ಕೋಟಿ ಖರ್ಚುಮಾಡಿದ ಬಗ್ಗೆ ದಾಖಲಿಸಲಾಗಿದೆ. ಆದರೆ ಅದೇ ಸಾಲಿನಲ್ಲಿ ಮತ್ತೆ 1.20 ಕೋಟಿ ರೂ.ಗಳನ್ನು ಅದೇ ಆಶ್ರಯ ಜಮೀನು ಖರೀದಿಗೆ ಬಳಕೆ ಮಾಡಲಾಗಿದೆ ಎಂಬ ಮತ್ತೊಂದು ಲೆಕ್ಕ ತಲೆ ಎತ್ತಿನಿಂತಿದೆ. ಹೀಗೆ ಎರಡೆರಡು ಬಾರಿ ಅನಾಮತ್ತು ಎರಡು ಕೋಟಿಯಷ್ಟು ಹಣ ಪಾಲಿಕೆ ತಿಜೋರಿಯಿಂದ ಹೊರಬಿದ್ದಿದ್ದರೂ ಹಾಗೆ ಖರೀದಿಸಲ್ಪಟ್ಟ ಜಮೀನು ಎಲ್ಲಿದೆಯೆಂಬುದರ ಸುಳಿವೇ ಇಲ್ಲ.

ಪಾಲಿಕೆ ಮೇಯರ್ ವಸತಿಗೃಹದ ನಿರ್ಮಾಣದಲ್ಲೂ ಇಂತದ್ದೇ ಬೋಗಸ್ ಲೆಕ್ಕಪತ್ರಗಳು ಕಣ್ಣಿಗೆ ರಾಚುತ್ತವೆ. 2014-15ನೇ ಸಾಲಿನಲ್ಲಿ ಮೇಯರ್ ವಸತಿಗೃಹದ ದುರಸ್ತಿಗೆಂದು ಮೊದಲ ಕಂತಿನಲ್ಲಿ 10 ಲಕ್ಷ, ಎರಡನೇ ಕಂತಿನಲ್ಲಿ 3,38,925 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಅದಕ್ಕೂ ಮುನ್ನ ಅಂದರೆ 13ನೇ ಹಣಕಾಸು ಯೋಜನೆಯಲ್ಲಿ (2013-14ರಲ್ಲಿ) ಇದೇ ಕಾಮಗಾರಿಗೆಂದು 39,54,997 ರೂ. ಬಳಕೆಯಾಗಿದೆ. ಅಷ್ಟೂ ಸಾಲದೆಂಬಂತೆ 2015-16ನೇ ಸಾಲಿಗೆ ಮುಂಗಡವಾಗಿ ಬರೋಬ್ಬರಿ 45 ಲಕ್ಷ ರೂ.ಗಳನ್ನು ಸದರಿ ವಸತಿಗೃಹದ ಸಿಂಗಾರಕ್ಕೆಂದು ಎತ್ತಿಡಲಾಗಿದೆ. ಅಸಲಿ ಸಂಗತಿ ಏನೆಂದರೆ, ದಾವಣಗೆರೆಯ ಮೂಲೆಮೂಲೆ ತಡಕಾಡಿದರೂ ಮೇಯರ್ ವಸತಿಗೃಹ ಎಂದು ಕರೆಸಿಕೊಳ್ಳುವ ಕಟ್ಟಡವೇ ಕಾಣುವುದಿಲ್ಲ, ಹಾಗಿದ್ದರೆ ಅದರ ಹೆಸರಲ್ಲಿ ಬಿಡುಗಡೆಯಾದ ಅಷ್ಟೂ ದುಡ್ಡು ಯಾರ ಕೈಸೇರಿತು ಎಂಬ ಪ್ರಶ್ನೆ ಜನರನ್ನು ಕಾಡುತ್ತಲೇ ಇದೆ.

ಇಂಥಾ ಗೋಲ್‌ಮಾಲ್ ಕೇವಲ ಮೇಯರ್ ವಸತಿಗೃಹಕ್ಕೆ ಮಾತ್ರವೇ ಸೀಮಿತವಾದುದಲ್ಲ, ಪಾಲಿಕೆಯ ವಿಶ್ರಾಂತಿಗೃಹ ಮತ್ತು ಎಸ್‌ಎಫ್‌ಸಿ ತಂಗುದಾಣಗಳೂ ಇಂತಹ ಬೋಗಸ್ ಬಿಲ್ಲುಗಳಿಗೆ ಸಾಕ್ಷಿಯಾಗಿವೆ. ಮಹಾನಗರ ಪಾಲಿಕೆಗೆ ವಿಶ್ರಾಂತಿಗೃಹವೆಂಬುದೇ ಅಸ್ತಿತ್ವದಲ್ಲಿಲ್ಲ, ಆದರೆ ಈ ಚಾಣಾಕ್ಷ ಜೋಡಿಯ ಕರಾಮತ್ತಿನಿಂದ ಅಸ್ತಿತ್ವದಲ್ಲೇ ಇಲ್ಲದ ವಿಶ್ರಾಂತಿಗೃಹದ ನಿರ್ವಹಣೆಗೆಂದು 33 ಲಕ್ಷ ಖರ್ಚು ಮಾಡಲಾಗಿದೆ. ಇನ್ನು ಎಸ್‌ಎಫ್‌ಸಿ ಯೋಜನೆಯಡಿ ನಿರ್ಮಿಸಿದ್ದೇವೆ ಎಂದು ಹೇಳಿಕೊಳ್ಳುತ್ತಿರುವ ರಾತ್ರಿ ತಂಗುದಾಣದ ನಿರ್ವಹಣೆಗೆಂದು 2014-15ನೇ ಸಾಲಿನಲ್ಲಿ 75 ಲಕ್ಷ ಮತ್ತು 2015-16ನೇ ಸಾಲಿಗೆ 75 ಲಕ್ಷ ಮಂಜೂರು ಮಾಡಲಾಗಿದೆ. ಹೀಗೆ ಅನಾಮತ್ತು ಒಂದೂವರೆ ಕೋಟಿ ರೊಕ್ಕ ತಿಂದಿರುವ ಕಟ್ಟಡ ಕೂಡಾ ದಾವಣಗೆರೆಯಲ್ಲಿ ಕಾಣಸಿಗುವುದಿಲ್ಲ, ಹಾಗೆ ನೋಡಿದರೆ, ಈ ಎಸ್‌ಎಫ್‌ಸಿ ತಂಗುದಾಣದ ಎತ್ತುವಳಿ ಸ್ಕೀಮು ಜನ್ಮ ತಳೆದದ್ದೇ ಬಿಜೆಪಿ ಅಧಿಕಾರದಲ್ಲಿದ್ದ 2011-12ನೇ ಸಾಲಿನಲ್ಲಿ, ಆ ವರ್ಷ ಎಸ್‌ಎಫ್‌ಸಿ ಯೋಜನೆಯಡಿ ರಾತ್ರಿ ತಂಗುದಾಣಕ್ಕಾಗಿ 50 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆಂದು ಬಿಜೆಪಿಗಳು ತೋರಿಸಿಕೊಂಡಿದ್ದವು. ಆದರೆ ಅದು ನಿರ್ಮಾಣವೇ ಆಗಲಿಲ್ಲ. ಈಗ ಕಾಂಗ್ರೆಸ್‌ನ ದರ್ಬಾರಿನಲ್ಲಿ ಆ ನಿರ್ಮಾಣವಾಗದ ತಂಗುದಾಣದ ನಿರ್ವಹಣೆಗೆ ಕೋಟಿ ಕೋಟಿ ಲೂಟಿ ಹೊಡೆಯಲಾಗುತ್ತಿದೆ.



ಅದೇರೀತಿ, 2014-15ರಲ್ಲಿ ಮಹಾಪೌರರು ಮತ್ತು ಕಮೀಷನರ್‌ಗಳ ಕಾರುಗಳಿಗಾಗಿ 40 ಲಕ್ಷ ರೂ.ಗಳಂತೆ ಎರಡು ಕಂತುಗಳಲ್ಲಿ ಖರ್ಚು ಮಾಡಲಾಗಿದೆ. 2015-16ರ ಸಾಲಿಗೆ ಇದೇ ಕಾರಣಕ್ಕೆಂದು 10 ಲಕ್ಷ ರೂ.ಗಳನ್ನು ತೆಗೆದಿರಿಸಲಾಗಿದೆ. ಕೇವಲ ಎರಡು ಕಾರು ಖರೀದಿಗೆ ಬರೋಬ್ಬರಿ 90 ಲಕ್ಷವೇ? ಹೋಗಲಿ ಅಷ್ಟು ಐಷಾರಾಮಿ ಕಾರು ಗಳಾದರು ಪಾಲಿಕೆ ಅಂಗಳದಲ್ಲಿ ಕಾಣಿಸಿಕೊಳ್ಳಬೇಕಿತ್ತಲ್ಲಾ? ಅದೂ ಇಲ್ಲ!

ಹೆಂಡತಿಯ ಸೆರಗಿಡಿದು ಪಾಲಿಕೆ ಕಚೇರಿ ಹೊಕ್ಕುವ ಎ.ನಾಗರಾಜ್ ಈ ಪರಿ ಗೋಲ್‌ಮಾಲ್ ನಡೆಸೋದಕ್ಕೆ ಮುಖ್ಯ ಕಾರಣವೆಂದರೆ, ಅವನ ಹೆಂಡತಿ ರೇಖಾ ಕೇವಲ ಕಾರ್ಪೊರೇಟರ್ ಮಾತ್ರವಲ್ಲದೆ ಲೆಕ್ಕಪತ್ರ ಮತ್ತು ತೆರಿಗೆ ಇಲಾಖೆಯ ಸ್ಥಾಯಿ ಸಮಿತಿ ಅಧ್ಯಕ್ಷೆ ಕೂಡಾ ಆಗಿದ್ದರು. ಈ ಸ್ಥಾಯಿ ಸಮಿತಿ ವ್ಯಾಪ್ತಿಗೆ ಪಾಲಿಕೆಯ ಕಂದಾಯ ಇಲಾಖೆಯೂ ಒಳಪಡುವುದರಿಂದ ನಾಗರಾಜ ಕಳೆದ 3 ವರ್ಷದಿಂದ ಬರೋಬ್ಬರಿ 187 ಎಕರೆ ನಿವೇಶನಗಳಿಗೆ ಡೋರ್ ನಂಬರ್ ನೀಡಿದ್ದಾನೆ. ಇದೇನು ಸಾಮಾನ್ಯ ಹಗರಣವಲ್ಲ, ಬಡಿಬಡಿಯಾಗಿ ಕೋಟ್ಯಂತರ ಹಣ ಕೈ ಬದಲಾಗಿರೋ ಭಾರೀ ಹಗರಣ. ಇನ್ನು ದಿನೇಶ್ ಶೆಟ್ಟಿ ಕೂಡಾ ಕಳೆದ ಸಾಲಿಗೆ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷನಾಗಿ ಅಧಿಕಾರದ ಸೂತ್ರಗಳನ್ನು ಹಿಡಿದಿದ್ದಂತವನು.

ತಮಗೆ ಕಿಂಚಿತ್ತು ಉಳಿಸದಂತೆ ಸರ್ವವನ್ನೂ ಈ ಇಬ್ಬರೇ ಗೆಬರಿಕೊಳ್ಳುತ್ತಿರೋದನ್ನು ಕಂಡು 39 ಸದಸ್ಯ ಬಲದ ಕೈ ಪಾರ್ಟಿ ಒಳಗೇ ಅಸಮಾಧಾನದ ಕಿಡಿ ಎದ್ದಿದೆ. 'ಧಣಿ'ಗಳ ಹೆಸರೇಳಿಕೊಂಡು ಇವರು ಇಷ್ಟೆಲ್ಲಾ ಲೂಟಿ ಹೊಡೆಯುತ್ತಿದ್ದರೂ ಮಂತ್ರಿ ಶಿವಶಂಕರಪ್ಪನಾಗಲಿ, ಮಗ ಎಸ್.ಎಸ್. ಮಲ್ಲಿಕಾರ್ಜುನ್ ಆಗಲಿ ಈ ಜೋಡಿ ಹೆಗ್ಗಣಗಳನ್ನು ಗದರಿಸುತ್ತಿಲ್ಲ ಎಂಬ ಅಸಮಾಧಾನ ಬಾಕಿ ಕಾರ್ಪೊರೇಟರ್‌ಗಳ ಒಳಗೊಳಗೇ ಶುರುವಾಗಿದೆ.

ಇದೆಲ್ಲದರಿಂದಾಗಿ ಪಾಲಿಕೆ ದಿನದಿಂದ ದಿನಕ್ಕೆ ಕುಸಿಯುತ್ತಲೇ ಬರುತ್ತಿದೆ. ಕಾಂಗ್ರೆಸ್ ಧಣಿಗಳು ಈಗಲಾದರೂ ಇತ್ತ ಗಮನ ಹರಿಸದಿದ್ದರೆ ಪಾಲಿಕೆಯ ಜೊತೆಜೊತೆಗೆ ಇಡೀ ಕುಟುಂಬದ ರಾಜಕಾರಣವೇ ತಮ್ಮದೆ ಬಾಪೂಜಿ ಆಸ್ಪತ್ರೆಯ ಐಸಿಯು ಸೇರಬೇಕಾಗುತ್ತದಷ್ಟೆ.

■ ಟಿ.ಎನ್. ಷಣ್ಮುಖ


ಗುಣಮುಖ : ಗುಣವಾಗಬೇಕಿರುವ ಮುಖಗಳ ಅನಾವರಣ

ಒಂದೆರಡು ವರ್ಷಗಳ ಹಿಂದೆ ಸದನದಲ್ಲಿ ಶಾಸಕರು ಬ್ಲೂ ಫಿಲಂ ನೋಡುತ್ತಿದ್ದರ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದಾಗ ತಟ್ಟನೆ ನೆನಪಿಗೆ ಬಂದದ್ದು ಪ್ರೊ.ಲಂಕೇಶರ 'ಗುಣಮುಖ' ನಾಟಕದ ನಜಿರುದ್ದೀನ್ ಶಾ. ದಿಲ್ಲಿಯ ಮೇಲೆ ಪರ್ಶಿಯಾ ದೊರೆ ನಾದಿರ್ ಶಾನ ಸೈನ್ಯ ಯುದ್ಧಕ್ಕೆ ಸನ್ನದ್ಧವಾಗಿರುವಾಗ ಈತ ಹುಡುಗಿಯರ ಸೊಂಟದೊಂದಿಗೆ ಮತ್ತು ಮದ್ಯದ ಅಮಲಿನಲ್ಲಿ ಮೈಮರೆತಿದ್ದ. ಇದು ಅಂದು ಬಹುದಿನಗಳ ಕಾಲ ಕಾಡಿತ್ತು. ಕಳೆದ ಎರಡು ವರ್ಷದಿಂದ ಮೈಸೂರು ವಿಶ್ವವಿದ್ಯಾಲಯದ ಬಿಕಾಂ, ಬಿಬಿಎಂ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಇದು ಪಠ್ಯಪುಸ್ತಕವಾಗಿರುವ ಕಾರಣ ಪಾಠ ಮಾಡುತ್ತಾ ಮತ್ತೆ ಮತ್ತೆ ಕಾಡಿಸುತ್ತಿತ್ತು. ಇಂದು ಈ ಕೃತಿ ಪಿಯು ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದ ಪಠ್ಯವಾಗಿರುವಾಗ ಇನ್ನಷ್ಟು ಕಾಡಿಸಲು ಆರಂಭಿಸಿದೆ. ಈ ಹಿನ್ನೆಲೆಯಲ್ಲಿ ಈ ಪುಸ್ತಕದ ಬಗ್ಗೆ ಒಂದಿಷ್ಟು ಪರಿಚಯ.

ಪಠ್ಯವಾದ ಕಾರಣ ಪಾಠಮಾಡುತ್ತಲೇ ಇದು ಕೇವಲ ಪಠ್ಯವಲ್ಲ, ಇದನ್ನು ಎಲ್ಲರೂ ಮನೆಯಲ್ಲಿ ಜೋಪಾನವಾಗಿ ಕಾಪಾಡಬೇಕಾದ ಪುಸ್ತಕ. ಇದನ್ನು ಆಗಾಗ ಎಂದಾದರೊಮ್ಮೆ ಓದುತ್ತಿರಬೇಕು ಎಂದು ಹೇಳಿದಾಗಲೆಲ್ಲ ಅನೇಕ ವಿದ್ಯಾರ್ಥಿಗಳು ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದರು. ಆದರೆ ಪಠ್ಯ ಪೂರ ಮುಗಿದಮೇಲೆ ಕೆಲವು ವಿದ್ಯಾರ್ಥಿಗಳಾದರೂ 'ಹೌದು ಸಾರ್ ನೀವೇಳಿದ್ದು ಸರಿ' ಎನ್ನುವಂತೆ ಪ್ರತಿಕ್ರಿಯೆ ನೀಡುತ್ತಿದ್ದರು. ಇದು ಈ ಪುಸ್ತಕದ ಮಹತ್ವ.

ಶಿವಿ ಸತ್ತ ರಾಜಕಾರಣಿಗಳನ್ನು, ಗುಂಡಿಗೆ (ಹೃದಯ) ಸತ್ತ ವೈದ್ಯರುಗಳನ್ನು, ಮನ ಸತ್ತ ಮಾನವರನ್ನು ಸೃಷ್ಟಿಸುತ್ತಿರುವ ಈ ಹೊತ್ತಿನಲ್ಲಿ 'ಗುಣಮುಖ' ನಾಟಕದ ಹಲವು ಪಾತ್ರಗಳು ನಾಕೋ ಜೀವ ಚಿಲುಮೆಯನ್ನು ಸೃಷ್ಟಿಸುತ್ತವೆ. ಅದರಲ್ಲೂ ಅಲಾವಿಖಾನ್ ಪಾತ್ರವಂತೂ ನಾದಿರ್‌ಶಾನ ಜೊತೆಗಲ್ಲ ನಮ್ಮ ನಡುವೆಯೇ ಅನೇಕ ಬಾರಿ ಮುಖಾಮುಖಿಗೊಳ್ಳುವಂತೆ ಭಾಸವಾಗುತ್ತದೆ. ಇದು ನೈತಿಕತೆ ಅನೈತಿಕತೆಯ ನಡುವಿನ ಮುಖಾಮುಖಿ, ಸತ್ಯ ಮತ್ತು ಅಸತ್ಯದ ಮುಖಾಮುಖಿ, ದರ್ಪ, ದೌರ್ಜನ್ಯ ಮತ್ತು ಶೋಷಿತರ ಮುಖಾಮುಖಿ.. ನಟರಾಜ್ ಹುಳಿಯಾರ್ ಹೇಳುವಂತೆ ಕನ್ನಡದ ಮುಖಾಮುಖಿಗಳಲ್ಲಿ ಈ ಮುಖಾಮುಖಿ ಬಹುಮುಖ್ಯವಾದದ್ದು, ಬುದ್ಧ ಅಂಗುಲಿಮಾಲರ ಮುಖಾಮುಖಿಯ ನಂತರ ಬಹಳ ವಿಸ್ತರವಾಗಿ ತಟ್ಟಿದ ಮುಖಾಮುಖಿಯೆಂದರೆ ಅಲಾವಿಖಾನ್ ಮತ್ತು ನಾದಿರ್ ಶಾ ಇಬ್ಬರ ಮುಖಾಮುಖಿ.

ಇವನ್ನೆಲ್ಲ ನಾವೇ ಎದುರುಗೊಂಡಂತೆ ಭಾಸವಾಗುವ ನಾಟಕದಲ್ಲಿ ಲಂಕೇಶ್ ಒಂದು ಅದ್ಭುತ ಪ್ರತಿಭೆಯನ್ನೇ



ಎರಕಹೊಯ್ದು ಕನ್ನಡಿಗರ ಮುಂದೆ ತೆರೆದಿಟ್ಟಿದ್ದಾರೆ. ತನ್ವೀರ್ ಖಾನ್ ಎಂಬ ಕತ್ತಲೆಗೆ ಹೆದರುವ, ಅತ್ಯಂತ ಪುಕ್ಕಲು ಮನಸ್ಸಿನ ವ್ಯಕ್ತಿ ಮುಂದೊಂದು ದಿನ ಖಡ್ಗದ ಹರಿತ ನೋಡಲು ಮನುಷ್ಯರನ್ನು ಕತ್ತರಿಸುತ್ತಾನೆ. ಇಂಡಿಯಾ ಇಂತಹದೊಂದು ವ್ಯಕ್ತಿತ್ವಕ್ಕೆ ಪೂರಕವಾಗಿ ನಿಲ್ಲುವ ಪ್ರಕ್ರಿಯೆಯನ್ನು ಯಾವ ರೀತಿ ಮಾಡುತ್ತದೆ ಎಂಬುದು ಇಲ್ಲಿ ಅದ್ಭುತವಾಗಿ ನಿರೂಪಣೆಗೊಂಡಿದೆ. ಅರ್ಹರಲ್ಲದವರಿಗೆ ಇನ್ನಿಲ್ಲದ ಮಹತ್ವ ಕೊಟ್ಟು ವಿಜೃಂಭಿಸುವ ಪರಿಯನ್ನು ಇದು ವಿಡಂಬನಾತ್ಮಕವಾಗಿ ಇಂಡಿಯಾದ ಒಳತುಡಿತವನ್ನು ತಿವಿಯುತ್ತದೆ.

ನಾಟಕದ ವಸ್ತು 1740ರ ಆಸುಪಾಸಿನದಾದರೂ ಇಂದಿಗೂ ಅದರ ಛಾಯೆ ಇಲ್ಲಿರುವಂತೆ ಕಾಣುತ್ತದೆ. ಇಲ್ಲಿ ಬದಲಾಗದ ರಾಜಕೀಯ ದಾಳವಿದೆ. ಬಾಟಲಿ ಬದಲಾಗಿರಬಹುದು ಆದರೆ ಒಳಗಿನ ಮದ್ಯ ಮಾತ್ರ ಹಾಗೇ ಉಳಿದಿದೆ. ಇದು 'ಗುಣಮುಖ'ದ ಪಾತ್ರಗಳಿಗೂ ಇಂದಿನ ವ್ಯವಸ್ಥೆಗೂ ಅದ್ಭುತವಾಗಿ ಸರಿಹೊಂದುತ್ತದೆ. 'ಗುಣಮುಖ'ದ ಪಾತ್ರಗಳನ್ನು ಒಂದೊಂದೇ ತೆಗೆದು ಅದರ ಜಾಗದಲ್ಲಿ ಇಂದಿನ ರಾಜಕಾರಣಿಗಳನ್ನು ನಿಲ್ಲಿಸುತ್ತಾ ಹೋದರೆ … ಮತ್ತೆ ಪುನರಾವರ್ತನೆಗೊಂಡು ರಾಜಕೀಯ ವಲಯದಲ್ಲಿ ನಡೆಯುತ್ತಿದೆಯೇನೋ ಎನ್ನುವಂತೆ ಭಾಸವಾಗುತ್ತದೆ.

'ಇಲ್ಲಿ ಒಂದು ಮಾತಿಗೆ ನೂರೆಂಟು ಅರ್ಥಗಳು, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎನ್ನುತ್ತಾರೆ' ಎನ್ನುವ ಮಾತುಗಳು ನಾಟಕದ ಉದ್ದಕ್ಕೂ ನಿರೂಪಣೆಗೊಂಡು ಇಂಡಿಯಾದ ಮನಸ್ಥಿತಿಯನ್ನು ತಣ್ಣಗೆ ನಿರೂಪಿಸುತ್ತಾ ವಸ್ತುಸ್ಥಿತಿಗೆ ಕನ್ನಡಿ ಹಿಡಿಯಲು ಪ್ರಯತ್ನಿಸುತ್ತವೆ.

ಒಂದು ವಿಶ್ಲೇಷಣೆ

ಹೆಣ್ಣನ್ನು ಭೋಗದ ವಸ್ತುವನ್ನಾಗಿ ಕಾಣುವ ಹಿನ್ನೆಲೆ ನಾಟಕದ ಉದ್ದಕ್ಕೂ ಎದ್ದು ಕಾಣುತ್ತದೆ. ಅತ್ಯಾಚಾರ ಎನ್ನುವುದು ಇಂದು ದಿನನಿತ್ಯದ ಮಾತಾಗಿರುವಾಗ ದಿಲ್ಲಿಯಲ್ಲಿ ನಾದಿರ್ ಶಾನಿಂದ ಅತ್ಯಾಚಾರಕ್ಕೆ ಒಳಗಾದ ಶಾರದೆಯ ಪ್ರಸಂಗ ಕುರಿತು ಅಲಾವಿಖಾನ್ "ಮಗುವಾಗು, ಶಾರದೆಯ ಮಗುವಾಗು. ನೀನು ನಿನ್ನೆ ಕರೆದುಕೊಂಡ ಇಬ್ಬರು ಹೆಣ್ಣುಗಳ ಮಗುವಾಗು" ಎನ್ನುವ ಮಾತುಗಳನ್ನು ಇಲ್ಲಿನ ಎಲ್ಲ ಅತ್ಯಾಚಾರಿಗಳಿಗೆ ಮನದಟ್ಟು ಮಾಡಿಸಬೇಕೇನೋ.. ಎನಿಸುತ್ತದೆ. ಬಹುಶಃ ಲಂಕೇಶರು ಹಕೀಮನ ಹುಡುಕಾಟದಲ್ಲಿ ಹಿಂದೂ ವೈದ್ಯನೊಬ್ಬನನ್ನು ತಂದು ನಿಲ್ಲಿಸಿದರೆ ಇಷ್ಟೊತ್ತಿಗೆ ಈ ನಾಟಕ ಎಂತಹ ಕೋಮುವಿವಾದಕ್ಕೆ ಎಡೆಮಾಡಿಕೊಡುತ್ತಿತ್ತೋ ಏನೋ!

ಇಲ್ಲಿ ಧರ್ಮದ ಸೂಕ್ಷ್ಮ ವಿಶ್ಲೇಷಣೆ ಇದೆ. ಅದರೊಳಗಿನ ಸ್ವಪ್ರತಿಷ್ಠರ ಕೃತ್ಯಗಳಿವೆ. ಅಹಂಕಾರಿಗಳ ಅಂತರಂಗದ ಮಿಡಿತದ ತುಡಿತಗಳಿವೆ. ಮನುಷ್ಯನ ಘಾತುಕತನ ಮತ್ತು ಕೀಳರಿಮೆಯ ಅನಾವರಣವಿದೆ. ಇದೆಲ್ಲರಿಂದಾಚೆ ಮನುಷ್ಯನ ಒಳಗಣ್ಣು ತೆರೆದರೆ ಎಷ್ಟೋ ಸಮಸ್ಯೆಗಳು ನೀಗುತ್ತವೆ ಎಂಬ ಭರವಸೆಯ ಬೆಳಕೂ ಇಲ್ಲಿ ನೆಲೆ ನಿಂತಿದೆ. ಇದು ಅಲಾವಿಖಾನ್ ಪಾತ್ರದ ಮೂಲಕ ಬಂದಿರುವ "ಅಹಂಕಾರಿಗೆ ತನ್ನ ಕೃತ್ಯಗಳ ಪರಿಣಾಮವೇ ಗೊತ್ತಿರುವುದಿಲ್ಲ, ಕಣ್ಣುಮುಚ್ಚಿ ಯೋಚಿಸು, ಅದೊಂದೇ ಕಣ್ಣು ಪಡೆಯುವ ಮಾರ್ಗ" ಎನ್ನುವ ಮಾತುಗಳು ಸರಿತಪ್ಪುಗಳ ವಿಶ್ಲೇಷಣೆ ಮನುಷ್ಯನೊಳಗಿನ ವ್ಯಾಪಾರವೇ ಹೊರತು ಬೇರೇನೂ ಅಲ್ಲ ಎಂಬುದನ್ನು ನಿರೂಪಿಸುತ್ತವೆ.

ಬಸವಣ್ಣ ಬಹಳ ಹಿಂದೆಯೇ "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಅಲ್ಲಿ ಸಲ್ಲುವವರು ಇಲ್ಲಿಯೂ ಸಲ್ಲುವರು" ಎಂದು ನುಡಿದಿದ್ದರು. ಮನುಷ್ಯ ಲೋಕ ಯಾವಾಗಲೂ ಇದಕ್ಕೆ ತದ್ವಿರುದ್ಧ ನೆಲೆಯಲ್ಲಿ ನಡೆದುಕೊಂಡೇ ಬರುತ್ತಿದೆ. ಇಲ್ಲಿ ಹುಟ್ಟಿರುವ ಕಾರಣ ಪರಸ್ಪರ ವಿಶ್ವಾಸ, ಸ್ನೇಹ, ಪ್ರೀತಿ ಇವುಗಳಿಗೆ ಮನ್ನಣೆ ನೀಡಬೇಕಿತ್ತು, ಆದರೆ ಇವುಗಳಿಗೆಲ್ಲಾ ಜಾತಿ, ಧರ್ಮ, ಅಂತಸ್ತುಗಳ ಅಡ್ಡಗೋಡೆಗಳನ್ನಿಟ್ಟು ತನ್ನ ಇರುವಿಕೆಯನ್ನೇ ಸ್ವಪ್ರತಿಷ್ಠೆಯ ನೆಲೆಯಲ್ಲಿ ಕೊಂಡೊಯ್ಯುವ ಅಹಂಕಾರಿಗಳ ದಂಡು ಇಲ್ಲಿ ದಿನೇದಿನೇ ಹೆಚ್ಚುತ್ತಿದೆ. ಹೀಗಿರುವಲ್ಲಿ ನಾದಿರ್ ಶಾ ತಾನು 'ಚಕ್ರವರ್ತಿ'ಯಾದರೂ ಕೊನೆಗೆ ವೈದ್ಯನ ಎದುರು 'ರೋಗಿ' ಎಂದು ಒಪ್ಪಿಕೊಳ್ಳುವ ನಡೆ ಇದೆಯಲ್ಲ, ಈ ನಡೆ ಮನುಷ್ಯ ಜಗತ್ತಿನ ಪ್ರಜ್ಞೆಯ ಬಹುಮುಖ್ಯ ಭಾಗ ಎನಿಸುತ್ತದೆ.

ಮುಂದುವರಿದು ಮನುಷ್ಯ ಜಗತ್ತು ತನ್ನ ಸ್ವಪ್ರತಿಷ್ಠೆಗಳಿಂದ ಸ್ಮಶಾನವಾಗುತ್ತಿರುವ ಬಗೆಯನ್ನು ನಾಟಕ ಸೂಕ್ಷ್ಮವಾಗಿ ಪರಿಚಯಿಸುತ್ತದೆ. ಇದಕ್ಕೆ ಪೂರಕವೆಂಬಂತೆ ಅಲಾವಿಖಾನನ ಮಾತುಗಳು ಹೀಗಿವೆ: "ಅಲ್ಲಾಹು, ಆತ್ಮವಂಚನೆಗೆ, ಕೀಳರಿಮೆಗೆ ಕೊನೆಯೇ ಇಲ್ಲವೆ? ಭೂಮಿಯನ್ನು ಮರೆಯುವ ಮನುಷ್ಯ, ತಾಯಿಯನ್ನು ನಿರ್ಲಕ್ಷಿಸುವ ಮನುಷ್ಯ ತಂದೆಯ ಹೆಸರೆತ್ತಲೂ ನಾಚಿಕೊಳ್ಳುವ ಮನುಷ್ಯ! ಎಷ್ಟು ಮದರಸಾಗಳು, ಎಷ್ಟು ಬೃಹತ್ ಗ್ರಂಥಗಳು, ಎಷ್ಟು ಶೋಧನೆಗಳು, ಎಷ್ಟು ಜನ ಸಂತರು ಬಂದರೂ ಮನುಷ್ಯ ಏಕೆ ಹೀಗೆ ಭೀಕರ ವ್ಯಸನಗಳಲ್ಲಿ, ಅಜ್ಞಾನದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ! ಅಲ್ಲಾಹುವೇ, ವಸಂತದಲ್ಲಿ ಪ್ರಜ್ವಲಿಸುವ ಗಿಡಮರಗಳ ಚೆಂದ ಕೂಡ ಇಲ್ಲದ ಮನುಷ್ಯನೇಕೆ ಕ್ರಮೇಣ ಕುರೂಪಿಯಾಗುತ್ತಿದ್ದಾನೆ, ಸ್ಮಶಾನವಾಗುತ್ತಿದ್ದಾನೆ?" ಇದು ಮನುಷ್ಯ ಲೋಕ ಕ್ರಮೇಣ ಕುಬ್ಜವಾಗುತ್ತಿರುವ ಬಗೆಯನ್ನು ನಿರೂಪಿಸುತ್ತದೆ. ಇಲ್ಲಿಂದ ಮನುಷ್ಯ ಹೊರಬರದಿದ್ದರೆ ವಿನಾಶ ಕಟ್ಟಿಟ್ಟ ಬುತ್ತಿ ಎಂಬುದನ್ನು ಇಡೀ ನಾಟಕ ಸಾರುವಂತೆ ಭಾಸವಾಗುತ್ತದೆ.

'ಸತ್ಯ ಮತ್ತು ಸುಳ್ಳು ಒಬ್ಬ ಸ್ವಪ್ರತಿಷ್ಠನನ್ನು ಸ್ಪರ್ಶಿಸುವ ಬಗೆ' ಹೇಗೆ ಎಂಬುದಕ್ಕೆ ನಾಟಕಕಾರರು ಹೆಚ್ಚು ಗಮನಹರಿಸಿದ್ದರೂ ಕಣ್ಣು, ಕಿವಿ, ಮೂಗು ಒಟ್ಟಾರೆ ಪಂಚೇಂದ್ರಿಯಗಳ ತನವನ್ನು ಕಳೆದುಕೊಂಡ ಮನುಷ್ಯ ಲೋಕದ ಅನಾವರಣವೇ ನಾಟಕದ ಉದ್ದಕ್ಕೂ ನಡೆದಿದೆ. ಸುಳ್ಳು, ಮೋಸ, ವಂಚನೆ, ಅಧಿಕಾರಲಾಲಸೆ ಎಲ್ಲ ಇದರಲ್ಲಿ ಚಿತ್ರಿತಗೊಂಡರೂ ನಾಟಕದ ಕೊನೆಯಲ್ಲಿ 'ಜೀವನದಲ್ಲಿ ಕಟ್ಟಕಡೆಗೆ ಯಾವುದು ಮುಖ್ಯ ಎಂದರೆ ಅದು ಪ್ರೇಮ' ಎನ್ನುವ ಅಲಾವಿಯ ಮಾತುಗಳು ನಾಟಕ ಮುಗಿದ ನಂತರವ ದೀರ್ಘಕಾಲದಲ್ಲಿ ಕಾಡಲಿಕ್ಕೆ ಪ್ರಾರಂಭಿಸುತ್ತವೆ. ಈ ಹಿನ್ನೆಲೆಯಲ್ಲಿ 'ಗುಣಮುಖ' ಕೇವಲ ಪಠ್ಯವಾಗಿಯಲ್ಲ ಜೀವನದ ಉದ್ದಕ್ಕೂ ಓದಬೇಕಾದ ಬಹುಮುಖ್ಯ ಕೃತಿ.

■ ಡಾ.ಹೆಚ್.ಡಿ.ಉಮಾಶಂಕರ್

ನಾನು ಹಿಂದೂ



ಕತೆ

ಈಗಲೂ ಕಿವಿಯೊಳಗೆ ಎದ್ದು ನಿಲ್ಲುವ ಹಾಗೆ ಮಾಡುವಂಥ ಚೀತ್ಕಾರ ಅದು! ಕಿವಿಗಳ ಹತ್ತಿರವೇ ಸದ್ದಾದಂತೆ ಅನ್ನಿಸಿತು. ಅಂಥ ಸನ್ನಿವೇಶದಲ್ಲಿ ನಾನು ಎದ್ದವನೇ ಮಂಚದ ಮೇಲೆ ಕುಳಿತುಕೊಂಡೆ. ಆಕಾಶದಲ್ಲಿ ಇನ್ನೂ ನಕ್ಷತ್ರಗಳಿದ್ದವು. ಪ್ರಾಯಶಃ ರಾತ್ರಿ ಮೂರು ಗಂಟೆ ಆಗಿರಬಹುದು. ಅಬ್ಬಾಜಾನ್ ಕೂಡ ಎದ್ದು ಕುಳಿತರು. ಚೀತ್ಕಾರ ಮತ್ತೆ ಕೇಳಿಬಂತು. ಸೈಫೂ ತನ್ನ ಮಂಚದಲ್ಲಿ ಮಲಗಿ ಚೀರುತ್ತಿದ್ದ. ಅಂಗಳದಲ್ಲಿ ಒಂದೊಂದಾಗಿ ಎಲ್ಲರ ಮಂಚಗಳನ್ನೂ ಹಾಕಲಾಗಿತ್ತು.

'ಲಾಹೌಲಾವಿಲಾಕುವ್ವತ್....'' ಅಬ್ಬಾಜಾನ್ ಲಾಹೌಲ್ ಪಠಿಸಿದರು.

"ಮಲಗಿಕೊಂಡಾಗ ಇವನು ಅದ್ಯಾಕ ಚೀರತಾನೋ ಅಲ್ಲಾಹ್‌ನೇ ಬಲ್ಲ" ಅಮ್ಮಾ ಅಂದಳು.

"ಅಮ್ಮಾ, ರಾತ್ರಿ ಇಡೀ ಹುಡುಗರು ಇವನಿಗೆ ಹೆದರಿಸ್ತಿರ್ತಾರ...." ನಾನಂದೆ.

"ಆ ಮೂಳರಿಗೂ ಸುಮ್ಮನಿರಾಕಾಗೂದಿಲ್ಲ. ಬ್ಯಾರೆಯವರಿಗೆ ಪ್ರಾಣಕ್ಕೆ ಕುತ್ತು ಬಂದಿರುವಾಗ ಇವರಿಗೆ ಮಂಗ್ಯಾನಾಟ ಮಾಡಬೇಕನಸ್ತೈತಿ" ಅಮ್ಮಾ ಸಿಡಿಮಿಡಿಗೊಂಡಳು.

ಸಫಿಯಾ ಚಾದರಿನಿಂದ ಮುಖ ಹೊರಹಾಕಿ ಅಂದಳು "ಇಂವಗ ಮಾಳಿಗೆ ಮ್ಯಾಲೆ ಮಲಗ ಅಂತ ಹೇಳು."

ಸೈಫು ಇನ್ನೂ ಎಚ್ಚರಗೊಂಡಿರಲಿಲ್ಲ. ನಾನು ಅವನ ಮಂಚದ ಬಳಿ ಹೋದೆ. ಬಾಗಿ ನೋಡಿದೆ. ಅವನ ಮುಖದ ಮೇಲೆ ಬೆವರು ಹರಿದಿತ್ತು. ಉಸಿರಾಟ ತೀವ್ರವಾಗಿತ್ತು. ದೇಹ ಕಂಪಿಸತೊಡಗಿತ್ತು, ಕೂದಲೆಲ್ಲ ಬೆವರಿನಿಂದ ಒದ್ದೆಯಾಗಿತ್ತು, ಮುಂಗುರುಳು ಮುಖದ ಮೇಲೆ ಅಂಟಿಕೊಂಡಿತ್ತು, ನಾನು ಸೈಫುನನ್ನು ನೋಡುತ್ತಲಿದ್ದೆ. ಅವನನ್ನು ಹೆದರಿಸುತ್ತಿದ್ದ ಆ ಹುಡುಗರ ಮೇಲೆ ಎಲ್ಲಿಲ್ಲದ ಕೋಪ ಬರತೊಡಗಿತು.

ಇಂದು ನಡೆಯುವ ದಂಗೆಗಳಂತೆ ಆಗ ದಂಗೆಗಳು ನಡೆಯುತ್ತಿರಲಿಲ್ಲ, ದಂಗೆಗಳ ಹಿಂದೆ ಅಡಗಿರುತ್ತಿದ್ದ ದರ್ಶನ, ರಣತಂತ್ರ, ಕಾರ್ಯಶೈಲಿ ಮತ್ತು ವೇಗದಲ್ಲಿ ತುಂಬ ಪರಿವರ್ತನೆಗಳಾಗಿವೆ. ಇಂದಿಗೆ 25-30 ವರ್ಷಗಳ ಹಿಂದೆ ಜನರನ್ನು ಜೀವಂತ ಸುಡುವುದಾಗಲೀ ಊರಿಗೇ ಊರನ್ನು ಬರಿದುಗೊಳಿಸುವುದಾಗಲೀ ನಡೆಯುತ್ತಿರಲಿಲ್ಲ, ಆ ಕಾಲದಲ್ಲಿ ಪ್ರಧಾನಮಂತ್ರಿಗಳು, ಗೃಹಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಆಶೀರ್ವಾದವೂ ದಂಗೆಕೋರರಿಗೆ ಸಿಗುತ್ತಿರಲಿಲ್ಲ, ಈ ಕೆಲಸವನ್ನು ಸಣ್ಣಪುಟ್ಟ ಸ್ಥಳೀಯ ನಾಯಕರು ತಮ್ಮ ಸ್ಥಾನೀಯ ಮತ್ತು ಕ್ಷುಲ್ಲಕ ಸ್ವಾರ್ಥವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮಾಡುತ್ತಿದ್ದರು. ವ್ಯವಹಾರದ ಪೈಪೋಟಿ, ಜಮೀನು ಕಬ್ಜಾ ಮಾಡಿಕೊಳ್ಳುವುದು ಇತ್ಯಾದಿ ಅವರ ಉದ್ದೇಶಗಳಾಗಿರುತ್ತಿದ್ದವು. ಈಗಂತೂ ದಂಗೆ ಎನ್ನುವುದು ದೆಹಲಿ ಗದ್ದುಗೆ ವಶಪಡಿಸಿಕೊಳ್ಳುವ ಸಾಧನವಾಗಿಬಿಟ್ಟಿದೆ. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವಕ್ಕೆ ಕೋಮು ಹಿಂಸೆ ಮತ್ತು ದ್ವೇಷದ ಮೂಲಕ ರಕ್ತದ ಹೊಳೆ ಹರಿಸಬಲ್ಲವನೇ ಮೂಗುದಾಣ ಹಾಕಬಲ್ಲನು.


ಸೈಫುನನ್ನು ಎಚ್ಚರಗೊಳಿಸಲಾಯಿತು. ತಾಯಿ ಮೇಕೆಯನ್ನು ಅರಸುವ ಅಸಹಾಯಕ ಮೇಕೆ ಮರಿಯಂತೆ ನಾಲ್ಕೂ ನಿಟ್ಟಿನಲ್ಲಿ ದೃಷ್ಟಿ ಹರಿಸತೊಡಗಿದ. ಅಬ್ಬಾಜಾನ್‌ರ ಮಲಸೋದರನ ಎಲ್ಲಕ್ಕೂ ಚಿಕ್ಕ ಮಗ ಸೈಫುದ್ದೀನ್ ಉರ್ಫ್ ಸೈಫು ಮನೆಯವರೆಲ್ಲ ತನ್ನ ಸುತ್ತು ನಿಂತಿರುವುದನ್ನು ಕಂಡು ಕಕ್ಕಾಬಿಕ್ಕಿಯಾಗಿ ಎದ್ದು ನಿಂತುಕೊಂಡ.

ಸೈಫುನ ಅಬ್ಬಾ ಕೌಸರ್ ಚಾಚಾ ಸತ್ತ ಸುದ್ದಿ ತಂದಿದ್ದ ಹರಿದ ಮೂಲೆಯ ಪೋಸ್ಟ್ ಕಾರ್ಡ್ ನನಗೆ ಚೆನ್ನಾಗಿ ನೆನಪಿದೆ. ಹಳ್ಳಿಯ ಜನ ಕೌಸರ್ ಚಾಚಾನ ಸಾವಿನ ಸುದ್ದಿಯನ್ನಷ್ಟೇ ತಿಳಿಸಿರಲಿಲ್ಲ, ಆದರೆ ಅವರ ಎಲ್ಲಕ್ಕೂ ಕಿರಿಯ ಮಗ ಈಗ ಈ ಜಗತ್ತಿನಲ್ಲಿ ಅನಾಥನಾಗಿ ಬಿಟ್ಟಿದ್ದಾನೆಯೆಂದೂ ತಿಳಿಸಿದ್ದರು. ಸೈಫುನ ಹಿರಿಯಣ್ಣ ಅವನನ್ನು ತನ್ನೊಟ್ಟಿಗೆ ಮುಂಬೈಗೆ ಕರೆದೊಯ್ಯಲಿಲ್ಲ, ಸೈಫುನ ವಿಷಯವಾಗಿ ನಾನು ಯಾವ ರೀತಿಯಲ್ಲೂ ಸಹಾಯ ಮಾಡಲಾರದ ಸ್ಥಿತಿಯಲ್ಲಿದ್ದೇನೆ ಎಂದು ಅವನು ಹೇಳಿದ್ದ. ಈಗ ಅಬ್ಬಾಜಾನ್‌ನನ್ನು ಬಿಟ್ಟರೆ ಅವನಿಗೆ ತನ್ನವರೆನ್ನುವವರು ಯಾರೂ ಇದ್ದಿರಲಿಲ್ಲ, ಮೂಲೆ ಹರಿದ ಪೋಸ್ಟ್ ಕಾರ್ಡ್ ಹಿಡಿದುಕೊಂಡಿದ್ದ ಅಬ್ಬಾಜಾನ್ ತುಂಬ ಸಮಯ ಮೌನವಾಗಿ ಕುಳಿತಿದ್ದರು. ಅಮ್ಮೀಜಾನ್ ಜೊತೆಗೆ ಅನೇಕ ಸಲ ಜಗಳಾಡಿದ ಮೇಲೆ ತಮ್ಮ ಪೂರ್ವಜರ ಹಳ್ಳಿ ಧನವಾಖೇಡಾಕ್ಕೆ ಹೋಗಿದ್ದರು. ಇದ್ದುಬದ್ದ ಜಮೀನು ಮಾರಿ ಸೈಫುನನ್ನು ಜೊತೆಗೆ ಕರೆದುಕೊಂಡು ಮರಳಿ ಬಂದಿದ್ದರು. ಸೈಫುನನ್ನು ನೋಡಿ ನಾವೆಲ್ಲ ನಕ್ಕು ಬಿಟ್ಟಿದ್ದೆವು. ಯಾವುದೋ ಹಳ್ಳಿಯ ಗಮಾರ ಹುಡುಗನನ್ನು ನೋಡಿ ಅಲಿಗಢ ಮುಸ್ಲಿಂ ಯುನಿವರ್ಸಿಟಿಯ ಸ್ಕೂಲಿನಲ್ಲಿ ಓದುತ್ತಿದ್ದ ಹುಡುಗರು ಮತ್ತು ಅಬ್ದುಲ್ಲಾಹ್ ಕಾಲೇಜಿನಲ್ಲಿ ಓದುತ್ತಿದ್ದ ಸಫಿಯಾಳ ಪ್ರತಿಕ್ರಿಯೆ ಬೇರೆಯಾಗಿರುವ ಸಾಧ್ಯತೆ ಇದ್ದಿರಲಿಲ್ಲ, ಸೈಫು ಕೇವಲ ಗಮಾರನಷ್ಟೇ ಅಲ್ಲ ಅರೆಹುಚ್ಚ ಎನ್ನುವಷ್ಟರಮಟ್ಟಿಗೆ ಮುಗ್ಧ ಅಥವಾ ಮರುಳನಾಗಿದ್ದಾನೆ ಎಂದು ಮೊದಲ ದಿನವೇ ಅನ್ನಿಸಿತ್ತು, ನಾವು ಅವನನ್ನು ಬಗೆಬಗೆಯಾಗಿ ಛೇಡಿಸುತ್ತಿದ್ದೆವು ಇಲ್ಲವೆ ಮರುಳಗೊಳಿಸುತ್ತಿದ್ದೆವು. ಸೈಫುನಿಗೆ ಇದರಿಂದ ಆದ ಒಂದು ಲಾಭವೇನೆಂದರೆ ಅವನು ಅಬ್ಬಾಜಾನ್ ಮತ್ತು ಅಮ್ಮನ ಮನಸ್ಸನ್ನು ಗೆದ್ದುಬಿಟ್ಟ. ಅವನು ಶ್ರಮಜೀವಿಗೆ ಪ್ರತೀಕವಾಗಿದ್ದ. ಅವನೆಂದೂ ಕೆಲಸ ಮಾಡಿ ದಣಿಯುತ್ತಿರಲಿಲ್ಲ, ಅಮ್ಮನಿಗೆ ಅವನ ಈ ಪ್ರವೃತ್ತಿ ತುಂಬ ಹಿಡಿಸಿತ್ತು, ಎರಡು ರೊಟ್ಟಿ ಹೆಚ್ಚು ತಿಂದರೇನಂತೆ? ಮೈಮುರಿದು ದುಡಿಯುತ್ತಾನಲ್ಲ, ವರ್ಷಗಳು ಉರುಳಿದವು. ಸೈಫು ನಮ್ಮ ಜೀವನದ ಒಂದು ಭಾಗವಾಗಿಬಿಟ್ಟ, ನಾವೆಲ್ಲ ಅವನ ಜೊತೆ ಸಹಜವಾಗಿ ವರ್ತಿಸತೊಡಗಿದೆವು. ಈಗ ಓಣಿಯ ಯಾವುದಾದರೂ ಹುಡುಗ ಅವನನ್ನು ಹುಚ್ಚ ಎಂದು ಕರೆದರೆ ನಾನು ಅವನ ಮುಖ ಪರಚುತ್ತಿದ್ದೆ. ಅವನು ನನ್ನ ತಮ್ಮ. ನೀನು ಹುಚ್ಚ ಎಂದು ಏಕೆ ಕರೆದೆ ಎಂದು ಕೇಳುತ್ತಿದ್ದೆ. ಮನೆಯಲ್ಲಿ ಸೈಫುಗೆ ಯಾವ ಸ್ಥಾನಮಾನವಿತ್ತು ಎನ್ನುವುದು ನಮಗೇ ಗೊತ್ತಿತ್ತು.

ನಗರದಲ್ಲಿ ಗಲಭೆ ಹೇಗೆ ಶುರುವಾಗಬೇಕಿತ್ತೋ ಹಾಗೆಯೆ ಶುರುವಾಗಿತ್ತು. ಅಂದರೆ ಮಸೀದಿಯಲ್ಲಿ ಅದ್ಯಾರಿಗೋ ಒಂದು ಚೀಲ ಸಿಕ್ಕಿತ್ತು, ಅದರಲ್ಲಿ ಯಾವುದೋ ಪ್ರಾಣಿಯ ಮಾಂಸವಿತ್ತು, ಅದರ ಬಗ್ಗೆ ಹೆಚ್ಚೇನೂ ಚೌಕಾಸಿ ಮಾಡುವ ಗೊಡವೆಗೆ ಹೋಗದೆ ಅದನ್ನು ಮಸೀದಿಯಲ್ಲಿ ಎಸೆಯಲಾಗಿದೆಯೆಂದ ಮೇಲೆ ಅದು ಹಂದಿಯ ಮಾಂಸವಾಗಿರದೆ ಬೇರೆ ಪ್ರಾಣಿಯ ಮಾಂಸವಾಗಿರುವುದು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಮೊಗಲ್ ಟೋಲಾದಲ್ಲಿ ಗೋವನ್ನು ವಧಿಸಲಾಯಿತು. ದಂಗೆ ಭುಗಿಲೆದ್ದಿತ್ತು, ಕೆಲವು ಅಂಗಡಿಗಳು ಬೆಂಕಿಗೆ ಆಹುತಿಯಾಗಿದ್ದವು. ಹೆಚ್ಚಾಗಿ ಅಂಗಡಿಗಳನ್ನು ಲೂಟಿ ಮಾಡಲಾಗಿತ್ತು, ಚಾಕು-ಚೂರಿಯಿಂದ ಇರಿದ ಘಟನೆಗಳಲ್ಲಿ ಸುಮಾರು ಆರೇಳು ಜನ ಸತ್ತಿದ್ದರು. ಆಡಳಿತ ಅದೆಷ್ಟು ಸಂವೇದನಾಶೀಲವಾಗಿತ್ತೆಂದರೆ ತಕ್ಷಣ ಕರ್ಫ್ಯೂ ಹೇರಲಾಯಿತು. ಇಂದಿನಂತಹ ಆಡಳಿತವಾಗಿರಲಿಲ್ಲ, ಈಗ ಸಾವಿರಾರು ಜನ ಸತ್ತರೂ ಮುಖ್ಯಮಂತ್ರಿ ಸಂದರ್ಭ ನೋಡಿ ಮೀಸೆ ತಿರುವುತ್ತಾ ಅಲೆಯುತ್ತಿರುತ್ತಾರೆ ಹಾಗೂ ಆಗಿದ್ದೆಲ್ಲ ಸರಿಯಾಗಿದೆ ಎನ್ನುತ್ತಾರೆ.

ದಂಗೆ ಸುತ್ತಮುತ್ತಲಿನ ಗ್ರಾಮಗಳಿಗೆ ಹಬ್ಬಿದ್ದರಿಂದ ಕರ್ಫ್ಯೂವನ್ನು ವಿಸ್ತರಿಸಲಾಯಿತು. ಮೊಗಲಪುರಾ ಮುಸಲ್ಮಾನರ ಬಹಳ ದೊಡ್ಡ ಪ್ರದೇಶವಾಗಿತ್ತು. ಹಾಗಾಗಿ ಅಲ್ಲಿ ಕರ್ಫ್ಯೂವಿನ ಪ್ರಭಾವವೂ ಇತ್ತು, 'ಜಿಹಾದ್' ಏನೋ ಎನ್ನುವಂಥ ವಾತಾವರಣ ನಿರ್ಮಾಣವಾಗಿತ್ತು. ಈ ಪ್ರದೇಶದಲ್ಲೂ ಗಲ್ಲಿ-ಬೀದಿಗಳಿದ್ದವು. ಅನೇಕ ದಂಗೆಗಳ ಅನುಭವಗಳು ಮನೆಗಳ ಒಳಗಿನಿಂದಲೇ ಹೊರದಾರಿಗಳನ್ನು, ಅಂದರೆ ತುರ್ತು ನಿರ್ಗಮನದ ದಾರಿಗಳನ್ನು ನಿರ್ಮಿಸಿಕೊಳ್ಳುವುದು ಅವಶ್ಯವೆನ್ನುವುದನ್ನು ಕಲಿಸಿದ್ದವು. ಮನೆಗಳ ಒಳಗಿನಿಂದ, ಮಾಳಿಗೆ ಮೇಲಿಂದ ಗೋಡೆಗಳನ್ನು ಹಾರುವುದರಿಂದ ಕೆಲವು ದಾರಿಗಳೂ ರೂಪುಗೊಂಡಿದ್ದವು. ಅವುಗಳ ಪರಿಚಯವಿದ್ದವ ಓಣಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸುಲಭವಾಗಿ ತಲುಪಬಹುದಾಗಿತ್ತು, ಓಣಿಯ ಸಿದ್ಧತೆ ಯುದ್ಧಸ್ತರದ್ದಾಗಿತ್ತು, ಕರ್ಫ್ಯೂ ತಿಂಗಳುಗಟ್ಟಲೆ ವಿಸ್ತರಿಸಲ್ಪಟ್ಟರೂ ಎಲ್ಲ ಆವಶ್ಯಕ ವಸ್ತುಗಳು ಓಣಿಯಲ್ಲೇ ಲಭ್ಯವಾಗುವ ಹಾಗೆ ಯೋಜನೆ ಮಾಡಲಾಗಿತ್ತು,

ಆಗ ದಂಗೆ ಓಣಿಯ ಯುವಕರಲ್ಲಿ ಒಂದು ವಿಚಿತ್ರ ಬಗೆಯ ಉತ್ಸಾಹ ಹುಟ್ಟುಹಾಕಬಲ್ಲ ಕಾಲವಾಗಿರುತ್ತಿತ್ತು, ನೋಡಿರಂತೆ ನಾವು ಹಿಂದೂಗಳಿಗೆ ಮಣ್ಣು ಮುಕ್ಕಿಸಿಬಿಡುತ್ತೇವೆ. ಧೋತರದ ಈ ಮಂದಿ ಏನು ತಿಳಿದಿದ್ದಾರೆ... ಅವರು ಹೇಡಿಗಳೇ... ಒಬ್ಬ ಮುಸಲ್ಮಾನ ಹತ್ತು ಜನ ಹಿಂದೂಗಳಿಗೆ ಸಮಾನವಾಗಬಲ್ಲ... 'ನಗುನಗುತ್ತ



ಪಡೆದೆವು ಪಾಕಿಸ್ತಾನ; ಹೋರಾಡಿ ವಶಪಡಿಸಿಕೊಳ್ಳು... ಹಿಂದುಸ್ತಾನ' ಎನ್ನುವಂಥ ವಾತಾವರಣ ನಿರ್ಮಾಣವಾ... ಆದರೆ ಓಣಿಯಿಂದ ಹೊರ ಬೀಳುವುದು ... ಅಸಾಧ್ಯವಾಗಿತ್ತು. ಪಿಎಸಿಯ ಠಾಣೆಗಳು ಎರ... ಓಣಿಗಳಲ್ಲೂ ಸ್ಥಾಪಿಸಲ್ಪಟ್ಟಿದ್ದವು. ಪಿಎಸಿಯ ಬೂಟು ... ರೈಫಲ್ ಬಟ್‌ಗಳ ಪ್ರಹಾರ ಎಷ್ಟೋ ಜನರಿಗೆ ನೆನಪಿದ... ಆದರೆ ಅವುಗಳ ಬಾಯಿ ಲೆಕ್ಕ ಸರಿಯಾಗಿತ್ತಾದರೂ ... ಮುಂದೆ...

ಸಂಕಟ ಏಕತೆ ಕಲಿಸುತ್ತದೆ. ಏಕತೆ ಶಿಸ್ತು ... ಶಿಸ್ತು ವ್ಯಾವಹಾರಿಕತೆಯನ್ನು. ಪ್ರತಿಯೊಂದು ಮನೆ... ಒಬ್ಬ ಹುಡುಗ ಗಸ್ತು ತಿರುಗಬೇಕಾಗುತ್ತಿತ್ತು, ... ಮನೆಯಿಂದ ನನ್ನನ್ನು ಹೊರತುಪಡಿಸಿದರೆ - ... ಹುಡುಗನಾಗಿರಲಿಲ್ಲ, ಏಕೆಂದರೆ ನಾನು 25 ವರ್ಷ ಮೀ... - ರಾತ್ರಿ ಕಾವಲಿಗೆ ಹೋಗಬೇಕಾದ ಹುಡುಗ ... ಸೈಫುನೇ ಆಗಿದ್ದ. ರಾತ್ರಿ ಕಾವಲು ಮಾಳಿಗೆ ... ನಡೆಯುತ್ತಿತ್ತು, ಮೊಗಲ್‌ಪುರಾ ನಗರದ ಎಲ್ಲಕ್ಕೂ ... ಪ್ರದೇಶದಲ್ಲಿತ್ತು, ಹಾಗಾಗಿ ಮಾಳಿಗೆ ಮೇಲಿಂದ ... ನಗರವನ್ನು ನೋಡಬಹುದಾಗಿತ್ತು. ಓಣಿ... ಹುಡುಗರೊಂದಿಗೆ ಸೈಫು ಗಸ್ತಿಗೆ ಹೋಗುತ್ತಿದ್ದ. ಇದರಿ... ನನಗೆ, ಅಬ್ಬಾಜಾನ್, ಅಮ್ಮ ಮತ್ತು ಸಫಿಯಾ - ಎಲ್ಲರಿ... ತುಂಬ ಅನುಕೂಲವಾಗಿತ್ತು, ಮನೆಯಲ್ಲಿ ಸೈಫು ಇದ್ದಿರ... ಪ್ರಾಯಶಃ ನನಗೇ ರಾತ್ರಿ ವೇಳೆ ಪರದಾಡುವ... ಅನಿವಾರ್ಯವಾಗುತ್ತಿತ್ತು. ಸೈಫು ರಾತ್ರಿ ಗ... ತಿರುಗುತ್ತಿದ್ದುದರಿಂದ ಅವನಿಗೆ ಕೆಲವು ರಿಯಾಯತಿಗ... ಸಿಕ್ಕಿದ್ದವು. ಉದಾಹರಣೆಗೆ ಅವನು ಎಂಟು ಗಂಟೆ... ಮಲಗಬಹುದಿತ್ತು, ಅವನು ಕಸಗೂಡಿಸಬೇಕಾಗಿರ... ಈ ಕೆಲಸವನ್ನು ಸಫಿಯಾಳಿಗೆ ವಹಿಸಿಕೊಡಲಾಗಿತ್ತು, ... ಅವಳಿಗೆ ಎಳ್ಳಷ್ಟೂ ಇಷ್ಟವಾಗುತ್ತಿರಲಿಲ್ಲ.

ಒಮ್ಮೊಮ್ಮೆ ರಾತ್ರಿ ವೇಳೆ ನಾನೂ ಮಾಳಿಗೆ ಹತ್ತು... ಮಾಳಿಗೆಗಳ ಆ ಲೋಕದ ಮೇಲೆ ಓಣಿಯ ಹುಡು... ಪ್ರಭುತ್ವವಿರುತ್ತಿತ್ತು, ಲಾಠಿ, ದೊಣ್ಣೆ ಮತ್ತು ಇಟ್ಟಿಗೆಗ... ಅಲ್ಲಲ್ಲಿ ಶೇಖರಿಸಲಾಗಿತ್ತು. ಒಬ್ಬಬ್ಬರ ಬಳಿ ... ಪಿಸ್ತೂಲುಗಳು ಹಾಗೂ ಹೆಚ್ಚಿನವರ ... ಚಾಕು-ಚೂರಿಗಳಿರುತ್ತಿದ್ದವು. ಅವರಲ್ಲಿ ಬಹುತೇ... ಸಣ್ಣಪುಟ್ಟ ಕೆಲಸ ಮಾಡುವ ಕಾರ್ಮಿಕರಾಗಿ... ಬಹುತೇಕರು ಬೀಗದ ಕಾರ್ಖಾನೆಗಳಲ್ಲಿ ... ಮಾಡುತ್ತಿದ್ದರು. ಕೆಲವರು ಟೈಲರ್‌ಗಳಾಗಿದ್ದರು, ಕೆಲ... ಬಡಗಿಗಳಾಗಿದ್ದರು. ಪೇಟೆ ಬಂದ್ ಆಗಿದ್ದುದರಿಂದ ... ದಂಧೆಗಳೂ ನಿಂತುಬಿಟ್ಟಿದ್ದವು. ಅವರಲ್ಲಿ ಬಹುತ... ಮನೆಗಳಲ್ಲಿ ಸಾಲದಿಂದ ಒಲೆಗಳು ಉರಿಯುತ್ತಿದ್ದವು. ... ಅವರು ಮಾತ್ರ ನೆಮ್ಮದಿಯಿಂದಿದ್ದರು. ಮಾಳಿಗೆ ... ಕುಳಿತುಕೊಂಡು ಅವರು ದಂಗೆಗಳ ಕುರಿತ ತಾಜಾ ಸು... ವಿಶ್ಲೇಷಣೆ ಮಾಡುತ್ತಿದ್ದರು ಇಲ್ಲವೆ ಹಿಂದೂ... ಬೈಯುತ್ತಿದ್ದರು. ಅವರು ಹಿಂದೂಗಳಿಗಿಂತ ಹೆ... ಪಿಎಸಿಯವರಿಗೆ ಬೈಯುತ್ತಿದ್ದರು. ಪಾಕಿಸ್ತಾನ ರೇಡಿಯೊ... ಎಲ್ಲ ಕಾರ್ಯಕ್ರಮಗಳು ಅವರಿಗೆ ನೆನಪಿದ್ದವು, ಮಂದ ಧ್ವನಿ... ರೇಡಿಯೊ ಲಾಹೋರ್ ಕೇಳುತ್ತಿದ್ದರು. ಈ ಹುಡು... ಪೈಕಿ ಮೂರ್ನಾಲ್ಕು ಜನ ಪಾಕಿಸ್ತಾನಕ್ಕೆ ಹೋಗಿ ಬಿಟ್ಟು... ಅವರಿಗೆ ಹಾಜಿಗಳಿಗೆ ಸಲ್ಲುವಂಥ ಗೌರವ ಸಲ್ಲು... ಅವರು ಪಾಕಿಸ್ತಾನದ ರೈಲ್ವೆ 'ತೇಜಗಾಮ' ... ಗುಲ್ಶನ್-ಎ-ಇಕಬಾಲ್ ಕಾಲನಿ ಕುರಿತ ಎಂ... ಪ್ರಸಂಗಗಳನ್ನು ನಿರೂಪಿಸುತ್ತಿದ್ದರೆಂದರೆ ಭೂಮಿ ... ಸ್ವರ್ಗವೇನಾದರೂ ಇದ್ದರೆ ಅದು ಪಾಕಿಸ್ತಾನದಲ್ಲಿದೆ ... ಅನಿಸುತ್ತಿತ್ತು. ಪಾಕಿಸ್ತಾನದ ಪ್ರಶಂಸೆ ಕೇಳಿ ಸಾಕೆನಿ... ಅವರು ಸೈಫುನನ್ನು ಛೇಡಿಸುತ್ತಿದ್ದರು. ಸೈಫು ಪಾ... ಪಾಕಿಸ್ತಾನ ಎಂದು ಜಪಿಸುವುದನ್ನು ಕೇಳಿ ಕೇಳಿ ... ಒಂದು ದಿನ ಪಾಕಿಸ್ತಾನ ಎನ್ನುವುದಾದರೂ ಎಲ್ಲಿದೆ ... ಕೇಳಿದ. ಆ ವಿಷಯವಾಗಿ ಎಲ್ಲ ಹುಡುಗರು ಅ... ಸಾಕಷ್ಟು ಗೋಳು ಹುಯ್ದುಕೊಂಡಿದ್ದರು. ಅವನಿಗೆ ಒ... ಅರ್ಥವಾಯಿತು, ಒಂದಿಷ್ಟು ಅರ್ಥವಾಗಲಿಲ್ಲ, ... ಅವನಿಗೆ ಪಾಕಿಸ್ತಾನ ಎಲ್ಲಿದೆ ಎನ್ನುವುದು ಮಾತ್ರ ಗೊತ್ತ... ಇಲ್ಲ.

ಕಾವಲು ಹುಡುಗರು ಸೈಫುನನ್ನು ತಮಾಷೆ ಮಾಡ... "ನೋಡು ಸೈಫು, ಹಿಂದೂಗಳ ಕೈಗೆ ನೀನು ಸಿಕ್ಕಿ... ಅವರೇನು ಮಾಡ್ತಾರ ಗೊತ್ತೇನ? ಮೊದಲು ... ಬೆತ್ತಲೆ ಮಾಡ್ತಾರ..." ಎಂದು ಗಂಭೀರ... ಹೆದರಿಸುತ್ತಿದ್ದರು. ಸೈಫು ಅರೆಹುಚ್ಚನಾಗಿ... ಬೆತ್ತಲಾಗುವುದು ತುಂಬ ಕೆಟ್ಟ ಹಾಗೂ ಅಸಹ... ವಿಷಯವೆಂದು ಭಾವಿಸುತ್ತಾನೆ ಎನ್ನುವುದು ... ಗೊತ್ತಿತ್ತು, "ಅದಾದ ಮ್ಯಾಲೆ ಹಿಂದೂಗಳು ನಿನ್ನ ... ಎಣ್ಣೆ ಸವರ್ತಾರ."

"ಯಾಕ? ಎಣ್ಣೆ ಯಾಕ ಸವರ್ತಾರ?"

"ಯಾಕಂದ್ರ ಅವರು ನಿನಗ ಬೆತ್ತದಿಂದ ಬ... ಹತ್ತಿದ್ರ ಚರ್ಮ ಸುಲಿದು ಹೋಗಲಿ ಅಂತ. ಆ... ಕಾದ ಸಲಾಖೆಗಳಿಂದ ನಿನಗ ಬರೆ ಹಾಕ್ತಾರ..."

"ಇಲ್ಲ" ಅವನಿಗೆ ನಂಬಲಾಗಲಿಲ್ಲ.

ರಾತ್ರಿ ವೇಳೆ ಅವನಿಗೆ ಕೇಳಸುತ್ತಿದ್ದ ಭಯಾನಕ ಮತ್ತು
...ವ ಪ್ರಸಂಗಗಳಿಂದ ಅವನು ವಿಪರೀತ ಹೆದರಿಬಿಟ್ಟಿದ್ದ. ...ಮ್ಮೆ ನನ್ನೆದುರು ತಲೆಬುಡವಿಲ್ಲದ ವಾದ ...ಡುತ್ತಿದ್ದ. ನಾನು ದಿಙ್ಮೂಢನಾಗುತ್ತಿದ್ದೆ. ಅವನನ್ನು ...ಮ್ಮನಿರಿಸಲು ಪ್ರಯತ್ನಿಸುತ್ತಿದ್ದೆ. ಆದರೆ ಅವನ ...ಶೆಗಳು ದೂರಾಗುತ್ತಿರಲಿಲ್ಲ. ಒಂದು ದಿನ ಕೇಳಿದ ...ಣ್ಣಾ ಪಾಕಿಸ್ತಾನದೊಳಗೂ ಮಣ್ಣು ಐತೇನ?"

"ಯಾಕ? ಅಲ್ಲಿ ಯಾಕ ಮಣ್ಣು ಇರೂದಿಲ್ಲ?"

"ಅಲ್ಲಿ ಇಲ್ಲಿಯಂಥ ರಸ್ತೆಗಳಿಲ್ಲ... ಅಲ್ಲಿ ಟೆರಿಲೀನ್ ...ತಿ... ತುಂಬ ಅಗ್ಗ ಅಂತ..."

"ನೋಡು ಇವೆಲ್ಲ ಕಟ್ಟುಕತೆಗಳು... ನೀನು ಅಲ್ತಾಫ್ ...ತ್ರ ಅವನಂಥ ಬ್ಯಾರೆದವರ ಮಾತಿಗೆ ಕಿವಿಗೊಡಬ್ಯಾಡ" ...ವು ಅವನಿಗೆ ತಿಳಿ ಹೇಳಿದೆ.

"ಅಣ್ಣಾ ಹಿಂದೂಗಳು ಕಣ್ಣು ಕಿತ್ತುಕೊಂತಾರೇನ?..."

"ಇದಕ್ಕೇನೂ ಅರ್ಥ ಇಲ್ಲ... ನಿನಗ ಯಾರ ...ದು?"

"ಬಚ್ಚನ್."

"ತಪ್ಪು."

"ಹಂಗಂದ್ರ... ಚರ್ಮಾನೂ ಸುಲಿಯೂದಿಲ್ಲೇನ?"

"ಓಹ್ ಇದೆಲ್ಲ ಏನ್ ಹಚ್ಚೇದಿ ಬಿಡೋ..."

ಅವನು ಸುಮ್ಮನಾದ. ಆದರೆ ಅವನ ಕಣ್ಣಲ್ಲಿ ನೂರಾರು ...ಗಳಿದ್ದವು. ನಾನು ಹೊರಗೆ ಹೋದೆ. ಅವನು ...ಯಾಳೊಂದಿಗೆ ಅದೇ ರೀತಿ ಮಾತನಾಡತೊಡಗಿದ.

...ಕರ್ಫ್ಯೂ ದೀರ್ಘವಾಗುತ್ತಾ ಹೋಯಿತು. ರಾತ್ರಿ ...ಲು ಮುಂದುವರಿದಿತ್ತು, ನಮ್ಮ ಮನೆಯಿಂದ ಸೈಫುನೇ ...ಲಿಗೆ ಹೋಗತೊಡಗಿದ. ಕೆಲ ದಿನಗಳ ನಂತರ ಸೈಫು ...ಗಿದ್ದಾಗ ಚೀರತೊಡಗಿದ. ನಾವೆಲ್ಲ ಗಾಬರಿಗೊಂಡೆವು. ...ಲ್ಲ ಅವನನ್ನು ಹೆದರಿಸಿದ್ದರ ಪರಿಣಾಮವೆನ್ನುವುದನ್ನು ...ದುಕೊಳ್ಳಲು ತಡವಾಗಲಿಲ್ಲ. ಅಬ್ಬಾಜಾನ್‌ಗೆ ಹುಡುಗರ ...ಲೆ ವಿಪರೀತ ಸಿಟ್ಟು ಬಂದಿತ್ತು. ಅವರು ಓಣಿಯ ...ಯರಂತಿದ್ದ ಒಬ್ಬಿಬ್ಬರಿಗೆ ವಿಷಯ ಸಹ ತಿಳಿಸಿದರು. ...ರೆ ಅದರ ಪರಿಣಾಮವೇನೂ ಆಗಲಿಲ್ಲ. ಹುಡುಗರು, ...ಹೂ ಓಣಿಯ ಹುಡುಗರು, ಮನರಂಜನೆಯನ್ನು ಅದು ...ಬೇಡವೆಂದಾರು.

...ಮಾತು ಎಲ್ಲಿಂದ ಎಲ್ಲಿಗೆ ಹೋಯಿತಲ್ಲ. ಇದನ್ನು ...ಯಾಗಿ ಊಹಿಸಿಕೊಳ್ಳುವುದು ನನಗೆ ಎಲ್ಲಿಯತನಕ ...ಧ್ಯವಾಗಲಿಲ್ಲವೆಂದರೆ "ಅಣ್ಣಾ ನಾನು ಹಿಂದೂ ...ಬಿಡಲ್ಯಾ?" ಎಂದು ಸೈಫು ಒಂದು ದಿನ ಗಂಭೀರವಾಗಿ ...ಬಿಟ್ಟ.

...ಪ್ರಶ್ನೆ ಕೇಳಿ ನಾನು ಸ್ತಂಭೀಭೂತನಾದೆ. ಇದು ರಾತ್ರಿ ...ನಿಗೆ ಭಯಾನಕ ಪ್ರಸಂಗಗಳನ್ನು ಕೇಳಿಸಿದ್ದರ ...ಣಾಮವೆನ್ನುವುದನ್ನು ಬಹು ಬೇಗ ತಿಳಿದುಕೊಂಡೆ. ...ಗೆ ಕೋಪ ಬಂತು. ಮತ್ತೆ ಹುಚ್ಚನ ಮೇಲೆ ...ಗೇಳುವುದಕ್ಕೆ ಬದಲಾಗಿ ಸಿಟ್ಟನ್ನು ನುಂಗಿಕೊಂಡು ...ನಿಗೆ ತಿಳಿಹೇಳುವುದೇ ವಾಸಿ ಎನಿಸಿತು.

ನಾನು ಕೇಳಿದೆ "ಯಾಕ, ನೀ ಯಾಕ ಹಿಂದೂ ...ಬೇಕಂತೀ?"

"ಅಂದ್ರ ಜೀವಂತ ಉಳಿಬೌದು" ಸೈಫು ಉತ್ತರಿಸಿದ.

"ಇದರರ್ಥ ನಾ ಬದುಕಿ ಉಳಿಯೂದು ಸಾಧ್ಯ ...ನ" ನಾನಂದೆ.

"ಆದಕ್ಕ ನೀನೂ ಹಿಂದೂ ಆಗಿ ಬಿಡು" ಅವನು ...ಳಿದ.

"...ನ್ನ ಅಬ್ಬಾ ಮತ್ತು ತಾಯಾ?" ನಾನು ನನ್ನ ತಂದೆ ...ತ್ತ ಕಕ್ಕಸ ಮಾತೆತ್ತಿದೆ.

"ಇಲ್ಲ... ಇಲ್ಲ..." ಅವನು ಏನನ್ನೋ ...ಚಿಸತೊಡಗಿದ.

ಅಬ್ಬಾಜಾನ್‌ನ ಬಿಳಿಯ ಮತ್ತು ಉದ್ದನೆಯ ಗಡ್ಡದಲ್ಲಿ ...ನು ಸಿಕ್ಕಿಹಾಕಿಕೊಂಡಂತಿತ್ತು.


"ನೋಡು ಈಗ ಆ ಹುಡುಗರ ಮೂರ್ಖತನದ ...ತುಗಳು ನಿನ್ನ ದಾರಿ ತಪ್ಪಿಸಾಕ ಹತ್ಯಾವ. ನಿನಗೆ ...ಇದೆಲ್ಲ ಸುಳ್ಳು, ಆ ಮಹೇಶ ನಿನಗ ಗೊತ್ತಿಲ್ಲ?"

"ಅವ ಸ್ಕೂಟರ್ ಮ್ಯಾಲಿ ಬರ್ತಾರಲ್ಲ..." ಅವನಿಗೆ ...ಪಿ ಆಯಿತು.

"ಹೌದ ಹೌದ, ಅವರ..." ನಾನಂದೆ. ಮೊದಮೊದಲು ...ಮುಖದ ಮೇಲೆ ನಿರಾಶೆಯ ನೆರಳು ಮೂಡಿತು. ...ಅವನು ಸುಮ್ಮನಾದ.

"...ಲ್ಲ ಗೂಂಡಾ ಬದ್ಮಾಶಗಳ ಕೆಲಸ... ಹಿಂದೂಗಳೂ ...ದೆದಾಡೂದಿಲ್ಲ... ಮುಸಲ್ಮಾನರೂ ಹೊಡೆದಾಡೂದಿಲ್ಲ ...ತ"

...ಗೆ ಸೈಫುನ ಕರುಣಾಜನಕ ಹುಚ್ಚುತನ ಹೋಯಿತು. ... ಬರಲಿಗೆ ...ಯಾಯಿತು. ಅರೆ, ನಗರದಲ್ಲಿ ... ಬಿಂದುಗಳು ಮತ್ತು ಮುಸಲ್ಮಾನರನ್ನು,



ಒಟ್ಟು ಸೇರಿಸಿದರೆ ಎಷ್ಟಿರಬಹುದು? ಅಬ್ಬಬ್ಬಾ ಎಂದರೆ ಒಂದು ಸಾವಿರ... ಬೇಡ ಎರಡು ಸಾವಿರ ಎನ್ನಿರಿ. ಎರಡು ಸಾವಿರ ಜನ ಲಕ್ಷಗಟ್ಟಲೆ ಜನರ ಬದುಕನ್ನು ನರಕವನ್ನಾಗಿ ಮಾಡಿಬಿಟ್ಟಿದ್ದಾರೆ ಹಾಗೂ ನಾವು ನಮ್ಮ ನಮ್ಮ ಮನೆಗಳಲ್ಲಿ ಅಡಗಿ ಕುಳಿತುಕೊಂಡಿದ್ದೇವೆ. ಇದು ಹತ್ತು ಸಾವಿರ ಆಂಗ್ಲರು ಕೋಟಿಗಟ್ಟಲೆ ಭಾರತೀಯರನ್ನು ಆಳಿದಂತಾಯಿತಲ್ಲ. ಎಲ್ಲ ಆಡಳಿತ ಅವರ ಅಧೀನದಲ್ಲಿತ್ತು. ಅಷ್ಟಕ್ಕೂ ದಂಗೆಗಳಿಂದ ಯಾರಿಗೆ ಲಾಭವಿದೆ? ಲಾಭ? ಹೌದು ಹಾಜಿ ಅಬ್ದುಲ್ ಕರೀಮ್‌ಗೆ ಲಾಭವಿದೆ. ಅವನು ಮುನಿಸಿಪಾಲಿಟಿ ಚುನಾವಣೆಗೆ ನಿಲ್ಲುವವನು. ಅವನಿಗೆ ಮುಸಲ್ಮಾನರ ವೋಟು ಸಿಗಲಿವೆ. ಪಂಡಿತ್ ಜೋಗೇಶ್ವರಗೆ ಲಾಭವಿದೆ. ಅವನಿಗೆ ಹಿಂದೂ ವೋಟು ಸಿಗಲಿವೆ. ಈಗ ನಮಗೇನು ಬಂತು? ನೀವು ವೋಟರ್‌ಗಳು - ಹಿಂದೂ ವೋಟರ್, ಮುಸಲ್ಮಾನ್ ವೋಟರ್, ಹರಿಜನ ವೋಟರ್, ಸುನ್ನಿ ವೋಟರ್, ಶಿಯಾ ವೋಟರ್... ಇದೆಲ್ಲ ನಡೆಯುತ್ತಿರಬೇಕೆ ಭಾರತದಲ್ಲಿ? ಹೌದು ಏಕಾಗಬಾರದು? ಎಲ್ಲಿ ವೋಟರಗಳು ಅಜ್ಞಾನಿಗಳಿರುವರೋ, ಎಲ್ಲಿ ಬಾಡಿಗೆ ಕೊಲೆಗಡುಕರು ಲಭ್ಯವಾಗಿರುವರೋ, ಎಲ್ಲಿ ರಾಜಕಾರಣಿಗಳು ತಮ್ಮ ಗದ್ದುಗೆ ವಶಕ್ಕೆ ತೆಗೆದುಕೊಳ್ಳಲು ದಂಗೆ ಮಾಡಿಸುವರೋ ಅಲ್ಲಿ ಇನ್ನೇನಾಗಬೇಕು? ಇಲ್ಲವಾದರೆ ನಮಗೆ ಶಿಕ್ಷಿತರನ್ನಾಗಿ ಮಾಡಬಹುದಲ್ಲ? ನಾವು ತಿಳಿದುಕೊಳ್ಳಲಾರೆವೆ? ಹಾ... ಹಾ... ಹಾ... ಕಲಿಸಲು ನೀವ್ಯಾರು? ಸರ್ಕಾರ ಕಲಿಸಬಹುದು - ಅದು ಮನಸ್ಸು ಮಾಡಿದ್ರೆ ಆದರೆ. ಸರ್ಕಾರ ಮನಸ್ಸು ಮಾಡದಿದ್ದರೆ ಈ ದೇಶದಲ್ಲಿ ಏನೂ ಸಾಧ್ಯವಿಲ್ಲವೆ? ಹೌದು ಆಂಗ್ಲರು ನಮಗೆ ಇದನ್ನೇ ಕಲಿಸಿದ್ದಾರೆ. ನಾವು ಅದಕ್ಕೆ ಒಗ್ಗಿಹೋಗಿದ್ದೇವೆ... ಈ ದೇಶದ ಮುಸಲ್ಮಾನರೆಲ್ಲ ಹಿಂದೂಗಳಾಗಿ ಬಿಡುವರೆಂದು ಭಾವಿಸಿರಿ. ಲಾಹೌಲಾವಿಲಾಕುವ್ವತ್ ಇದೇನು ಹೀಗೆ ಮಾತಾಡುತ್ತಿದ್ದೀರಿ? ಆಯಿತು, ಈ ದೇಶದ ಹಿಂದೂಗಳೆಲ್ಲ ಮುಸಲ್ಮಾನರಾಗಿ ಬಿಡುವರು ಎಂದು ಭಾವಿಸಿರಿ. ಸುಬ್ಹಾನಲ್ಲಾಹ್... ವಾಹ್... ವಾಹ್ ಎಂಥ ಮಾತು? ಆಗ ದಂಗೆಗಳು ನಿಂತು ಬಿಡುತ್ತವೆಯೆ? ಇದು ಯೋಚಿಸುವ ಮಾತು... ಪಾಕಿಸ್ತಾನದಲ್ಲಿ ಶಿಯಾ-ಸುನ್ನಿಗಳು ಪರಸ್ಪರ ಕಡುವೈರಿಗಳಾಗಿದ್ದಾರೆ... ಅರೆ ಈ ಮನುಷ್ಯ ಪ್ರಾಣಿ, ಬೇಡ ಹಾಳಾದ ಈ ಮಾನವ ಹೀಗೆ ಹೊಡೆದಾಡುತ್ತಲೇ ಇರಬೇಕೆನ್ನುತ್ತಾನೆಯೆ? ಹಾಗೆ ನೋಡಿದರೆ ಜುಮ್ಮನ್ ಮತ್ತು ಮೈಕೂ ಇಬ್ಬರಲ್ಲೂ ಗಾಢಸ್ನೇಹವಿದೆ. ಹಾಗಾದರೆ ನಾವೂ ಏಕೆ ಮೈಕೂ ಮತ್ತು ಜುಮ್ಮನ್ ಆಗಿ ಬಿಡಬಾರದು?... ವಾಹ್ ಎಂಥ ಮಾತು! ಅಂದರೆ... ಅಂದರೆ... ಅಂದರೆ...

ನಾನು ಬೆಳ್ಳಂಬೆಳಗ್ಗೆ ರೇಡಿಯೊ ಕಿವಿ ಹಿಂಡುತ್ತಿದ್ದೆ. ಸಫಿಯಾ ಕಸ ಗುಡಿಸುತ್ತಿದ್ದಳು. ಅಷ್ಟರಲ್ಲಿ ರಾಜಾನ ತಮ್ಮ ಅಕರಮ್ ಓಡೋಡುತ್ತಾ ಬಂದ. ಎದುಸಿರು ಬಿಡುತ್ತಿದ್ದ ಅವನು ಉಸಿರನ್ನು ನಿಯಂತ್ರಿಸಲು ವಿಫಲ ಪ್ರಯತ್ನ ಮಾಡುತ್ತ "ಸೈಫುನನ್ನು ಪಿಎಸಿಯವರು ಥಳಿಸಾಕ ಹತ್ತಾರ" ಎಂದ.

"ಏನು? ಏನ ಹೇಳಾಕ ಹತ್ತೀದಿ?"

"ಸೈಫುನನ್ನ ಪಿಎಸಿಯವರು ಥಳಿಸಾಕ ಹತ್ತಾರ" ಅವನು ಸ್ವಲ್ಪ ತಡೆದು ಹೇಳಿದ.

"ಅದ್ಯಾಕ ಹೊಡ್ಯಾಕ ಹತ್ತಾರ? ಏನಾಯಿತು?"

"ಗೊತ್ತಿಲ್ಲ, ರಸ್ತಾದಾಗ..."

"ಪೋಲೀಸ್ ಠಾಣೆ ಐತಲ್ಲ ಅಲ್ಲೇ ಏನ?"

"ಹಾಂ, ಅಲ್ಲೇ."

"ಆದ್ರ ಯಾಕ?..." ಇಂದು ಎಂಟು ಗಂಟೆಯಿಂದ ಹತ್ತು ಗಂಟೆ ತನಕ ಕರ್ಫ್ಯೂ ಹಿಂತೆಗೆದುಕೊಳ್ಳಲಾಗುವುದೆಂದು ನನಗೆ ಗೊತ್ತಿತ್ತು, ಎಂಟು ಗಂಟೆ ಸುಮಾರಿಗೆ ಅಮ್ಮಾ ಸೈಫುನನ್ನು ಹಾಲು ತರಲು ಕಳುಹಿಸಿದ್ದಳು. ಸಾಧ್ಯವಾದಷ್ಟು ಬೇಗ ವಾಪಸಾಗಬೇಕು ಎನ್ನುವುದು ಸೈಫುನಂಥ ಹುಚ್ಚನಿಗೂ ಗೊತ್ತಿತ್ತು. ಈಗ ಹತ್ತಾಗಿ ಹೋಯಿತು.

"ಆಯಿತು. ನಾನು ಹೋಗ್ತೀನಿ" ರೇಡಿಯೋದಿಂದ ಹೊರಹೊಮ್ಮುತ್ತಿದ್ದ ಗೊಗ್ಗರು ಧ್ವನಿಯನ್ನು ಲೆಕ್ಕಿಸದೆ ನಾನು ವೇಗವಾಗಿ ಹೊರ ನಡೆದೆ. ಹುಚ್ಚನನ್ನು ಏಕೆ ಪಿಎಸಿಯವರು ಹೊಡೆಯುತ್ತಿದ್ದಾರೋ? ಅವನು ಯಾವ ಅಪರಾಧ ಮಾಡ್ಯಾನೋ? ಅವನು ಏನು ಮಾಡಬಲ್ಲ? ಸ್ವತಃ ಅವನೇ ಎಷ್ಟು ಭಯಭೀತನಾಗಿರುತ್ತಾನೆಂದರೆ ಅವನಿಗೆ ಹೊಡೆಯುವ ಅವಶ್ಯಕತೆ ಏನಿದೆ?... ಮತ್ತೆ ಕಾರಣ ಏನಿರಬಹುದು?

ದುದ್ದು? ಅರೆ ಅಪ್ಪಾ ಅವನಿಗೆ ಕೊಟ್ಟದ್ದು ಎರಡು ರೂಪಾಯಿ. ಎರಡು ರೂಪಾಯಿಗಾಗಿ ಪಿಎಸಿಯವರು ಅವನಿಗೆ ಯಾಕ ಹೊಡೀತಾರ?

ಮುಖ್ಯ ರಸ್ತೆಗೆ ಸಮಾನಾಂತರದಲ್ಲಿ ಬೀದಿಯ ಮುಂಗಟ್ಟುಗಳಲ್ಲಿ ಓಣಿಯ ಕೆಲವು ಜನ ನಿಂತಿದ್ದರು. ಎದುರಿಗೆ ಪಿಎಸಿಯವರ ಮುಂದೆ ಸೈಫು ನಿಂತಿದ್ದ. ಎದುರಿಗಿದ್ದ ಪಿಎಸಿಯ ಸಿಪಾಯಿಗಳಿಗೆ "ನೀವು ನನಗ ಯಾಕ ಹೊಡದ್ರಿ... ನಾನು ಹಿಂದೂ... ನಾನೂ ಹಿಂದೂ..." ಎಂದು ಸೈಫು ಜೋರಾಗಿ ಅರಚಿಕೊಳ್ಳುತ್ತಿದ್ದ.

ನಾನು ಮುನ್ನುಗ್ಗಿದೆ. ನನ್ನನ್ನು ನೋಡಿದ ಮೇಲೂ ಸೈಫು ನಿಲ್ಲಲಿಲ್ಲ, ಅವನು ಅರಚುತ್ತಲೇ ಇದ್ದ, "ಹೌದು... ಹೌದು... ನಾನು ಹಿಂದೂ..." ಅವನು ಜೋಲಿ ಹೊಡೆಯುತ್ತಿದ್ದ. ಅವನ ಕಟಬಾಯಿಯಿಂದ ಹರಿದ ರಕ್ತದ ಹನಿ ಅವನ ಗದ್ದದ ಮೇಲೆ ನೆಲೆ ನಿಂತಿತ್ತು.

"ನೀವ ನನ್ನನ್ನು ಹೊಡೆದ್ರಿ ಯಾಕ?... ನಾನು ಹಿಂದೂ..."

"ಸೈಫು, ಇದೇನು ನಡೆದ್ಯತೋ?... ನಡೀ ಮನೀಗೆ ಹೋಗೂನು ನಡೀ."

"ನಾನು ಹಿಂದೂ..."

ನನಗೆ ದಂಗು ಬಡಿದಂತಾಯಿತು... ಇವನು ಮೊದಲು ಇದ್ದ ಸೈಫುನೆ?... ಇಂವ ಪೂರಾ ಬದಲಾಗಿ ಬಿಟ್ಟಾನ. ಇವನಿಗೇನಾಗಿ ಬಿಟ್ಟೈತಿ?

"ಸೈಫು ಎಚ್ಚರಾಗು" ನಾನು ಜೋರಾಗಿ ಬೆದರಿಸಿದೆ.

ಓಣಿಯ ಜನ ಒಳಗೊಳಗೇ ಅದ್ಯಾವ ಕಾರಣಕ್ಕಾಗಿ ನಗುತ್ತಿದ್ದರೋ ಗೊತ್ತಾಗಲಿಲ್ಲ, ನನಗೆ ಕೋಪ ಬಂದು ಬಿಟ್ಟಿತು. ಇಂವ ಹುಚ್ಚ ಅನ್ನೂದು ಇವರಿಗೆ ಯಾಕ ಗೊತ್ತಾಗವಾಲ್ತು ಅಂದುಕೊಂಡೆ.

"ನೀ ಯಾರು?" ಪಿಎಸಿಯವ ನನಗೆ ಕೇಳಿದ.

"ನನ್ನ ತಮ್ಮ ಇಂವ... ಇಂವಗ ಒಂದೀಟು ಮೆಂಟಲ್ ಪ್ರಾಬ್ಲಮ್ ಐತಿ."

"ಹಂಗಾದ್ರ ಇಂವನ್ನ ಮನೀಗಿ ಕರಕೊಂಡು ಹೋಗು" ಒಬ್ಬ ಸಿಪಾಯಿ ಹೇಳಿದ.

"ನಮಗ ಹುಚ್ಚ ಮಾಡಿ ಬಿಟ್ಟ" ಇನ್ನೊಬ್ಬ ಅಂದ.

"ನಡೀ ಸೈಫು ಮನೀಗಿ ಹೋಗೂನು. . ಕರ್ಫ್ಯೂ ಲಾಗೂ ಆಗ್ಲೈತಿ... ಕರ್ಫ್ಯೂ..."

"ನಾ ಬರೂದಿಲ್ಲ... ನಾ ಹಿಂದೂ... ನಾನೂ ಹಿಂದೂ... ನನಗ... ನನಗ..."

ಅವನು ಬಿಕ್ಕಿ ಬಿಕ್ಕಿ ಅಳತೊಡಗಿದ... "... ಹೊಡದ್ರು... ನನಗ ಹೊಡದ್ರು... ನನಗ ಹೊಡದ್ರು... ನಾ ಹಿಂದೂ... ನಾನೂ ಹಿಂದೂ..."

ಸೈಫು ಧಡಲ್ ಅಂತ ನೆಲಕ್ಕೆ ಕುಸಿದು ಬಿದ್ದ... ಬಹುಶಃ ಮೂರ್ಛೆ ಹೋದನೇನೋ.

ಆಗ ಅವನನ್ನು ಎತ್ತಿಕೊಂಡು ಹೋಗುವುದು ಸುಲಭವಾಯಿತು....

ಮೂಲ ಹಿಂದಿ: ಅಸ್ಗರ್ ವಜಾಹತ್
ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಇಂತಹ ದಲಿತ ನಾಯಕರಿದ್ದರೆ ಆ ಜನ ಉದ್ಧಾರವಾಗುವುದೆಂದು?



ಸಾರ್ವಜನಿಕ ಲೈಬ್ರರಿಯೊಂದರಲ್ಲಿ ನಿಮ್ಮ ಪತ್ರಿಕೆ ಮೇಲೆ ಕಣ್ಣಾಡಿಸುತ್ತಿದ್ದಾಗ ಅದರಲ್ಲಿದ್ದ ಗಾಂಧಿ ಮತ್ತು ದಲಿತ ಪುಂಡಾಟ ಕುರಿತ ಲೇಖನಗಳು ಗಮನ ಸೆಳೆದವು. ಅದರಲ್ಲಿ ನನಗೆ ಹೆಚ್ಚು ಚಿಂತಿಸುವಂತೆ ಮಾಡಿದ್ದೆಂದರೆ ದಲಿತರು, ಬ್ರಾಹ್ಮಣರು ಮತ್ತು ಇತರರನ್ನು ಹೀಗೆಯೇ ಎಂದು ಲೇಬಲ್ ಮಾಡಿ ನೋಡುವ ಬಗ್ಗೆ. ಹಿಂದುಳಿದ ವರ್ಗಕ್ಕೆ ಸೇರಿದವನಾದ ನನಗೆ ಇದು ಹೆಚ್ಚು ಯೋಚಿಸುವಂತೆ ಮಾಡಿತು. ಯಾವುದೋ ನೆಪದಲ್ಲಿ ಬ್ರಾಹ್ಮಣರೆಲ್ಲರನ್ನೂ ಕೆಟ್ಟವರಂತೆ ಬಿಂಬಿಸುವುದಾಗಲೀ, ಇತರರನ್ನೂ ಹಾಗೇ ನೋಡುವುದರ ಜೊತೆಗೆ ದಲಿತರೆಲ್ಲರನ್ನೂ "ಪುಂಡಾಟ" ಇತ್ಯಾದಿ ಗೊತ್ತಿಲ್ಲದ ಅಪರಂಜಿಗಳೆಂದು ಲೇಬಲಿಂಗ್ ಮಾಡುವುದಾಗಲೀ ಸಮಂಜಸವಲ್ಲ.

ಕರಾವಳಿಯಲ್ಲಿ ನಡೆವ ಮತೀಯ ಗಲಭೆಗಳಲ್ಲಿ ಇನ್ವಾಲ್ವ್‌ಮೆಂಟ್ ಇರುವುದು ಹಿಂದುಳಿದ ಹಾಗು ದಲಿತ ಯುವಕ-ಯುವತಿಯರೇ ಹೆಚ್ಚು. ಹೆಣ್ಣುಮಕ್ಕಳ ಬದಲಾದ ಆಲೋಚನೆಯನ್ನೂ ಕೂಡ ಇಲ್ಲಿ ಕಡೆಗಣಿಸಲಾಗದು. ಇದಕ್ಕೆ ಎಬಿವಿಪಿ, ದುರ್ಗಾವಾಹಿನಿಯಂತ ಗುಂಪುಗಳಲ್ಲಿನ ಇಂಥಾ ಹೆಣ್ಣುಮಕ್ಕಳ ಹಾರಾಟ ಚೀರಾಟಗಳನ್ನು ನೋಡಬಹುದು. ಒಂದು ವೇಳೆ ದಲಿತರಿಗೆ ಪ್ರತ್ಯೇಕ ಮತದಾನ ವ್ಯವಸ್ಥೆ ಸಿಕ್ಕಿದರೆ ಅವಿನಾಶ್ ಹೇಳಿದಂತೆ ಮರ್ಕೂರು ಮತ್ತು ಅಂಗಾರಗಳಂತವರೇ ಹೆಚ್ಚು ಚಿಗಿತುಕೊಂಡು ಇಡೀ ದಲಿತ ವ್ಯವಸ್ಥೆಯನ್ನೇ ಹುಲಗೆಡಿಸಿಬಿಡುತ್ತಿದ್ದರು ಖಂಡಿತ. ಮಾಯಾವತಿಯಂತವರ ನೋಟಿನ ಹಾರ, ದುಂದುಗಾರಿಕೆಯ ಹುಟ್ಟುಹಬ್ಬ, ಮರ್ಕೂರು ಮೊದಲಾದವರ ಭ್ರಷ್ಟಾಚಾರ, ಸಾಮಾಜಿಕ ಕಾಳಜಿಗಿಂತ ರೋಲ್‌ಕಾಲ್‌ಗಳಿಗೆ ಪ್ರಾಮುಖ್ಯತೆ ನೀಡುವ ಕೆಲ ಸೋಕಾಲ್ಡ್ ದಲಿತ ಸಂಘಟನೆಗಳ ನಾಯಕರುಗಳಿಗಿಂತ ನನಗೆ ಅಂಗಾರರಗಳಂತವರ ಸಮಯಸಾಧಕತನ ದಲಿತರದ್ದೇ ಮಾಡುವ ತಣ್ಣನೆಯ ಹಾನಿಯೇ ಹೆಚ್ಚು ಅಪಾಯಕಾರಿಯೆಂದು ತೋರುತ್ತದೆ. ದಲಿತರದ್ದೇ ಮತದಾನ ಇತ್ಯಾದಿ ಬಂದಿದ್ದರೆ ಇಂಥವರು ವೈದಿಕರ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಈ ಮೂಲಕ ಸುಲಭದಲ್ಲಿ ದಲಿತರನ್ನು ಸಾಮೂಹಿಕವಾಗಿ ಹಾದಿ ತಪ್ಪಿಸುತ್ತಿದ್ದರು. ಇದು ಭ್ರಷ್ಟಾಚಾರಕ್ಕಿಂತ ಹೆಚ್ಚು ಅಪಾಯಕಾರಿಯಲ್ಲವೆ? ನಾನೇನು ಕಲ್ಪಿಸಿಕೊಂಡು ಇದನ್ನು ಹೇಳುತ್ತಿಲ್ಲ.

ಐದಾರು ಬಾರಿ ಅಷ್ಟೆ ಅಲ್ಲ, ಬಿಜೆಪಿ ವಾಶ್‌ಔಟಾದ ಕಳೆದ ಎಲೆಕ್ಷನ್‌ನಲ್ಲಿ ಗೆದ್ದು ಬಂದ ಕರಾವಳಿಯ ಪ್ರಭಾವಿ ಚೆಡ್ಡಿ ಶಾಸಕ ಅಂಗಾರನ ಆಡಳಿತ ಇರುವ ಕ್ಷೇತ್ರದಲ್ಲೇ ದಲಿತರ ಹಿತರಕ್ಷಣೆಗೆಂದು ಬಂದ ಶಿವರಾಮರ ಮೇಲೆ ಬಹಿರಂಗವಾಗಿ ಹಲ್ಲೆ ನಡೆದು ನಂತರ ಹಲ್ಲೆಕೋರರನ್ನು ಹೀರೋಗಳಂತೆ ಸನ್ಮಾನಿಸಲಾದ ನಾಚಿಕೆಗೇಡಿನ ಸಂಗತಿ ನಡೆದಿಲ್ಲವೇ? ಭಾರೀ ಚರ್ಚೆಗೊಳಗಾಗಿದ್ದ ಬ್ರಾಹ್ಮಣರ ಉಚ್ಚಿಷ್ಟದ ಮೇಲೆ ಹೊರಳಾಡುವ ಮಡೆಸ್ನಾನ ಜೀವಂತವಿರುವುದು ಈ ಅಂಗಾರನ 'ದಲಿತರಾಜ್ಯ'ದಲ್ಲೇ. ಅಲ್ಲಿನ ವಿದ್ಯಾಸಂಸ್ಥೆಗಳಲ್ಲಿ ಎಬಿವಿಪಿಗಳ ಮೆರೆದಾಟ, ಹಿಂದೂವಾದಿಗಳ ಹಾರಾಟ, ಅವುಗಳಲ್ಲಿ ದಲಿತರ ಮನಸ್ಫೂರ್ತಿ ಭಾಗವಹಿಸುವಿಕೆ ಇವೆಲ್ಲ ಇದೇ ಕಾರಣಕ್ಕೆ ತಾನೆ? ಇಂತವರಿಗೆ ಅಧಿಕಾರ ಸಿಕ್ಕರೆ ಅಂಬೇಡ್ಕರರ ಆಶಯಗಳಿಗೆ ವಿರುದ್ಧವಾಗಿ ದಲಿತ ಹಿತಾಸಕ್ತಿಯನ್ನು ಬೇಷರತ್ತಾಗಿ ವೈದಿಕರ ಪದತಲದಲ್ಲಿ ಒಪ್ಪಿಸಲು ಹಿಂಜರಿಯಲಾರರು. ಅಂಬೇಡ್ಕರರ ತತ್ವಗಳಿಗಿಂತ ಆರೆಸ್ಸೆಸ್ ತತ್ವಗಳಿಗೇ ಮಾನ್ಯತೆ ನೀಡುವ ಇಂತಹ ಸಮಯಸಾಧಕ ಶಾಸಕ ಕೆಲ ವರ್ಷದ ಹಿಂದೆ ಹೊಸನಗರದ ವಿವಾದಿತ ರಾಘವೇಶ್ವರ ಸ್ವಾಮಿಯನ್ನು ಮನೆಗೆ ಕರೆಸಿ ಅವರ ಪಾದಪೂಜೆಯನ್ನು ತನ್ನ ಮಹತ್ಸಾಧನೆಯೆಂಬಂತೆ ನೆರವೇರಿಸಿ ಧನ್ಯನಾಗಿದ್ದ.

ಇಲ್ಲಿ ಹೇಳಲಾದ ಅಂಗಾರ ಕೇವಲ ಒಂದು ನಿದರ್ಶನವಷ್ಟೇ. ದೇಶಾದ್ಯಂತ ಇಂತಹ ಲಕ್ಷಾಂತರ ಅಂಗಾರಗಳು ನಮಗೆ ಕಾಣಸಿಗುತ್ತಾರೆ ... ... ಸಾಮಾಜಿಕ ಅರಿವು, ಸ್ವಾಭಿಮಾನ ಜಾಗೃತವಾಗದೇ ... ... ಹಾಗೋಬಹುದೆ?

... ...


ಕಿಮ್ಸ್ ವ್ಯಾಪಂ ಮಾರ್ಗ ಹಿಡೀಬೇಕಿತ್ತು


ಶಿವರಾಜ ಚೌಹಾಣ್ ಸಾಹೇಬರು ಗೊತ್ತಿರಬೇಕಲ್ಲ, ಅದೇ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿ ರಾರಾಜಿಸ್ತಿರೋರು. ಅವರು ಅಲ್ಲಿ ಮುಖ್ಯಮಂತ್ರಿ ಅಂದ್ರೆ ಹಿಂಗಿರಬೇಕು ಅನ್ನೊ ಹಂಗೆ ಹೊಸ ಸಿಸ್ಟಂ ತಂದವ್ರಂತೆ. ಅದೇನಪ್ಪಾ ಅಂದ್ರೆ ಸರ್ಕಾರಿ ಉದ್ಯೋಗದ ಆಯ್ಕೆ ಪ್ರಕ್ರಿಯೆಯನ್ನ ಬೊಂಬಾಟಾಗಿ ಮಾಡವ್ರಂತೆ. ಎಲ್ಲಾ ವೈಜ್ಞಾನಿಕ ಅಂತೆ. ಸರ್ಕಾರದ ಕೆಲಸ ಅಂದ್ರೆ ದೇವರ ಕೆಲಸ ತಾನೆ. ಅದರ ಪೂಜೆ ಮಾಡೋರು ಅಡ್ನಾಡಿಗಳಾದ್ರೆ ಹೊಸ ಪೂಜಾರಿ ನಾಯಿ ತುಳಸಿ ಮುಟ್ಟಂಗೆ ಆಯ್ತದೆ. ಅದ್ಕೇ ಅಂತಹ ಕೆಲಸಗಳಿಗೆ ಲಗತ್ತಾದವರನ್ನೇ ಆಯ್ಕೆ ಮಾಡ್ತಾರಂತೆ. ಒಂದು ಪರೀಕ್ಷೇನೂ ಮಾಡಾರಂತೆ. ಅದ್ರಲಿ ಪಾಸೋದೋರ್ಗೆ ಮಾತ್ರ ಕೆಲಸ ಅಂತೆ. ಕೆಲವರು ಬುದ್ಧಿವಂತರಿದ್ದರೂ ಅವ್ರು ಪಾಸೇ ಆಗುತ್ತಿರಲಿಲ್ಲವಂತೆ. ಅಂತೋರ್ಗೂ ಒಂದು ದಾರಿ ತೋರ್ಸವ್ರಂತೆ. ಕೊಡಬೇಕಾದ ಕಡೆ ಕೇಳಿದಷ್ಟು ದುಡ್ಡು ಕೊಟ್ರೆ ಮುಗೀತಂತೆ. ಅವ್ರೆಲ್ಲಾನೂ ಸರಿಮಾಡ್ತರಂತೆ. ಪಾಸು ಅನ್ನೋದು ಗ್ಯಾರಂಟಿ ಅಂತೆ. ಪಾಸೇ ಆದ್ಮೇಲೆ ಕೆಲ್ಸಾನೂ ಸಲೀಸಾಗಿ ಬಂದು ಬುಟ್ಟಿಗೆ ಬೀಳ್ತದಂತೆ. ಕೆಲವು ಸರ್ಕಾರಿ ಹುದ್ದೆಗಳಿಗೆ ನಿರ್ದಿಷ್ಟ ಅರ್ಹತೆ ಇರಬೇಕಾಗ್ತದೆ. ಮಸಲಾ ಸರ್ಕಾರಿ ವೈದ್ಯರಾಗಬೇಕು ಅಂದ್ರೆ ಎಂಬಿಬಿಎಸ್ ಮಾಡಿರ್ಬೇಕು. ಅದೇನು ಹಂಗೇ ಬಂದತ್ತಾ, ಮೆಡಿಕಲ್ ಕಾಲೇಜು ಸೇರ್ಬೇಕು. ಅಲ್ಲಿ ಸೀಟು ತಗೋಳೋಕೂ ಪ್ರವೇಶ ಪರೀಕ್ಷೆ ಬರೀಬೇಕು. ಇದೆಲ್ಲ ರೇಜಿಗೆ ಕೆಲ್ಸ ಅನ್ನೋರ್ಗೆ ಅಲ್ಲೂ ಸಲೀಸು ಮಾಡವ್ರಂತೆ. ಅಲ್ಲೂ 'ಪಾಟೀಲ ಸಿಸ್ಟಂ' ಇದೆಯಂತೆ. ದುಡ್ಡು ಕೊಟ್ಟರೆ ಮುಗೀತು. ನಿಮ್ಮ ಪಾಸು ಸೀಟು ಎಲ್ಲ ಆಗ್ತದಂತೆ. ಪರೀಕ್ಷೆ ಅಂದ್ರೇ ಏಳರ ಜ್ವರ ಬಂದೋರಂಗೆ ನಡುಗೋರ ಕಂಡು ಪಾಟೀಲ ಸಾಹೇಬರ ಕರುಳು ಚುರುಕ್ ಅಂತಂತೆ. ಅವರ ಸಂಕಟ ನೋಡಲಾಗದೆ 'ಪಾಟೀಲ ಸಿಸ್ಟಂ' ಜಾರಿಗೆ ತಂದ್ರಂತೆ! ಹೃದಯವಂತಿಕೆ ಅಂದ್ರೆ ಇದು ಅಲ್ವಾ....!

ಇಂತಹ ಅದ್ಭುತ ಪದ್ಧತಿಯನ್ನು ಜಾರಿಗೆ ತಂದ ಶಿವರಾಜ ಚೌಹಾಣ್‌ರನ್ನು ಜನರು ತಾರೀಫು ಮಾಡಬೇಕಿತ್ತು, ಅಹಹಾ ಇಂತಹ ಸುಲಿದ ಬಾಳೆಹಣ್ಣಿನಂತಹ ಸೂತ್ರ ಅಳವಡಿಸಿದಾರಲ್ಲ ಅಂತ ಖುಷಿಯಿಂದ ಕುಣೀಬೇಕಿತ್ತು. ಆದರೆ ಇದ್ಯಾವುದೂ ಆಗ್ಲೇ ಇಲ್ವಂತೆ. ಒಳ್ಳೆಯ ಕೆಲಸಕ್ಕೆ ಕಲ್ಲು ಹಾಕೋರು ಎಲ್ಲಾ ಕಡೆ ಇದ್ದಂಗೇ ಅಲ್ಲೂ ಇದ್ದಾರಂತೆ. ಮಾಡೋಕೆ ಕೆಲಸವಿಲ್ಲದೋವು ಅದೇನೋ ಮಾಹಿತಿಹಕ್ಕು ಕಾಯ್ದೆ ಅಂತಾ ಇದ್ದತ್ತಂತಲ್ಲ, ಅದ ತಬ್ಕೊಂಡವಂತೆ. ಪರೀಕ್ಷೆ ಪಾಸು ಮಾಡೋಕಾಗದೆ ಬುದ್ಧಿವಂತರೆಲ್ಲ ಹಾಳಾಗ್ತ ಅವ್ರಲ್ಲ ಅಂತ ಅವ್ರೊಂದು ದಾರಿ ತೋರ್ಸನ ಅಂತ ಹೋದದ್ಕೆ ಭ್ರಷ್ಟಾಚಾರದ ಗೂಬೆ ಕೂರುಸ್ತಾ ಅವ್ರಂತೆ. ಅಲ್ಲಿನ ಕಾಂಗ್ರೆಸ್‌ನೋವು ಇದ್ವಲ್ಲಾ... ಏನೂ ಕೆಲಸವಿಲ್ದೆ ಎಲ್ಲ ತುಕ್ಕು ಹಿಡ್ದು ಕುಂತಿದ್ದೊ. ಈಗ ಇದು ಸಿಕ್ತಲ್ಲಾ ಅದಕ್ಕೆ 'ವ್ಯಾಪಂ ಹಗರಣ' ಅಂತ ನಾಮಕರಣ ಮಾಡಿ, ಶಿವರಾಜ ಚೌಹಾಣ್ ರಾಜೀನಾಮೆ ಕೊಡಿ ಅಂತ ಅರುಚಾಡ್ತಾ ಬಿದ್ದವಂತೆ. ಅಲ್ಲ ಕಣ್ರೀ ಗೌರ್ನರೂ ಅಂತ ಇದಾರಲ್ಲ ಅದೇ ರಾಮ್‌ನರೇಶ್ ಯಾದವ್ ಸಾಹೇಬರು, ಅವರಿರೋದೋ ನಡೀಬಾರದ್ದು ನಡೆದ್ರೆ ಅದ ತಿದ್ದಿ ಬುದ್ಧಿ ಹೇಳೋಕೆ. ಅದ್ನೂ ಬಗ್ಗದೇ ಹೋದ್ರೆ ಈ ತರಕ ಈ ತರ ನಡೀತಾ ಅದೆ ಅಂತ ಕೇಂದ್ರಕ್ಕೆ ವರದಿ ಸಲ್ಲಿಸೋಕೆ. ಅವ್ರೇ ಸುಮ್ಮನಿರಬೇಕಾದ್ರೆ ಎಲ್ಲಾ ಸರಿಯಾಗೇ ಇದೆ ಎಂದು ಅರ್ಥ ಅಲ್ಲವೇನ್ರಿ ಅಂತ ಕೇಳಿದ್ರೆ ಮುಖ್ಯಮಂತ್ರೀನೂ ಗೌರ್ನರೂ ಒಳೊಳಗೆ ಶಾಮೀಲಾಗಿ ಲೂಟಿ ಹೊಡೀತಾ ಅವ್ರೆ ಅಂತಾರಂತೆ. ಗೌರ್ನರೂ ಕಾಂಗ್ರೆಸಿನೋರು, ಅಂದ್ರೆ ನಿಮ್ಮೋರೆ ಅಲ್ಲವೇನ್ರಿ? 'ನಾ ಖಾವ್ರೂಂಗೂ ನಾ ಖಾನೆ ದೂಂಗಾ' ಅನ್ನೋ ಮೋದಿ ಸಾಹೇಬ್ರು ಅಧಿಕಾರಕ್ಕೆ ಬಂದಮೇಲೆ ಎಲ್ಲಾ ಗೌರ್ನರುಗಳನ್ನು ಕಿತ್ತು ಬಿಸಾಕಿದರೂ ಇವರೊಬ್ಬರನ್ನು ಮಾತ್ರ ಹಂಗೇ ಉಳಿಸಿಕೊಂಡವ್ರೆ. ಅಂದಮೇಲೆ ನಿಯತ್ತಾದ ಆಸಾಮಿ ಅಂದಂಗಾಯ್ತಲ್ವ ಅಂದ್ರೆ ಹುಟ್ಟಾಗ ವಿಶ್ವಮಾನವ ಆಗಿದ್ದೋರು ಬೆಳೀತಾ ಬೆಳೀತಾ ಅಲ್ಪ ಮಾನವರಾಗ್ತಾರಲ್ಲ ಹಂಗೇ ಇವ್ರು ಕಾಂಗ್ರೆಸ್ ಆಗಿದ್ದೋರು ಈಗ ಭಾಜಪ ಆಗವ್ರೆ ಅಂತಾರಂತೆ. ಶಿವ ಶಿವಾ ಹಿಂಗೂ ಉಂಟಾ....

ಮುಖ್ಯಮಂತ್ರಿಯವರ ಯುವ ಜನಾಂಗದಾತಂಕ ಪರಿಹಾರೋಪಾಯದ ಪ್ರಯೋಜನ ಪಡೆಯಲಾರದವರೆಲ್ಲ ಅಂದ್ರೆ ಕಾಸು ಕೊಡೋಕೆ ತಾಕತ್ತಿದ್ದೋವ್ರು ಕಾಸಿದ್ರೂ ಕೊಡಲಾರದ ಜಿಪುಣ ಮುಂಡೆವ್ರು ಇಂತೋವೆಲ್ಲ ಪಾಟೀಲರ ವಿರೋಧ ಗುಂಪಿಗೆ ಸೇರ್ತಾ ಅವಂತೆ. ಹಿಂಗಾಗಿ ಏನಾಗದೆ ಈ ಗುಂಪು ಬರ್ತಾ ಬರ್ತಾ ಬಡಾಯಿಸ್ತಾ ಇದೆಯಂತೆ. ವ್ಯಾಪಂ ಹಗರಣದ ಹೊಣೆ ಹೊತ್ತು ಶಿವರಾಜ ಚೌಹಾಣ್ ರಾಜೀನಾಮೆ ನೀಡಲಿ ಅಂತೆಲ್ಲಾ ಕೂಗಾಡ್ತಾ ಅವರಂತೆ. ಮುಖ್ಯಮಂತ್ರಿಯಾದೋರೇನು ಇಷ್ಟಕ್ಕೆಲ್ಲ ತರಗುಟ್ಟೋದಾರ. ಹಿಂಗೆ ಕೂಗಾಡೋರ ಹಾರಾಡೋರ ಅವ್ರೇನು ಕಾಣರ. ತನಿಖಾ ತಂಡ ಅಂತ ಒಂದು ನೇಮಿಸ್ತೀನಿ ಅಂದ್ರೆ, ಅದರ ಪುಂಗಿನಾದಕ್ಕೆ ಮರುಳಾಗ್ತವೆ ಅನ್ನೋದು ಅವರಿಗೆ ತಿಳೀದಾ. ಹಂಗೇ ಅಂದ್ರಂತೆ. ಮಾಡಿಯೂ ಮಾಡಿದ್ರಂತೆ. ಈ ವಿಶೇಷ ತನಿಖಾ ತಂಡ ಅದಲ್ಲ ಅದು ಹಂಗ್ಮಾಡಿ ಹಿಂಗ್ಮಾಡಿ ಕ್ಲೀನ್‌ಚಿಟ್ ಕೊಟ್ಬುಡಾನ ಅಂತಾವೆ ಇತ್ತಂತೆ. ಆದರೆ ಅಲ್ಲೇನಾಗಿತ್ತು ಅಂದ್ರೆ ಬೇಕಾಬಿಟ್ಟ ಕೈಹಾಕಿದ್ಕೆ ಹ್ಯಾವಿನ ಬಿಲಕ್ಕೆ ಕೈಹಾಕಿದಂಗೆ ಆಯ್ತಂತೆ. ಅದು ಯಾರಾರ ಮನೆ ಬಾಗಿಲಿಗೋ ಹೋಯ್ತಾ ಇತ್ತಂತೆ. ಸಾವಿರಾರು ಜನ ತಗುಲಾಕಿ ಕೊಂಡ್ರಂತೆ. ಇದು ತಿಳೀತಿದ್ದಂಗೆ ಜನಾದ ಜನ ಎಲ್ಲಿ ಅರೆರೆ ಇದೇನಪ್ಪ ಇದು ಹಿಂಗಾಯ್ತ ಬಿದ್ದದಲ್ಲ ಅಂತ ಬೆಕ್ಕಸಬೆರಗಾಗಿ ಕಣ್ಣುಬಾಯಿ ಬಿಟ್ಟುಕೊಂಡು ನೋಡುತ್ತಿರುವ ಮುಂದಕ್ಕೆ ಏನಾಯ್ತು ಅಂದ್ರೆ.....

ಮಧ್ಯಪ್ರದೇಶದಲ್ಲಿ ಅಪಘಾತ, ಅಸಹಜ ಸಾವಿನ ಸರಣೀನೆ ಆಯಿತ್ತದ್ದತಂತೆ. ಅಲ್ಲ ಇವು ಎಲ್ಲಿ ಆಗೋಲ್ಲ ಹೇಳಿ. ಎಲ್ಲಾ ಕಡೇನೂ ಆದಂಗೆ ಇಲ್ಲೂ ಆಗವೆ. ಕೇಮಿಲ್ದೆ ಕುಣೀತಾ ಇದ್ವಲ್ಲ ಅವ್ರು ಇವ್ನೆಲ್ಲ ವ್ಯಾಪಂ ಸಾವು ಅಂತ ಗುಲ್ಲೆಬ್ಬಿಸವಂತೆ. ಯಾರ ಬಾಯಲಿ ಕೇಳಿದ್ರೂ ಇದೇ ಬರಂಗೆ ಮಾಡ್ತಾಬಿದ್ದವ್ರಂತೆ. ಅದೆಂಗ್ರೀ ಹೇಳ್ತೀರಿ ಸತ್ತೋರೆಲ್ಲ ವ್ಯಾಪಂನಿಂದಲೇ ಸತ್ತವ್ರೆ ಅಂತಾವ ಕೇಳಿದ್ರೆ ಹಿಂಗೆ ಅಸಹಜ ಸಾವಿಗೆ ತುತ್ತಾದೋರೆಲ್ಲ ವ್ಯಾಪಂ ಗಿರಾಕಿಗಳು ಅಂತರಂತೆ. ಸುಮಾರು ನಲವತ್ತು ಐವತ್ತು ಜನ ಹಿಂಗೆ ಶಿವನ ಪಾದ ಸೇರವ್ರಂತೆ. ಅಲ್ಲಿನ ಪೊಲೀಸ್ನೋರ ಕೇಳಿದ್ರೆ ಅವ್ರು ಇದೆಲ್ಲ ಸುಳ್ಳು. ಅವರು ಹೇಳೋದ್ರಲಿ ಉಪ್ಪು ಹುಳಿ ಖಾರ ಒಂದೂ ಇಲ್ಲ ಅಂತಾರಂತೆ. ಇವರ ನಂಬಿಕೊಂಡ್ರೆ ಸತ್ಯ ಬಯಲಾಗಲ್ಲ ಅಂತವ ಇದ ಸಿಬಿಐಗೊಪ್ಪಿಸಿ ಅಂತ ಭಾರೀ ಜನ ಅಂತಾರಂತೆ. ಸಿಬಿಐ ಅಂದ್ರೆ ಸಾಮಾನ್ಯವಾ ಎಂತೆಂತ ಬಲವಾದ ಕೇಸುಗಳ್ನೇ ಮಠ ಹತ್ತಿಸಿರೋರು ಅನ್ನೋದ ಮುಖ್ಯಮಂತ್ರಿಯೋರು ಕಾಣ್ರಾ. ಅಂತಹವುಗಳ ಮುಂದೆ ಇದು ಏನೇನೂ ಅಲ್ಲ, ಅಲ್ಲದೆ ಕೇಂದ್ರದಲ್ಲಿರೋರು ನಮ್ಮ ಪಕ್ಷದೋರೇಯ. ಅದ ಹೆಂಗೆಬೇಕೋ ಹಂಗೆ ತಿರುಗುಸ್ತಾರೆ ಅನ್ನೋ ಧೈರ್ಯ ಮುಖ್ಯಮಂತ್ರಿಯೋರ್ಗೆ. ಹಂಗೇ ಆಗ್ಲಿ ಸಿಬಿಐ ತನಿಖೇನೆ ಆಗ್ಲಿ ಅಂತ ಅಂದ್ರಂತೆ. ರಾಜ್ಯ ಪೊಲೀಸ್ನೋರು ತಿಪ್ಪೆ ಸಾರಿಸುವುದರ ಬದಲು ಸಿಬಿಐ ಸಾರುತ್ತಾರೆ ಅಷ್ಟೇಯ ಆಗೋದು. ಇರಲಿ ಬಿಡಿ.






ಆ ರಾಜ್ಯದಲ್ಲಿ ಹಿಂಗೆಲ್ಲ ಆಗದಲ್ಲ ಅಂತ ಯೋಚಿಸ್ತಿದ್ದಂಗೆ ನಮ್ಮ 'ಕಿಮ್ಸ್' ಮಾಧ್ಯಮಗಳಲ್ಲಿ ರಾರಾಜಿಸಿತು. ಈ ಕಿಮ್ಸ್ ಇದೆಯಲ್ಲ ಅದು ರಾಜ್ಯ ಒಕ್ಕಲಿಗರ ಸಂಘದ ಅಂಗ ಸಂಸ್ಥೆ. ಆ ಸಂಘಕ್ಕೆ ಸೇರಿದ್ದು ಅಂದ್ರೆ ಹುಡುಗಾಟವಾ, ಭಾರಿಭಾರೀ ಕುಳಗಳ ಸಂಘ ಅದು. ಒಕ್ಕಲಿಗ ಜನಾಂಗದ ಘನತೆ, ಗೌರವ ಎತ್ತಿ ಹಿಡಿಯೋಕೆ ಇರೋ ಸಂಘಟನೆ ಅಂದ್ಮೇಲೆ ಅದರ ನಿರ್ದೇಶಕರುಗಳು ಅಂದ್ರೆ ಸುಮ್ಮನೆ ಆಗಲಿಲ್ಲ, ಅವ್ರೂ ಅದಕ್ಕೆ ತಕ್ಕನಾಗೇ ಇರಬೇಕಾಯ್ತದೆ. ಅನ್ಯಾಯದ ಮಾತ ಆಡಬಾರದು. ಪಾಪ ಅವ್ರೂ ಹಂಗೇ ಇರಾಕೆ ಒದ್ದಾಡ್ತಾರಂತೆ. ಜನಾಂಗದ ಸೇವೆ, ಸಮುದಾಯದ ಸೇವೆ ಮಾಡಬೇಕೂಂತ್ಲೆ ಇರ್ತಾರಂತೆ. ಆದ್ರೇನು ಮಾಡ್ತೀರಿ. ಈ ಹಾಳಾದ ಅವರ ಸಮುದಾಯ ಅದಲ್ಲ ಅದೇ ಸರಿಯಿಲ್ಲ, ನಿರ್ದೇಶಕನಾಗಿ ಆಯ್ಕೆ ಆಗಬೇಕಾದ್ರೆ ಲಕ್ಷ ಕಂಡಿರಿ, ಕೋಟಿ ಹಣ ಪೀಕಬೇಕಾಯ್ತದೆ. ಅಲ್ಲಿ ಚೆಲ್ಲಿರೋದ ಎಲ್ಲಾದ್ರೂ ಎತ್ಕೋಬೇಕಾದ್ದು ನ್ಯಾಯವೇ ಅಲ್ಲವಾ. ಅದ್ಕೆ ಏನು ಮಾಡ್ತಾರೆ ಅಂದ್ರೆ, ಕಾಲೇಜುಗಳ ಸೀಟುಗಳನ್ನ ಅವರವ್ರಲ್ಲೇ ಹಂಚಿಕೊಳ್ತಾರೆ. ಅಧ್ಯಕ್ಷರು ಅಂತ ಇರ್ತಾರಲ್ಲ, ಅವರು ಜನಾಂಗದ ಸೇವೆಯನ್ನ ಇವರೆಲ್ಲರಿಗಿಂತಲೂ ಹೆಚ್ಚಿಗೆ ಮಾಡೋರು ಅಂತ ತಾನೆ ಅರ್ಥ. ಇಂತಹ ಸೇವೆ ಮಾಡುವ ಸ್ಥಾನಕ್ಕೇರಲು ಪಡಬಾರದ ಕಷ್ಟ ಪಟ್ಟಿರ್ತಾರೆ. ಮಳೆಗಾಲದ ಹೊಳೀಲಿ ನೀರು ಹರ್ದಂಗೆ ದುಡ್ಡು ಹರಿದೋಗಿರ್ದ... ನಿರ್ದೇಶಕರುಗಳೂ ಧರ್ಮಕರ್ಮ ನೋಡೋರೇಯ. ಅಧ್ಯ... ಸ್ಥಾನದಲ್ಲಿರೋರ ಕಷ್ಟ ಕಂಡೋರೇಯ. ಅವರಿಗೆ ಲಾಸ... ಆಗಬಾರ್ದು ಅಂತ ಅದಕ್ಕೆ ತಕ್ಕಂತೆ ಸೀಟು ಬಿಟ್ಟುಕೊಡ್ತಾ... ಒಟ್ಟನಲ್ಲಿ ಹೆಂಗೋ ಕುವೆಂಪು ಹೇಳಿದಂಗೆ 'ಸರ್ವರಿ... ಸಮಪಾಲು' ಮಾಡ್ಕೊಂಡು ಜನಾಂಗದ ಸೇವೆ ಮಾಡ... ಅವ್ರೆ!

ಇಲ್ಲೀವರ್ಗೂ ಹೆಂಗೋ ನಡ್ಕೊಂಡು ಬರ್ತಿತ್ತಲ್ಲ... ಈಗೇನಾಗದೆ ನಿಗದಿತ ಸಂಖ್ಯೆಗಿಂತ ಹೆಚ್ಚಿಗೆ ಅಭ್ಯರ್ಥಿಗಳನ್ನ... ಮೆಡಿಕಲ್ ಕಾಲೇಜಿಗೆ ಸೇರಿಸಿಕೊಂಡು ಬಿಟ್ಟವ್ರೆ. ಇದೇನ... ಅವರಿಗೆ ಹೊಸದಲ್ಲ ಅನ್ನಿ. ಹೀಗೆ ಮಾಡಿದಾಗ ಯಾರಾ... ಬಾಯಿಗೆ ಎಷ್ಟೆಷ್ಟು ಎಸೀಬೇಕೋ ಎಸ್ದು ಅಕ್ರಮಸಕ್ರ... ಮಾಡಿಕೊಳ್ತಿದ್ರು. ಅಪ್ಪಿತಪ್ಪಿ ಅಲ್ಲಿ ಕೈಕೊಡ್ತು ಅನ... ಅಭ್ಯರ್ಥಿಗೇ ಕೋರ್ಟಿಗೋಗು ಅಂತ ಮಾರ್ಗದರ್ಶ... ನೀಡುತ್ತಿದ್ದರು. ಅವರು ಹಂಗೇ ಮಾಡುತ್ತಿದ್ದರ... ನ್ಯಾಯಾಧೀಶರು ನ್ಯಾಯ ಒದಗಿಸಬೇಕಲ್ವಾ, ಆಗ ದುತ್ತ... ಅಭ್ಯರ್ಥಿಯ ಭವಿಷ್ಯ ಎದುರುಬರ್ತಿತ್ತು, ಅಯ್ಯೋ ಪಾ... ಪರೀಕ್ಷೆಗೆ ಕುಳ್ಳರಿಸದೇ ಹೋದ್ರೆ ಒಂದು ವರ್ಷ ಹಾಳಾಗ್ತ... ಇದು ಆಗಬಾರದು ಅಂತಾವ ಪರೀಕ್ಷೆ ತೆಗೆದುಕೊಳ್ಳಲ... ಅವಕಾಶ ನೀಡುವಂತೆ ನಿರ್ದೇಶಿಸುತ್ತಿದ್ರು. ಹೊಲಸಿನ ಮೇ... ಸುಗಂಧ ಚೆಲ್ದಂತ ನಿರ್ದೇಶನಕ್ಕೆ ಸರ್ವರಿಗ... ಸಮ್ಮತವಾಗಿರ್ತಿತ್ತು. ಈ ವರ್ಷಾನೂ ಇದೇ ಪ್ರಯೋ... ಮಾಡವ್ರೇ. ಅದೇನು ಕೊಡೋದು ಸರಿಯಾಗಿ ಕೊಡಲಿಲ್ಲವ... ಅಥವಾ ಕಟ್ಟುನಿಟ್ಟಾಗಿ ಕಾನೂನು ಪರಿಪಾಲಿಸೋರೆ ಅ... ಕುಂತಿದ್ರೋ ಗೊತ್ತಿಲ್ಲ, ಎಂಸಿಐ, ವಿಶ್ವವಿದ್ಯಾಲಯ ಹೆಚ್ಚಿ... ಸೀಟುಗಳಿಗೆ ಸಮ್ಮತಿಸಲಿಲ್ಲ, ಇವು ಆಗಲ್ಲ ಅಂದ್ರೇನಾಯ... ನ್ಯಾಯಾಲಯ ಅಂತ ಇದ್ದೇ ಇದೆಯಲ್ಲ, ಅ... ಮಾನವೀಯತೆ ಆಧಾರದ ಮೇಲೆ ಒಪ್ಗೆ ಸಿಕ್ಕೇ ಸಿಕ್ತ... ಅಂತಾವ ಅಭ್ಯರ್ಥಿಗಳಿಗೆ ಹೋಗಿ ಕೋರ್ಟಿಗೆ ಅಂದ... ಕೋರ್ಟಿಗೆ ಹೋಗೋದು ಹೋದ್ರಲ್ಲ, ಹಾಳಾದೋ... ಮಾಮೂಲಿನಂತೆ ನಮಗೆ ತೊಂದರೆ ಆಗಿದೆ, ತರಗತಿ... ಮುಂದುವರಿಯಲು ಅವಕಾಶ ನೀಡಿಸಿ ಅಂದಿದ್ರೆ ಆಗ್ತಿ... ಅದನ್ನು ಬಿಟ್ಟು ಅವೇನು ಮಾಡವೆ ಕಾಲೇಜಿನ ಫೀ... ಅಂತ ಇಷ್ಟು ಕೊಟ್ಟೆ: ಕಟ್ಟಡ ಅಭಿವೃದ್ಧಿ ನಿಧಿ ಅಂ... ಇಷ್ಟು ಕೊಟ್ಟೆ. ಇಂತಿಂತಹ ನಿರ್ದೇಶಕರುಗಳಿಗೆ ಇಷ್ಟಿ... ಕೊಟ್ಟೊ ಅಂತೆಲ್ಲ ಬೊಗಳವೆ. ಇದೆಲ್ಲ ಕೇಳಿ... ನ್ಯಾಯಾಧೀಶರು ಇದೇನು ಶಿಕ್ಷಣ ಸಂಸ್ಥೆಯೋ ಮಾರ... ಮಳಿಗೆಯೋ ಅಂತ ದಿಗ್ಭ್ರಮೆ ವ್ಯಕ್ತಪಡಿಸಿದರು ಅ... ಪೇಪರಲ್ಲಿ ಬರ್ದವ್ರೆ... ಹಿಂಗೆಲ್ಲ ಮಾಡವ್ರಲ್ಲಾಂತ ದಂಡಾ... ಹಾಕವ್ರೆ..... ಅಯ್ಯೋ ದಂಡದ್ದೇನು ದೊಡ್ಡ ವಿಷ್ಯ... ಬಿಡಿ. ಪದಾಧಿಕಾರಿಗಳ ಮನೆಯಿಂದೇನೂ ತರ... ಕೊಡಬೇಕಾಗಿಲ್ವಲ್ಲ... ಸಂಘದ ದುಡ್ಡು ಕೊಡ್ತಾರೆ. ಅ... ಇನ್ನು ಅದೇನೋ ಇಂತಿಂತ ನಿರ್ದೇಶಕರಿಗೆ ಇಷ್ಟಿ... ಕೊಟ್ಟೆ ಅಂತ ಹೇಳವ್ರಲ್ಲಿ ಅದೆಲ್ಲ ಅಪ್ಪಟ ಸುಳ್ಳಂತೆ ಕ... ನಿರ್ದೇಶಕರುಗಳು ಇದಾರಲ್ಲ ಅವ್ರೆಲ್ಲ ಅಪ್ಪಟ ಚಿನ್ನವ... ಸಮುದಾಯದ ಏಳ್ಗೆಗೆ, ಅದರ ಘನತ... ಕಂಕಣಬದ್ಧರಾಗಿರೋರಂತೆ. ಅವ್ರು ಆ ದುಡ್ಡ... ಮುಟ್ಟೋದಿಲ್ಲ ಕಣ್ಣಲ್ಲೂ ನೋಡಲ್ವಂತೆ. ಹಂಗಂತ ಸಂಘ... ಹೇಳ್ತಾಬಿದ್ದದೆ. ಇದು ಜನಾಂಗದ ಮರ್ಯಾದೆ ಉಳಿಸೊ... ಅಂದ್ರೆ!

ಅಲ್ಲಾ ನನಗೊಂದು ಯೋಚನೆ. ಒಕ್ಕಲಿಗರ ಸ... ಅಂದ್ರೆ ಸುಮ್ಮನೇ ಆಗಲಿಲ್ಲ, ಅದು ಎಂತೆಂತಹ... ಇಟ್ಟಿಲ್ಲ. ಸತ್ಯಸಂಧ, ಸಮಾಜ ಸೇವೆ ಇಂತಹ... ಹಳಸಲಾಗಿರೋ ಪದಗಳು. ಜನ ನಂಬಲ್ಲ, ಇಂತ... ಹೇಳ್ತಾ ಬಾಯಿ ನೋಯಿಸಿ ಕೊಳ್ಳೋದರ ಬದಲು ವ... ಮಾರ್ಗ ಹಿಡ್ದು ಕೋರ್ಟಿಗೆ ಹೋದೋರ ಹ... ಮುಗಿಸಿದ್ರೆ ವ್ಯವಹಾರ ಅಲ್ಲೇ ಫೈನಲ್ ಆಗ್ತಿತ್ತೇನೋ... ಹಿಂಗೆ ಮಾಡಿದ್ರೆ ಅದು ಒಕ್ಕಲಿಗ ಜನಾಂಗದ ಘ... ತಕ್ಕುದಾಗಿರುತ್ತಿತ್ತು, ಗೌಡಿಕೆ ಗತ್ತಿಗೆ ಒಪ್ಪುವಂತಿತ್ತು ಅಲ್ವ...

■ ಎಚ...




ಯೋಗೇಶ್ ಮಾಸ್ಟರ್


ಪುರಾಣದ ಹೂರಣ

ಬುದ್ಧ ಶಕೆ

ರಾಕ್ಷಸರ ತಪಸ್ಸುಗಳು

ರಾಕ್ಷಸರು ತಪಸ್ಸಿನಲ್ಲಿ ನಿರತರಾಗಿರುತ್ತಿದ್ದಾಗ ಇಂದ್ರನಿಗೆ ತನ್ನ ದೇವಪದವಿ ಕಳೆದುಹೋಗುವುದೆಂದು ಭಯವಾಗುವುದು. ಅದಕ್ಕಾಗಿ ಅವನು ತಪಸ್ಸನ್ನು ಕೆಡಿಸಲು ರಂಭೆ, ಊರ್ವಶಿ, ಮೇನಕೆಯರಂತಹ ನರ್ತಕಿಯರನ್ನು ಕಳುಹಿಸುವುದು, ಹವಾಮಾನದಲ್ಲಿ ವೈಪರೀತ್ಯಗಳನ್ನು ಸೃಷ್ಟಿಸಿ ಜೋರು ಮಳೆ, ಉರಿ ಬಿಸಿಲು, ಬೆಂಕಿ ಇತ್ಯಾದಿಗಳನ್ನು ಉಂಟುಮಾಡಿ ಅವರು ಗಟ್ಟಿಗರು ಎಂದು ಮನವರಿಕೆ ಮಾಡಿಕೊಳ್ಳುವುದು. ಕೊನೆಗೆ ಬ್ರಹ್ಮ ಅಥವಾ ಶಿವ ಪ್ರತ್ಯಕ್ಷವಾಗಿ "ಕಂದಾ ನಿನಗೇನು ಬೇಕು" ಎಂದು ಕೇಳುವ





ಜೊತೆಗೆ, ಇವರಿಗೆ ನಾಲಿಗೆಯನ್ನು ತಿರುಚುವ ಪ್ರಯತ್ನವಾದರೂ ಮಾಡಿ, ಒಟ್ಟಾರೆ ತಪಸ್ಸು ಮಾಡಿದ ಅಸುರನ ತಪಸ್ಸಿನ ಉದ್ದೇಶವು ನೆರವೇರದಂತೆ ನೋಡಿಕೊಳ್ಳುವುದು ದೇವತೆಯಾದ ಯಾರೇ ಆಗಲಿ, ಅದರಲ್ಲಿಯೂ ಇಂದ್ರನ ಕಡ್ಡಾಯ ಪದವಿ ಧರ್ಮವಾಗಿತ್ತು.

ಈ ರಾಕ್ಷಸರು ಕೇಳುತ್ತಿದ್ದ ವರಗಳಾದರೂ ಏನೆಂದರೆ, ಸಾವಿಲ್ಲದೇ ಇರುವಂತಹ ಅಮರತ್ವದ ವರ. ಇನ್ನು ಇವರು ಈ ವರವನ್ನು ಪಡೆದುಕೊಂಡುಬಿಟ್ಟರೆ ಗತಿ ಏನು? ಅಸುರರು ಅಮರರಾಗಿಬಿಟ್ಟರೆ ದುಷ್ಟತನವೇ ಗೆದ್ದು, ಈ ಪ್ರಪಂಚದಲ್ಲಿ ಅವರದೇ ಮೇಲುಗೈಯಾಗಿ, ಧರ್ಮವು ಇನ್ನಿಲ್ಲದಂತೆ ನಶಿಸಿಹೋಗುವುದಲ್ಲಾ ಎಂಬ ಧರ್ಮಕಾರಣದಿಂದ ದೇವತೆಗಳು ತಂತ್ರಗಳನ್ನು ಹೂಡುತ್ತಿದ್ದರು.

ಇಲ್ಲಿ ಒಂದು ಸೂಕ್ಷ್ಮವಾದ ವಿಚಾರಕ್ಕೆ ಬರೋಣ.

ಋಗ್ವೇದದ ವೈದಿಕರಲ್ಲಿ ಅಥವಾ ವೇದಕಾಲದ ಕೃತಿಗಳಲ್ಲಿ ಲೌಕಿಕ ಅಭಿಲಾಷೆಗಳು, ಭೌತಿಕ ಹಿತಾಸಕ್ತಿಗಳ ಕೋರಿಕೆಗಳು ಬಿಟ್ಟರೆ ಇನ್ನಾವ ಧ್ವನಿಯೂ ಇರಲಿಲ್ಲ. ಆತ್ಮಜ್ಞಾನ, ಬ್ರಹ್ಮಜ್ಞಾನ ಇತ್ಯಾದಿ ಅಪರೋಕ್ಷಾನುಭೂತಿಗಳೆಲ್ಲಾ ನಂತರದವು. ಎಷ್ಟು ನಂತರದವು ಎಂದು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಉಪನಿಷತ್ತಿನ ಕಾಲಾನಂತರದವು. ಹಾಗೆಂದು ಉಪನಿಷತ್ತಿನ ಕಾಲದ ಪರಿಮಿತಿಯನ್ನೂ ಗೆರೆ ಎಳೆದು ನಿರ್ಣಯಿಸಲಾಗದು. ವೇದಜ್ಞಾನವನ್ನು ವಿಮರ್ಶಿಸುವಂತಹ ಧ್ವನಿಗಳಾಗಿಯೂ, ಜಿಜ್ಞಾಸೆಗಳ ರೂಪಿಯಾಗಿಯೂ ಉಪನಿಷತ್ತುಗಳು ಅನೇಕ ಕಾಲಘಟ್ಟಗಳಲ್ಲಿ ಅನೇಕಾನೇಕರಿಂದ, ಅದೆಷ್ಟೋ ಸ್ಥಳಗಳಲ್ಲಿ ರಚಿತವಾಗುತ್ತಲೇ ಇದ್ದವು. ಬುದ್ಧನ ಕಾಲದ ಹಿಂದೆಯೂ, ಬುದ್ಧನ ಸಮಯದಲ್ಲಿಯೂ, ಬುದ್ಧನ ನಂತರವೂ ರಚನೆಗಳ ಕಾರ್ಯ ಆಗುತ್ತಲೇ ಬಂದಿತು.

ನಮ್ಮ ಭಾರತೀಯ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾಲವನ್ನು ಬುದ್ಧ ಪೂರ್ವ ಮತ್ತು ಬುದ್ಧ ನಂತರ ಎಂದು ವಿಭಾಗಿಸುವ ಅಗತ್ಯ ಬರುತ್ತದೆ.

ಬುದ್ಧ ಪೂರ್ವ ಮತ್ತು ಬುದ್ಧ ಶಕೆ

ಬುದ್ಧಪೂರ್ವದ ವಿದ್ಯಮಾನಗಳು ಮತ್ತು ವಿಷಯಗಳು ಹಾಗೂ ಬುದ್ಧಾನಂತರದ ವಿದ್ಯಮಾನಗಳು ಮತ್ತು ವಿಷಯವಿಸ್ತರಣೆಗಳು ಬಹಳ ಗಮನೀಯವಾಗುತ್ತದೆ. ಕ್ರಿಸ್ತನ ಮರಣಾನಂತರದ ಕಾಲವನ್ನು ಎನ್ನುವುದು ಕ್ರಿಸ್ತಶಕೆ ಬುದ್ಧಾನಂತರದ್ದೇ ಆಗಿದ್ದರೂ, ಕ್ರಿಸ್ತಪೂರ್ವದ ಬುದ್ಧಾನಂತರದ ಅವಧಿಯ ಭಾರತೀಯ ಚರಿತ್ರೆಯನ್ನು ಗುರುತಿಸಲು ಬಹಳ ಅಗತ್ಯವಾಗಿರುವುದರಿಂದ ಬುದ್ಧ ಶಕೆ ಎಂದು ಬಳಸಬಹುದು.

ಯಾವ ಪುರಾಣದ ಕೃತಿಗಳನ್ನು, ದರ್ಶನಗಳನ್ನು, ಶಾಸ್ತ್ರಗಳನ್ನು ಅತ್ಯಂತ ಹಳತೆಂದು ಅಥವಾ ಪುರಾತನ ಸನಾತನವೆಂದು ಬಿಂಬಿಸಲಾಗುವುದೋ ಅವುಗಳಲ್ಲಿ ಹಲವಷ್ಟು ಬುದ್ಧ ಶಕೆಯಲ್ಲಿಯೇ ರಚಿತವಾದವು.

ದರ್ಶನಗಳಲ್ಲಿ ಮತ್ತು ಪುರಾಣಗಳಲ್ಲಿ ಬುದ್ಧನ ಬದುಕು, ಚಿಂತನೆ, ಬೋಧನೆ ಮತ್ತು ವರ್ಚಸ್ಸು, ವೈದಿಕರು ಒಪ್ಪಲಿ ಬಿಡಲಿ, ಸೇರುತ್ತಾ ಬಂದವು. ಅದರಲ್ಲೂ ಸಾಮ್ರಾಜ್ಯಗಳನ್ನು ವಿಸ್ತರಿಸಿದಂತಹ ರಾಜರುಗಳು ನೇರವಾಗಿ ಬುದ್ಧನ ಬೋಧನೆಗಳ ಪ್ರಚಾರಕ್ಕೆ ಇಳಿದರೋ ಆಗಂತೂ ಪರಾವಲಂಬಿ ಹಾಗೂ ಗೆದ್ದೆತ್ತಿನ ಬಾಲ ಹಿಡಿವ ವೈದಿಕರು ತಮ್ಮ ಸಾಹಿತ್ಯದೊಳಗೆ ಬುದ್ಧನ ವರ್ಚಸ್ಸನ್ನೂ ಮತ್ತು ಬೋಧನಾ ಸಾರವನ್ನೂ ಅಳವಡಿಸಿಕೊಳ್ಳತೊಡಗಿದರು. ಅದರ ಫಲವಾಗಿ ವಿವಿಧ ಸೂತ್ರಗಳು, ಶಾಸ್ತ್ರಗಳು, ತತ್ವಗಳು ಸಂಸ್ಕೃತದಲ್ಲಿ ರಚಿತವಾದವು. ಹಾಗೆಯೇ ವಿಷ್ಣುವಿನ ದಶಾವತಾರದಲ್ಲೂ ಬುದ್ಧನ ಸ್ಥಾನವನ್ನು ಸೃಷ್ಟಿಸುವ ಕೆಲಸವಾಯಿತು.

ಕರ್ಮ, ಜನ್ಮಾಂತರ, ಅವಿನಾಶಿ ಆತ್ಮ; ಈ ಎಲ್ಲವೂ ವೈದಿಕರ ಲೌಕಿಕ ಚೌಕಟ್ಟಿನಿಂದ ಹೊರತಾಗಿ ಬೇರೆಯಾಗಿಯೇ ಜಿಜ್ಞಾಸುವಿನ ದೃಷ್ಟಿಯಲ್ಲಿ ಅರ್ಥೈಸಲು ಪ್ರಾರಂಭಿಸಿದರು. ಏಕೆಂದರೆ, ಬೌದ್ಧ ತತ್ವದ ಪ್ರಭಾವಕ್ಕೆ ಪ್ರಭುತ್ವಗಳು ಸಿಕ್ಕಿದ್ದು ಮಾತ್ರವಲ್ಲದೆ ಅವುಗಳನ್ನು ಧ್ವನಿಸುವುದರ ಮೂಲಕ ತಾವು ಉಳಿದಿರುವುದು ತೀರಾ ಅಗತ್ಯವಾಗಿತ್ತು, ಜನರನ್ನು ತಮ್ಮ ಕಡೆಗೆ ಗಮನ ಹರಿಸುವಂತೆ ಮಾಡುವುದರ ಅಗತ್ಯವಿತ್ತು, ಪ್ರಭುತ್ವಗಳಾದರೂ ತಮಗಿರುವ ವಿದ್ವತ್ತಿನ ಪ್ರಭಾವದಿಂದ ಗಹನವಾದುದನ್ನೇ, ಉನ್ನತವಾಗಿರುವುದನ್ನೇ ಬಯಸುತ್ತಿದ್ದರು. ಹಾಗಾಗಿ ಬುದ್ಧನ ವಿಚಾರಗಳ ಗಹನವಾದ ಮತ್ತು ಆಳವಾದ ಧ್ವನಿಯನ್ನು ತಮ್ಮ ಕೃತಿಗಳಲ್ಲಿಯೂ ಬಿಂಬಿಸುವ ಅಗತ್ಯವಿತ್ತು. ಕೆಲವೊಮ್ಮೆ ಕೆಲವು ಕೃತಿಕಾರರು ಪ್ರಾಮಾಣಿಕವಾಗಿಯೂ ಅವುಗಳನ್ನು ಗೌರವಿಸಿ ತಮ್ಮದಾಗಿಸಿಕೊಂಡಿದ್ದರು. ಒಟ್ಟಾರೆ ಬುದ್ಧನ ವರ್ಚಸ್ಸು ಮತ್ತು ಬೋಧನೆ ವೈದಿಕರ ರಚನೆಗಳಲ್ಲಿಯೂ ಸೇರಿತ್ತು.

ಅವಿನಾಶಿ, ಅನಂತ ಮತ್ತು ಅಮರವಾದಂತಹ ಜೀವನಸಾರವು ಒಬ್ಬ ವ್ಯಕ್ತಿಗೆ ಸಾಕ್ಷಾತ್ಕಾರವಾಗುವುದೇ ಲಭಿಸುವಂತಹ ಒಂದು ಮಹಾನ್ ಶಕ್ತಿಯಾಗಿತ್ತು. ಅದು ಎಂತಹ ಶಕ್ತಿ ಎಂಬುದನ್ನು ಬುದ್ಧನ ಜೀವನ ಮತ್ತು ಅದರ ವರ್ಚಸ್ಸು ತೋರಿಸಿಕೊಟ್ಟಿದ್ದವು. ಇನ್ನು ಮುಂದೆ ಇಂತಹ ವೈದಿಕಾಚರಣೆಗಳ ವಿರುದ್ಧವಾದಂತಹ ಮಹೋನ್ನತ ವಿಚಾರಗಳು ಅವಿನಾಶಿಯಾಗಿ ಅಮರವಾಗುವುದು ಬೇಡವಾಗಿತ್ತು. ಅವರ ಸೈದ್ಧಾಂತಿಕ ಅಸ್ತಿತ್ವಕ್ಕೇ ಮುಳುವಾಗಿದ್ದಂತಹ ಬುದ್ಧನ ವಿಚಾರಗಳು ಮತ್ತು ಬೌದ್ಧರ ಶೀಲಪಾಲನೆಗಳ ವರ್ಚಸ್ಸುಗಳು ಮತ್ತಷ್ಟು ಬೆಳೆಯದಂತೆ ಮತ್ತೊಂದು ಕಡೆಯಿಂದ ಪ್ರಯತ್ನಗಳು ಆದವು. ಅನೇಕಾನೇಕ ವೈದಿಕ ಕೃತಿಗಳಲ್ಲಿ ಬೌದ್ಧರನ್ನು ರಾಕ್ಷಸರೆಂದು, ಅಸುರರೆಂದು, ರಕ್ಕಸರೆಂದು, ದಾನವರೆಂದು ಕರೆದಿದ್ದಾರೆ.

ಅರಣ್ಯಕರ ಪ್ರವೇಶಗಳು

ಅಂಗುಲಿಮಾಲನಂತಹ ಅರಣ್ಯವಾಸಿ ದರೋಡೆಕೋರ ಬುದ್ಧನ ಪ್ರಭಾವಕ್ಕೆ ಒಳಗಾಗಿದ್ದು ಅನೇಕಾನೇಕ ಅರಣ್ಯವಾಸಿಗಳನ್ನು ಅವನತ್ತ ಸೆಳೆದಿರುವುದಕ್ಕೆ ಸಾಧ್ಯತೆಗಳು ಧಾರಾಳವಾಗಿ ಇದೆ. ಹಾಗಾಗಿಯೇ ಪುರಾಣಗಳಲ್ಲಿ ದಾನವರನ್ನು ದಿಕ್ಕು ತಪ್ಪಿಸಲು ವಿಷ್ಣುವು ಬುದ್ಧನ ಅವತಾರ ತಾಳಿದನೆಂದು ಹೇಳಿದ್ದು. ಈ ಬಗೆಯಾಗಿ ಕಟ್ಟಿದ ಕಥೆಗಳನ್ನು ಪ್ರಭುತ್ವದವರಿಗೋ, ವಿದ್ವಾಂಸರಿಗೋ ಹೇಳಲು ಸಾಧ್ಯವಾಗುತ್ತಿರಲಿಲ್ಲ, ಅವರು ಸಾಮಾನ್ಯರಿಗೆ ಮತ್ತು ಶ್ರಮಿಕರಿಗಾದರೂ ಕೂರಿಸಿಕೊಂಡು ಹೇಳುವ ಅಗತ್ಯತೆ ಇತ್ತು, ಕನಿಷ್ಠಪಕ್ಷ ಅಲ್ಲಿ ಅವರ ದನಿಯನ್ನು ಮೊಳಗಿಸಬೇಕಿತ್ತು.

ಆದರೆ ಅವರು ಹೇಳಿದ ರೀತಿಗಳಾದರೂ ಎಂತವು?

ರಾಕ್ಷಸರು ಅಮರತ್ವದ ಪದವಿಗಾಗಿ, ಆತ್ಮ ಸಾಕ್ಷಾತ್ಕಾರ ಮಾತ್ರವಲ್ಲ, ಪರಮ್ ಆತ್ಮದ ಸಾಕ್ಷಾತ್ಕಾರಕ್ಕೂ ಪ್ರಯತ್ನಿಸಿಬಿಟ್ಟರೆ, ಸಾಧನೆಯಲ್ಲಿ ಗೆದ್ದುಬಿಟ್ಟರೆ ಇನ್ನು ಬೌದ್ಧ ಸಾಧಕರ ವರ್ಚಸ್ಸಿನ ಉಪಟಳವನ್ನು ವೈದಿಕರಿಗೆ ಸಹಿಸಲು ಆಗದು. ರಾಕ್ಷಸರು ಅವರ ಸ್ವರ್ಗದ ಮೇಲೆ ದಾಳಿ ಮಾಡುವುದೆಂದರೆ ಇದೇ. ಅವರ ದೈವ ಪದವಿಯನ್ನು ಕಸಿದುಕೊಳ್ಳುವುದೆಂದರೆ ಇದೇ. ಸಮಾಜದಲ್ಲಿ ಸಾಂಸ್ಕೃತಿಕವಾಗಿ ತಮ್ಮ ಅಧಿಪತ್ಯವನ್ನು ಸ್ಥಾಪಿಸಲು ಕಷ್ಟ ಸಾಧ್ಯವಾಗುತ್ತಿತ್ತು.

ಹೀಗಾಗಿಯೇ ಅವರು ತಮ್ಮ ಪ್ರತಿರೋಧವನ್ನು ನಾನಾರೀತಿಯಲ್ಲಿ ತಮ್ಮ ಕೃತಿಗಳಲ್ಲಿ ತೋರಿಸುತ್ತಾ ಬೌದ್ಧರ ಪ್ರಭಾವವನ್ನು ತಗ್ಗಿಸಲು ಅಥವಾ ಬುದ್ಧಾನುಯಾಯಿಗಳಾಗುವವರ ಬಗ್ಗೆ ಬೇರೆಯದೇ ನಕಾರಾತ್ಮಕ ಧೋರಣೆಗಳನ್ನು ಮೂಡಿಸಲು ಯತ್ನಿಸುತ್ತಿದ್ದರು. ಸಂಸ್ಕೃತ ನಾಟಕಗಳಲ್ಲಿಯೂ ಸಹ ಸೋಮಾರಿಗಳು, ಆಲಸಿಗಳು, ದುಡಿಯಲಾರದ ದಂಡಪಿಂಡಗಳೆಲ್ಲಾ ಬೌದ್ಧ ಬಿಕ್ಕುವಾಗಿ ಹೊಟ್ಟೆಹೊರೆದುಕೊಳ್ಳಲು ಸಂಘವನ್ನು ಸೇರುತ್ತಿದ್ದರು ಎಂದು ಧ್ವನಿಸುವಂತಹ ರೂಪಕಗಳನ್ನು ಕಟ್ಟಿಕೊಟ್ಟರು.

ಒಟ್ಟಾರೆ ಶೂದ್ರರ ಮತ್ತು ಬುಡಕಟ್ಟಿನವರ ಆಲೋಚನೆಗಳು ಮತ್ತು ಒಲವು ನಿಲುವುಗಳು, ಬೌದ್ಧರ ವೈದಿಕ ವಿರೋಧಿ ತತ್ವಗಳು ಎಲ್ಲವೂ ವೈದಿಕರಿಗೆ ಬೆದರಿಕೆಯನ್ನು ಒಡ್ಡಿದ್ದವು. ಅವರೆಲ್ಲರನ್ನೂ ಸಮಗ್ರವಾಗಿ ಸುರರಲ್ಲದ ಅಸುರರೆಂದೇ ಬಿಂಬಿಸುವ ಪ್ರಯತ್ನವೂ ಅವರಲ್ಲಿತ್ತು.


ದೇಗುಲಗಳ ಪೋಷಕ ಪ್ರಭುಗಳು

ಅದೇ ರೀತಿಯಲ್ಲಿ ರಾಜಪ್ರಭುತ್ವವು ಬುದ್ಧನ ಜೀವನ ಮತ್ತು ಬೋಧನೆಗಳನ್ನು ಪ್ರಚಾರಪಡಿಸುವಂತಹ ಕಾರ್ಯದಲ್ಲಿ ತೊಡಗಿದಾಗ ಸಹಜವಾಗಿಯೇ ತಮ್ಮ ಸಂಪತ್ತನ್ನು ಬುದ್ಧ ಸಂಬಂಧಿತ ಶಿಲ್ಪ ಕಲಾಕೃತಿಗಳಿಗೆ, ಶಾಸನಗಳಿಗೆ ಧಾರಾಳವಾಗಿ ವಿನಿಯೋಗಿಸಿತ್ತು. ಚೈತ್ಯಾಲಯಗಳು ದೊಡ್ಡ ದೊಡ್ಡ ದೇವಾಲಯಗಳಿಗೆ ಸ್ಫೂರ್ತಿಯಾದವು. ಸಣ್ಣ ಸಣ್ಣ ಗುಡಿಗಳಾಗಿ ಗ್ರಾಮದೇವತೆಗಳಿಗಷ್ಟೇ ನೆಲೆಯಾಗಿದ್ದ ಈ ನೆಲದಲ್ಲಿ ವೈದಿಕರ ದೇವಾಲಯಗಳೂ ತಲೆ ಎತ್ತಿದವು ಹಾಗೂ ಬರೀ ಕಲ್ಲಿನ ತುಂಡು ಮತ್ತು ಗುಂಡುಕಲ್ಲುಗಳನ್ನು ಪೂಜಿಸುತ್ತಿದ್ದ ಗ್ರಾಮೀಣ ಜನರಿಗೆ ಈಗ ವೈದಿಕರ ವಿಷ್ಣು ಅಥವಾ ಇತರ ದೇವತೆಗಳ ಶಿಲ್ಪಗಳು ಆರಾಧನೆಗಳಿಗೆ ಒದಗತೊಡಗಿದವು. ಸುಂದರವಾದಂತಹ ಶಿಲ್ಪಕಲಾಕೃತಿಗಳು ಮನೋಹರವಾಗಿದ್ದು ಮಾತ್ರವಲ್ಲದೇ ಜನರಿಗೆ ಹೊಸ ಆಕರ್ಷಣೆಯ ಕೇಂದ್ರಗಳೂ ಆಗತೊಡಗಿದವು.

ಮನೋಹರವೂ, ಹೊಸತೂ ಆದಂತಹ ವೈದಿಕರ ದೇವಾಲಯದ ತಂತ್ರಗಾರಿಕೆ ಮರಳು ಮಾಡುವಲ್ಲಿ ಯಶಸ್ವಿಯೂ ಆಯಿತು. ಹೀಗೆ ಒಂದು ಕಡೆಯಲ್ಲಿ ವೈದಿಕರ ಪ್ರಯತ್ನಗಳು ಸಾಮಾನ್ಯ ಜನರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವಲ್ಲಿ ಒಂದು ಹಂತಕ್ಕೆ ಪ್ರಯತ್ನ ಮಾಡಿದ್ದರೆ, ಮತ್ತೊಂದು ಕಡೆಯಲ್ಲಿ ವೈದಿಕರ ಕೃತಿಗಳೂ ಬುದ್ಧನ ತತ್ವಗಳನ್ನು ಅಳವಡಿಸಿಕೊಂಡು ಪ್ರಭುತ್ವವನ್ನು, ವಿದ್ವಾಂಸರನ್ನು ತಮ್ಮ ಕಡೆಗೆ ಸೆಳೆದುಕೊಂಡಿದ್ದವು. ಹಾಗೆಯೇ ಇವರ ಆಕರ್ಷಣೆಯ ಕೇಂದ್ರಗಳಾದ ದೇಗುಲಗಳನ್ನು ನಿರ್ಮಿಸಲೂ ಅವರಿಗೆ ಪ್ರಭುತ್ವದ ನೇರ ಸಹಾಯ ಖಂಡಿತ ಬೇಕಾಗಿತ್ತು. ಪ್ರಭುತ್ವಗಳಷ್ಟೇ ಅಂತಹ ಬೃಹತ್ ದೇವಾಲಯಗಳನ್ನು ನಿರ್ಮಿಸಲು ಸಾಧ್ಯವಿತ್ತು, ಅಷ್ಟೊಂದು ಹೆಚ್ಚಿನ ಪ್ರಮಾಣದ ಖಾಸಗೀ ಭೂಮಾಲಿಕತ್ವವು ಪ್ರಭುತ್ವದ ಅನುಗ್ರಹವಿಲ್ಲದೇ ಹೊಂದಲು ಕಷ್ಟಸಾಧ್ಯವಿತ್ತು.

ಸೈದ್ಧಾಂತಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಮಹತ್ತರ ಬದಲಾವಣೆಗಳಾಗಿದ್ದು ಬುದ್ಧಾನಂತರ. ಅದರಲ್ಲೂ ಪ್ರಭುತ್ವಗಳು ಬುದ್ಧನ ಜೀವನ ಮತ್ತು ಬೋಧನೆಗಳ ಕುರಿತಾಗಿ ಅವರು ಬುದ್ಧಶಕೆಯಲ್ಲಿ ಮಾಡಿದ ಪ್ರಚಾರದ ಪ್ರಭಾವಗಳು ಮಹತ್ತರ ಪಾತ್ರವಹಿಸಿದ್ದವು. ■

ವೈಚಾರಿಕತೆಗೆ ಯಾಕಿಲ್ಲ ಅನುಮತಿ?



ಸಂಘ ಪರಿವಾರದ ಕೋಮುದ್ವೇಷ ಪ್ರಚೋದಕ ಭಾಷಣಗಳಿಗೆ ಬೇಕಾಬಿಟ್ಟಿಯಾಗಿ ಅನುಮತಿ ಕೊಡುವ ಕರ್ನಾಟಕ ಪೊಲೀಸರು ವೈಚಾರಿಕತೆಯನ್ನು ಬೆಳೆಸುವ ಕೆ.ಎಸ್.ಭಗವಾನ್ ಮತ್ತು ಪೇಜಾವರಶ್ರೀ ನಡುವಿನ ಚರ್ಚೆಗೆ ಮಾತ್ರ ಅನುಮತಿ ನಿರಾಕರಿಸಿರುವುದು ಕಾನೂನು ರಕ್ಷಕರು ಕೋಮುಶಕ್ತಿಗಳ ಜತೆ ಶಾಮೀಲಾಗಿರುವುದರ ಸಂಕೇತ. ಈ ಚರ್ಚೆಯಲ್ಲಿ ಭಗವದ್ಗೀತೆಯು ಹಿಂಸೆ ಪ್ರಚೋದಕ ಮತ್ತು ಮಹಾಭಾರತ ರಾಮಾಯಣ ಇವೆಲ್ಲಾ ಹೀನ ಜಾತಿ ಭೇದ ಸಮರ್ಥಿಸುವ ಗ್ರಂಥಗಳು ಎಂಬ ವಿಚಾರವಾದಿಗಳ ವಾದ ಗೆಲ್ಲುವ ಸಾಧ್ಯತೆ ಕಂಡು ಕೋಮುವಾದಿಗಳು ಪಿತೂರಿ ನಡೆಸಿ ಈ ಚರ್ಚೆಗೆ ಪೊಲೀಸರು ಅನುಮತಿ ನಿರಾಕರಿಸಿದಂತೆ ನಾಟಕವಾಡುವ ಯೋಜನೆ ಮೊದಲೇ ತಯಾರಾಗಿತ್ತು. ಪ್ರಗತಿಪರರಿಗೆ ಹಂದಿಗಳು ಮತ್ತು ದಾರಿಹೋಕರು ಎಂದು ಹೀನ ಮನುವಾದಿ ಭಾಷೆ ಉಪಯೋಗಿಸಿದ ಪ್ರತಾಪಸಿಂಹ ಸಂಸದನಾಗಲು ನಿಜಕ್ಕೂ ಯೋಗ್ಯನಲ್ಲ. ಈಗ ಮತ್ತೆ ಅದೇ ಪೇಜಾವರರು ಮೈಸೂರಿನ ಕೆ.ಎಸ್.ಭಗವಾನರನ್ನು ಉಡುಪಿಯಲ್ಲಿಯೇ ಅಂತರಂಗದ ಚರ್ಚೆಗೆ ಕರೆದಿದ್ದಾರೆ. ಇದರಲ್ಲಿ ಸಹ ಪ್ರಾಮಾಣಿಕತೆ ಇದ್ದಂತಿಲ್ಲ.

ಕೇವಲ ಒಬ್ಬ ಕಂಪಲ್ಸಿವ್ ಜೂಜುಕೋರ ಯುಧಿಷ್ಠಿರನು ಜುಗಾರಿಯ ಹುಚ್ಚಿನಲ್ಲಿ ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆಯುವುದಕ್ಕೆ ನಡೆದ ಕುರುಕ್ಷೇತ್ರ ಯುದ್ಧವನ್ನು ಧರ್ಮ ಸ್ಥಾಪನೆಗಾಗಿ ನಡೆದ ಯುದ್ಧ ಎಂದು ಕರೆಯುವುದು ದೊಡ್ಡ ತಪ್ಪು. ಕೌರವರು ತಮ್ಮ ರಾಜ್ಯದ ಜನತೆಯ ಮೇಲೆ ಯಾವುದೇ ಧರ್ಮ ವಿರೋಧಿ ಆಡಳಿತ ಹೇರಿರಲೇ ಇಲ್ಲ ಎಂದಮೇಲೆ ಧರ್ಮ ಸ್ಥಾಪನೆಯ ಪ್ರಶ್ನೆ ಎಲ್ಲಿತ್ತು. ಮೂರ್ಖ ಧರ್ಮರಾಯನು ತನ್ನ 75ನೇ ಇಳಿವಯಸ್ಸಿನಲ್ಲಿ 70 ವರ್ಷದ ಮುದುಕಿ ದ್ರೌಪದಿಯನ್ನು ಜೂಜಿನಲ್ಲಿ ಪಣಕ್ಕಿಟ್ಟು ತಾನೇ ಧರ್ಮ ವಿರೋಧಿಯಾಗಿ ನಡೆದುಕೊಂಡಿದ್ದನು. ಈಗ ಹೆಚ್ಚು ಕಮ್ಮಿ ಅದೇ ಸ್ಥಿತಿಯಲ್ಲಿರುವ ಪೇಜಾವರರ ಬೆಂಬಲಿಗರಿಗೆ ಭಗವದ್ಗೀತೆಯನ್ನು ಹಾಗೂ ಮಹಾಭಾರತವನ್ನು ವಿಶ್ಲೇಷಿಸುವಷ್ಟು ವಿವೇಚನಾ ಶಕ್ತಿಯಿರಲು ಸಾಧ್ಯವೇ?

ಕುರುಕ್ಷೇತ್ರ ಯುದ್ಧದಲ್ಲಿ ಐವತ್ತು ಲಕ್ಷ ನಿರಪರಾಧಿ ಯೋಧರು ಹಾಗೂ ಇಪ್ಪತ್ತು ಲಕ್ಷ ಮುಗ್ಧ ಪ್ರಾಣಿಗಳ ಮಾರಣಹೋಮ ನಡೆದು ಇಡೀ ಭರತಖಂಡದಲ್ಲಿ ಕೋಟ್ಯಾಂತರ ಮಕ್ಕಳು ಅನಾಥರಾಗಿ ಲಕ್ಷಾಂತರ ಮಹಿಳೆಯರು ವಿಧವೆಯರಾಗಿ ಬೀದಿಗೆ ಬೀಳುವಂತಹ ಸ್ಥಿತಿ ನಿರ್ಮಾಣವಾಗಿದ್ದು ಕೇವಲ ಒಬ್ಬನೇ ಒಬ್ಬ ಜೂಜುಕೋರ ಯುಧಿಷ್ಠಿರನಿಗೆ ನ್ಯಾಯ ಒದಗಿಸಲು. ಶ್ರೀಕೃಷ್ಣ ನಿಜವಾಗಿ ದೇವರಾಗಿದ್ದರೆ ಕೇವಲ ಒಬ್ಬ ಮಹಾಮೂರ್ಖ ಯುಧಿಷ್ಠಿರನ ಸ್ವಾರ್ಥಕ್ಕಾಗಿ ಲಕ್ಷಾಂತರ ನಿರಪರಾಧಿಗಳ ಮಾರಣಹೋಮ ನಡೆಯುವ ಘೋರ ಯುದ್ಧವನ್ನು ಚಿಟಿಕೆ ಹೊಡೆದಂತೆ ತಪ್ಪಿಸಬಹುದಿತ್ತು. ಲಕ್ಷಾಂತರ ಜನರ ಜೀವಕ್ಕಿಂತ ಒಬ್ಬ ಮುದಿಯ ಜೂಜುಕೋರನ ಆಸ್ತಿಯ ಹಕ್ಕು ಹೆಚ್ಚು ಮುಖ್ಯ ಎಂಬಂತೆ 90 ವರ್ಷದ ಮುದುಕ ಶ್ರೀಕೃಷ್ಣನಿಗೆ ಕಂಡಿದ್ದು ಅವನು ದೇವರಲ್ಲ ಎಂಬುದಕ್ಕೆ ಅತ್ಯುತ್ತಮ ಸಾಕ್ಷಿ. ಹಾಗಿರುವಾಗ ಅಲ್ಪಮತಿ ಮುದುಕರ ನಡುವೆ ಯುದ್ಧ ಪ್ರಚೋದಿಸಲು ಕೃಷ್ಣ ಬೋಧಿಸಿದ ಭಗವದ್ಗೀತೆಗೆ ಯಾವ ಮೌಲ್ಯವಿದ್ದೀತು?

ಬ್ರಾಹ್ಮಣನೊಬ್ಬನ ಸ್ವಾರ್ಥಕ್ಕಾಗಿ ರಾಮನು ಶೂದ್ರ ತಪಸ್ವಿ ಶಂಭೂಕನನ್ನು ಕೊಂದು ತಾನು ಪಕ್ಕಾ ಜಾತಿವಾದಿ ಎಂದು ತೋರಿಸಿದಂತೆ ಕೃಷ್ಣನೂ ಬ್ರಾಹ್ಮಣರ ಮಾನಸಿಕ ಗುಲಾಮನಾಗಿದ್ದ ಹಾಗೂ ಜಾತಿವಾದಿಯಾಗಿದ್ದ ಎಂಬುದಕ್ಕೆ ಸಾಕ್ಷಿ ಅವನು ಬ್ರಾಹ್ಮಣ ಸುಧಾಮನ ಕಾಲು ತೊಳೆದು ಸತ್ಕರಿಸಿ ದೊಡ್ಡ ಸಂಪತ್ತು ಕೊಟ್ಟದ್ದು. ಕೃಷ್ಣನಿಗೆ ಸುಧಾಮನಂತಹ ಹಲವಾರು ಬಡ ಯಾದವ ಜಾತಿಯ ಬಾಲ್ಯದ ಮಿತ್ರರು ಇದ್ದರೂ ಅವರಲ್ಲಿ ಯಾರೊಬ್ಬನ ಕಾಲು ತೊಳೆಯುವುದು ಬಿಡಿ ಒಂದು ಹಿಡಿ ಧಾನ್ಯವನ್ನೂ ಕೃಷ್ಣ ಕೊಡಲಿಲ್ಲ!

- ರಾಮಕೃಷ್ಣ ಅಡಕೆ, ಧಾರವಾಡ



ತೆಲುಗು 'ಬಾಹುಬಲಿ'ಗೆ ಯಾಕೆ ಕನ್ನಡಿಗರ ಬೆಂಬಲ?

ಇತ್ತೀಚೆಗೆ ತೆಲುಗು ಚಲನಚಿತ್ರ 'ಬಾಹುಬಲಿ' ಬಿಡುಗಡೆಯಾದಾಗ ಇಡೀ ಕರ್ನಾಟಕದ ಮಾಧ್ಯಮಗಳೆಲ್ಲಾ ಆ ತೆಲುಗು ಚಿತ್ರದ ಪ್ರಚಾರದಲ್ಲಿ ತೊಡಗಿರುವುದು ಹಾಗೂ ಉತ್ಪ್ರೇಕ್ಷಿತ ಪೈಡ್- ಸುದ್ದಿಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ಲಾಂಟ್ ಮಾಡುತ್ತಿರುವುದು ಅತ್ಯಂತ ಬೇಸರದ ಸಂಗತಿ. ಹೆಣ್ಣೇ ಹೆಣ್ಣಿನ ವೈರಿ ಎಂಬಂತೆ ಕನ್ನಡಿಗರೇ ಕನ್ನಡದ ವೈರಿ ಎಂಬುದೂ ನಿಜ. ತೆಲುಗು ತಮಿಳರ ಕೈಯಲ್ಲಿರುವ ಕನ್ನಡ ಚಾನೆಲ್ಲುಗಳನ್ನು ಬಿಡಿ ಅಚ್ಚ ಕನ್ನಡಿಗರ ಕೈಯಲ್ಲಿರುವ ಮೂರು ಸುದ್ದಿ ಚಾನೆಲ್ಲುಗಳಾದರೂ ಕನ್ನಡ ಸ್ವಾಭಿಮಾನ



ಇಟ್ಟುಕೊಂಡು ಪೈಡ್ ಸುದ್ದಿ ಪ್ರಸಾರ ಮಾಡಬಾರದಿ... ಈ ತೆಲುಗು ಚಿತ್ರದ ಬಗೆಗಿನ ಕೆಲವೊಂದು ಸುದ್ದಿ (ಪ್ರಚಾ... ಎಷ್ಟು ಬಾಲಿಶವಾಗಿವೆಯೆಂದರೆ ಆಂಧ್ರದಲ್ಲಿ ಯಾರೋ ಮಕ್ಕಳು ಶಾಲೆಗೆ ಚಕ್ಕರ್ ಹೊಡೆದು ಈ ಚಿತ್ರ ನೋಡ... ಹೋಗಿ ಸುಳ್ಳು ರಜೆ ಚೀಟಿ ಕೊಟ್ಟಿದ್ದನ್ನೂ ತೋ... ನಗೆಪಾಟಲಿಗೀಡಾಗಿವೆ. ಒಂದಕ್ಷರ ಕನ್ನಡ ಬಾರದ ತೆಲು... ನಿರ್ದೇಶಕನನ್ನು ರಾಯಚೂರು ಕನ್ನಡಿಗ ಎಂದು ಸು... ಪ್ರಚಾರ ಸಹ ಮಾಡಲಾಗುತ್ತಿದೆ. ಕನ್ನಡದ ನಂಬರ್ ಒ... ದಿನಪತ್ರಿಕೆ ಎಂದು ಬಡಾಯಿ ಕೊಚ್ಚುವ ಪತ್ರಿಕೆಗಳ... ತೆಲುಗು ಚಿತ್ರದ ಲಜ್ಜೆಗೆಟ್ಟ ಪ್ರಚಾರದಲ್ಲಿ ತೊಡಗಿರುವು... ವಿಪರ್ಯಾಸ. ಒಂದಿಷ್ಟು ಜಾಹೀರಾತು ಹಣಕ್ಕಾಗಿ ಕ... ಪತ್ರಿಕೆಗಳು ಹಾಗೂ ವಾಹಿನಿಗಳು ಇಷ್ಟೊಂದು ಲಜ್ಜೆಗೆ... ತೆಲುಗು ಚಿತ್ರ ಪ್ರಮೋಟ್ ಮಾಡಿ ಕನ್ನಡದ ಕಗ... ಮಾಡುತ್ತಿರುವುದು ಅಸಹ್ಯಕರ. ಆಂಧ್ರದಲ್ಲಿ ಹಿ... ಒಂದಾದರೂ ಕನ್ನಡ ಚಿತ್ರದ ಪ್ರಚಾರವನ್ನು ತೆಲು... ಪತ್ರಿಕೆಗಳು ಹಾಗೂ ತೆಲುಗು ವಾಹಿನಿಗಳು ಮಾಡಿ... ಯಾರಾದರೂ ಕಂಡಿದ್ದಾರೆಯೇ? ಕರ್ನಾಟಕದ ರಾಜಧ...

ಪೂರ್ವಾಗ್ರಹರಹಿತವಿರುವ ಯಾವ ವಿಮರ್ಶೆಯೂ ತಪ್ಪ...

ಜುಲೈ 22ರ ಸಂಚಿಕೆಯಲ್ಲಿ ಗಾಂಧಿ ಹಾಗು ಅಂಬೇಡ್ಕರರ ಕುರಿತಂತೆ ಡಾ.ಎಚ್.ಡಿ.ಉಮಾಶಂಕರ್ ಅವರು ಬರೆದಿರುವ ಪತ್ರ ಓದಿದೆ. ಉಮಾಶಂಕರ್ ಅವರು ಹೇಳಿರುವಂತೆ ಗೌರಿ ಲಂಕೇಶ್ ಪತ್ರಿಕೆಯವರು ಇಂತಹ "ಮುಖಾಮುಖಿ"ಗೆ ವೇದಿಕೆಯೊಂದನ್ನು ಕಲ್ಪಿಸಿಕೊಟ್ಟು ಒಳ್ಳೆಯ ಕೆಲಸವನ್ನೇ ಮಾಡಿರುವುದಕ್ಕೆ ನನ್ನ ಸ್ವಾಗತವೂ ಇದೆ. ಯಾಕೆಂದರೆ ಈ ಇಬ್ಬರ ತಾಕಲಾಟ ಎನ್ನುವ ವಿಚಾರವೇ ಕೆಲವರಿಗೆ ಗೊಂದಲವನ್ನು ತಂದಿರುವುದಲ್ಲದೇ ಇದಕ್ಕೆ ಸೂಕ್ತ ಉತ್ತರ ಹುಡುಕಬೇಕಾದ ಅನಿವಾರ್ಯತೆ ನಮ್ಮೆಲ್ಲರ ಮುಂದಿರುವುದು ಸತ್ಯ. ಈ ಅಳಿವೆ ಶುದ್ಧೀಕರಣ(?)ದ ಪ್ರಕ್ರಿಯೆ ಗಾಂಧಿಯ ಸಿದ್ಧಾಂತವೂ ಕೂಡ ಹೌದು..

ಗಾಂಧಿ ಪರ(?)ವಹಿಸಿದ ನನ್ನ ಹಾಗು ಕೌಲಗಿಯವರ ಲೇಖನಗಳ ಕುರಿತಾಗಿ ಶ್ರೀಯುತರು ನಾವು ಗಲಿಬಿಲಿಗೊಂಡವರಂತೆ ಪ್ರತಿಕ್ರಿಯಿಸಿದ್ದೇವೆ ಎಂದಿರುವುದು ನನ್ನ ಮಟ್ಟಿಗಂತೂ ಸತ್ಯ. ಆ ಗಲಿಬಿಲಿಗೆ ಅದರದ್ದೇ ಆದಂತಹ ಕಾರಣಗಳೂ ಇವೆ. ನಾನೊಬ್ಬ ಒಳ್ಳೆಯ ಬರಹಗಾರನೇನಲ್ಲ ಆದರೂ ಒಂದು ಪೀಳಿಗೆಯನ್ನೇ ಪ್ರಭಾವಿಸಿದ ಪತ್ರಿಕೆಯೊಂದರಲ್ಲಿ ನನ್ನ ಪತ್ರಗಳು ಕೆಲ ಸಮಯದಿಂದ ಬರುತ್ತಲೇ ಇವೆ. ಇದು ನನ್ನ ಭಾಗ್ಯ. ಮೂರು ತಿಂಗಳ ಹಿಂದೆ ಈ ಚರ್ಚೆಗೆ ನಾಂದಿ ಹಾಡಿದ ರಘೋತ್ತಮರ ಲೇಖನವನ್ನು ಅವತ್ತೇ ನಾನು ಗಮನಿಸಿದ್ದೆ. (ಈ ಹಿಂದೆಯೂ ಇಂಥಾದ್ದೇ ಲೇಖನಗಳನ್ನವರು ಬರೆದಿದ್ದರು ಸತ್ಯ- ಅಸತ್ಯದ ಎಲ್ಲಾ ರೀತಿಯ ಗೋಜಲು ವಿವರಗಳು ದೊರೆಯಬಲ್ಲ ಇಂಟರ್‌ನೆಟ್ಟನ್ನು ಅವಲಂಬಿಸದೇ ಅವರ ಲೇಖನಗಳಲ್ಲಿ ಇರುವ ಅಧ್ಯಯನದ ಹಿನ್ನೆಲೆಯನ್ನೂ ಕೂಡ ಗಮನಿಸಿದ್ದೇನೆ) ಆನಂತರ ನನ್ನ ಕೆಲವಾರು ಪತ್ರಗಳು ಪತ್ರಿಕೆಯಲ್ಲಿ ಬಂದಿದ್ದರೂ ಈ ಕುರಿತಾಗಿ ಎಲ್ಲೂ ಬರೆಯಹೋಗಿರಲಿಲ್ಲ. ಆದರೆ ಅದ್ಯಾಕೋ ಗಾಂಧಿ ಪ್ರತಿವಾದದ ಕಾವು ದಿನೇ ದಿನೇ ಹೆಚ್ಚುತ್ತಿರುವುದನ್ನ (ಶ್ರೀಯುತರಾದ ಆನಂದರಾಮ ಶಾಸ್ತ್ರಿ ವಿಕಾಸ್ ಆರ್ ಮೌರ್ಯ, ಸಿರಿಮನೆ ನಾಗರಾಜರ ಲೇಖನ) ನೋಡಿದಾಗಷ್ಟೇ ಗಲಿಬಿಲಿಗೊಂಡು ನನಗೆ ಬರೆಯ ಬೇಕೆನಿಸಿತೇ ವಿನಃ ಗಾಂಧಿಯನ್ನು ಓದಿಕೊಳ್ಳದ ಗಾಂಧಿವಾದಿಯೂ ಅಲ್ಲದ ನಾನು ಗಾಂಧಿವಾದಿಯಾಗಿ ಅದನ್ನು ಬರೆದಿರಲಿಲ್ಲ. ಬರೆದುದಕ್ಕೆ ಕಾರಣ ಹಾಗು ತಕರಾರುಗಳೇನಾದರೂ ಇದ್ದರೆ. ಪ್ರಕಟವಾಗುತ್ತಿರುವ ಅಂಬೇಡ್ಕರರ ಕುರಿತ ಲೇಖನಮಾಲೆಯಲ್ಲಿ ಅನವಶ್ಯಕವಾಗಿ ಗಾಂಧೀಜಿಯನ್ನು ಎಳೆದು ತಂದ ಕಾರಣದ ಜೊತೆಗೆ ಈ ದ್ವೇಷ ಹಲವರನ್ನು ತಪ್ಪುಹಾದಿಯತ್ತ ಕೊಂಡೊಯ್ದು ಕೆಲ ದುರುಳರು ತೋಡಿರುವ ಹಳ್ಳದತ್ತ ಕೊಂಡೊಯ್ಯಬಹುದೆಂಬ ಭಯಕ್ಕಷ್ಟೇ ಹೊರತು ಬೇರೇನಲ್ಲ.

ಲೇಖನದಲ್ಲಿ ಉಮಾಶಂಕರ್ ಅವರು ಗಾಂಧೀಜಿಯು ಪೆರಿಯಾರ್‌ರಂತೆ ತಮ್ಮ ಹೋರಾಟಕ್ಕಾಗಿ ಸೂಕ್ತ ವೇದಿಕೆಯನ್ನು ನಿರ್ಮಿಸಲಿಲ್ಲ, ಹಿಂದೂಗಳ ಮೇಲೆ ಅಸ್ಪೃಶ್ಯತೆಯ ನಿಷೇಧವನ್ನು ಕಟ್ಟುನಿಟ್ಟಾಗಿ ಹೇರಲಿಲ್ಲ ಎಂಬಿತ್ಯಾದಿಯಾಗಿ ಹೇಳಿದ್ದಾರೆ. ಕಳೆದ ಶತಮಾನದಲ್ಲಿ ಬದುಕಿದ್ದ ಗಾಂಧೀಜಿ ಮೊದಲಿಗೆ ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು ಬಳಿಕವಷ್ಟೇ ಅವರೊಬ್ಬ ಸಮಾಜ ಸುಧಾರಕರೆಂಬುದಿಲ್ಲಿ ಗಮನಾರ್ಹ. ಇಡೀ ಚಳವಳಿಯನ್ನೇ ಮೈಮೇಲೆ ಹೊತ್ತಂತೆ ಸ್ವಾತಂತ್ರ್ಯ ಹೋರಾಟದ ಪೀಕ್ (ನಿರ್ಣಾಯಕ) ಹಂತದಲ್ಲಿ ಗುರುತಿಸಿಕೊಂಡಿದ್ದ ಗಾಂಧೀಜಿ ಒಂದು ಭಾಗವಾಗಿಯಷ್ಟೇ ತನ್ನೀ ಸುಧಾರಣಾ ಕಾರ್ಯವನ್ನು ಪರಿಗಣಿಸಿದರೇ ವಿನಹ ಅದೇ ಅವರಿಗೆ ಪ್ರಮುಖವಾಗಿದ್ದಿರಲಿಲ್ಲ. ಅವರು ಮಂಗಳೂರಿಗೆ ಬಂದಾಗ ಕುದ್ಮುಲ್ ರಂಗರಾಯರ ಸೇವೆಯನ್ನು ನೋಡಿ 'ಈ ವಿಚಾರದಲ್ಲಿ ರಾಯರು ನನ್ನ ಗುರು' ಎಂದರೇ ವಿನಹ ನನ್ನ ಕಾರ್ಯವನ್ನು ಸ್ಥಳೀಯವಾಗಿ ಮಾಡಿದಂತಹ ಮಹಾನುಭಾವ ಇವರು ಎಂದೆನ್ನಲಿಲ್ಲ. ಯಾಕೆಂದರೆ, ಈ ವಿಷಯದಲ್ಲಿ ಅವರು ಅಪೂರ್ಣರೆಂಬ ಭಾವ ಅವರಿಗಿತ್ತು. ಅವರ ಮಾತನ್ನು ದೇಶವೇ ಕೇಳಲು ಉತ್ಸುಕವಿದ್ದರೂ ಅಸ್ಪೃಶ್ಯತೆ ನಿಷೇಧ ಹೇರಲು ಸಮಾಜದ ಆಗಿನ (ಇವತ್ತೂ ಕೂಡ) ಸ್ಥಿತಿ ಅದಕ್ಕೆ ಸಿದ್ಧವಿರಲಿಲ್ಲ. ಹಾಗೇನಾದರೂ ಗಾಂಧಿ ನಿಷೇಧ ಹೇರಿದ್ದರೆ ಹರಿಜನ ಪದದ ಗತಿಯೇ ಇದಕ್ಕಾಗುತ್ತಿತ್ತು ಖಂಡಿತ. ಗಾಂಧಿಗಿಂತ ಆರು ವರ್ಷ ಹಿರಿಯ ಹಾಗು ಸಮಕಾಲೀನರಾದ ಪ್ರಭಾವಿ ವಿವೇಕಾನಂದರಿಗೂ ಸಾಮಾಜಿಕ ಅನಿಷ್ಟಗಳ ಕುರಿತು ತೀವ್ರ ಆಕ್ರೋಶವಿತ್ತಾದರೂ ಅವರಿಂದಲೂ ಏನನ್ನೂ ಮಾಡಲಾಗದಿದ್ದದು ಇದೇ ಕಾರಣಕ್ಕಲ್ಲವೇ? ಇಲ್ಲಿ ದೂರುವುದಿದ್ದರೆ ಜಿಗುಟು ಸಮಾಜವನ್ನು ದೂರಬೇಕೇ ವಿನಹ ಹೋರಾಟಕ್ಕೆ ನಿಂತ ವ್ಯಕ್ತಿಯೊಬ್ಬನನ್ನಲ್ಲ. ಇಂತಹ ಸಾಮಾಜಿಕ ಪರಿವರ್ತನೆಗಳ ಪ್ರಭಾವ ತಕ್ಷಣಕ್ಕೆ ಕಾಣಿಸಿಕೊಳ್ಳದೇ ಪೀಳಿಗೆಯಿಂದ ಪೀಳಿಗೆಗೆ ಕಾಣಿಸಿಕೊಳ್ಳುವುದು. ಯಾರೋ ಒಬ್ಬ ಅವತ್ತು ವಿದ್ಯೆಗಾಗಿ ದನಿಯೆತ್ತಿ ಹೋರಾಡಿದ ಫಲವನ್ನು ಇವತ್ತು ನಾವು ಉಣ್ಣುತ್ತಿದ್ದೇವಷ್ಟೆ. ನಿಷೇಧ ಇತ್ಯಾದಿಗಳೆಲ್ಲ ನಿಜಕ್ಕೂ ಸಾರಾಸಗಟಾಗಿ ಕೆಲಸಕ್ಕೆ ಬರುವಂತಿದ್ದರೆ ಅಸ್ಪೃಶ್ಯತೆ ಮತ್ತು ಸ್ತ್ರೀ ಅಸಮಾನತೆ ಯಾವತ್ತೋ ನಿವಾರಣೆಯಾಗುತ್ತಿತ್ತಲ್ಲವೇ? ಹಿರಿಯರಾದ ಜಿ. ರಾಜಶೇಖರ ಅವರು ಗಾಂಧಿ ಉಡುಪಿಗೆ ಬಂದಂತಹ ಸಂದರ್ಭವನ್ನು ಇತ್ತೀಚೆಗೆ ಗೌರಿ ಲಂಕೇಶ್ ಪತ್ರಿಕೆಯಲ್ಲಿ ನೆನಪಿಸಿಕೊಂಡಿದ್ದರು.

ಉಡುಪಿ ದೇಗುಲಕ್ಕೆ ಅವರನ್ನು ಆಹ್ವಾನಿಸಿದಾಗ ಅವರು ಕೇಳಿದ ಪ್ರಶ್ನೆಯೆಂದರೆ "ಇಲ್ಲಿ ಅಸ್ಪೃಶ್ಯರಿಗೆ ಪ್ರವೇಶವಿದೆಯೇ?" ಎಂದು. ಇಲ್ಲದಿದ್ದಲ್ಲಿ ನಾನು ಬರಲಾರೆನೆಂದು ಮುಖಕ್ಕೆ ಹೊಡೆದಂತೆ ಅಲ್ಲಿನ ಪಾರುಪತ್ಯಗಾರರಿಗೆ ಅವರು ಹೇಳಿದ್ದರು. ಕನಕದಾಸ, ನಿತ್ಯನಂದಸ್ವಾಮಿಯಂತವರನ್ನು (ಅವಧೂತ ನಿತ್ಯಾನಂದ ಸ್ವಾಮಿಯನ್ನು ಕಲ್ಲಿನಲ್ಲಿ ಹೊಡೆದೋಡಿಸಿದ್ದರು) ಕಂಡಿದ್ದ ಉಡುಪಿಯ ಧರ್ಮಾಂಧ ಪುರೋಹಿತಷಾಹಿಗಳ ಕಪಾಳಕ್ಕೆ ಗಾಂಧಿ ಅವತ್ತು ಈ ರೀತಿಯಾಗಿ ಹೊಡೆದಿದ್ದರು. ತತ್, ಮಾತಿನಲ್ಲಿ ಆ ರೀತಿ ಅಂದಾಕ್ಷಣ ದಲಿತೋದ್ಧಾರ ಆಯಿತಾ? ಎನ್ನುವವರಿಗೆ ಮೊನ್ನೆ ಕಾಗೋಡು ತಿಮ್ಮಪ್ಪನಂತಹ ಹಿರಿಯ ಮುತ್ಸದ್ಧಿಯೇ ಉಡುಪಿಯ ಚಿಲ್ಟು ಸ್ವಾಮಿಯ ಮುಂದೆ ನಡುಬಗ್ಗಿಸಿ ಪ್ರಸಾದ ಸ್ವೀಕರಿಸಿದ್ದು, ಜಿಗಜಿಣಗಿ ಪ್ರಕರಣ ಮುಂತಾದುವುಗಳನ್ನ ನೋಡಿದರೆ ಅಂತಹ ಧಾರ್ಮಿಕ ಜಿಗುಟಿನ ಕಾಲದಲ್ಲೇ ಗಾಂಧಿ ಆಡಿದ ಮಾತಿನ ಹಿಂದಿರುವ ಪ್ರಾಮಾಣಿಕತೆ, ನಿಷ್ಠುರತೆಯನ್ನು ಹಾಗು ತೀಕ್ಷ್ಣತೆಯನ್ನು ಅರ್ಥ ಮಾಡಿಕೊಳ್ಳಬಹುದು.

ಲೇಖಕರು, ರಾಜಕೀಯ ಶಕ್ತಿಯ ಮೂಲಕ ದಲಿತರ ಸಾಮಾಜಿಕ ಸಮಸ್... ಪರಿಹಾರಕ್ಕೆ ಮೂಲ ನೆಲೆಗಟ್ಟು ಒದಗುತ್ತದೆ ಸದ್ಯಕ್ಕೆ ಅಸ್ಪೃಶ್ಯರ ಪಾಲಿಗ... ಆಗದ ಮಾತು ಎಂದಿದ್ದಾರೆ. ಹೌದು, ದಲಿತರಲ್ಲಿ ಹಲವಾರು ಮು... ರಾಜಕಾರಣಿಗಳಿದ್ದಾರೆ. ಈ ಹಿಂದೆ ಆಗಿಯೂ ಹೋಗಿದ್ದಾರೆ. ಆದರೆ ಮುಖ್ಯ... ದಲಿತರಲ್ಲಿ ಅವಶ್ಯವಿರುವ ಸಾಮಾಜಿಕ ಸುಧಾರಣಾ ಪ್ರಕ್ರಿಯೆಗೆ ಭಂಗ ತರ... ಭ್ರಷ್ಟ ಸಮಯಸಾಧಕರೂ ಕೂಡ ಇಲ್ಲಿ ಹೆಚ್ಚಿದ್ದಾರೆಂಬುದೂ ಅಷ್ಟೇ... ಇತ್ತೀಚೆಗೆ ದಲಿತ ಸಿಎಂ ವಿಚಾರದಲ್ಲಿ ಪರಮೇಶ್ವರ್ ಪರ ಬ್ಯಾಟಿಂಗ್ ಮಾ... ಶಿವರಾಮರಂತವರ ಮಕ್ಕಳಿಗೆ ಮದುವೆಯಾಗಲು ಅತಿಯಾದ ಆಡಂಬ... ಬೇಕು. ಜೊತೆಗೆ ಅಳಿಯ ಬೇರೆ ಜಾತಿಯವನಿದ್ದರೇ ಚೆಂದ. (ಅಕಸ್ಮಿಕವ... ಆಕ್ಷೇಪವಿಲ್ಲ. ಆದರವರೀಗ ಹೈಪ್ರೊಫೈಲ್ ಜನರಲ್ಲವೇ!!?) ಅಂಗರನಂತವ... ವೈದಿಕ ಸೇವೆಗೆ ಜೈ ಎನ್ನುವ ಚಾಳಿಯಾದರೆ, ಜಿಗಜಿಣಗಿಯಂಥ... ರಾಜಕೀಯವಾಗಿ ಗಣ್ಯರಿದ್ದೂ ತಾವೇ "ಸ್ವಯಂಸ್ಫೂರ್ತಿ"ಯಿಂದ ದೇಗು... ಹೊರನಿಂತು ಆ ಮೂಲಕ ನಾಚಿಕೆ ಬಿಟ್ಟು ಮನುಧರ್ಮಕ್ಕೆ ತಮ್ಮ ಅಮ... ಕಾಣಿಕೆ ನೀಡಹೋಗುತ್ತಾರೆ. ಅದೂ ಈ ಕಾಲದಲ್ಲಿ, ಇಂಥವರೆಲ್ಲ ನಮ್ಮ... ಮುನ್ನಡೆಸುವವರು. ಮೋದಿ ಹಿಂದುಳಿದ ಜನಾಂಗದವನಾಗಿದ... ಹೇಳಿಕೊಳ್ಳಲಿಕ್ಕಷ್ಟೇ ಲಾಭ ಆದರೆ ಸೇವೆಯೆಲ್ಲ ವೈದಿಕರ ಪದತಲಕ್ಕೇ ತಾ... ದಲಿತರಿಗೆ ರಾಜಕೀಯಶಕ್ತಿ ರಾಜಕೀಯ ಪ್ರಾಮುಖ್ಯತೆ ಖಂಡಿತಾ ಬ... ಆದರೆ ಅಂಬೇಡ್ಕರ್ ಯೋಚನೆಯ ಹಿಂದಿದ್ದ ಈ ಕುರಿತ ಮುಂದಾಲೋ... ಬೇರೆಯದೇ ಇತ್ತೆಂಬುದು ಗಮನಾರ್ಹ. ದಲಿತರು ಮಂತ್ರಿಗಿರಿ ಪ... ತನ್ನವರನ್ನು ಹಾಗು ದಲಿತ ಪರ ಸಿದ್ಧಾಂತವನ್ನು ಕಡೆಗಣಿಸಿ ಸ್ವಾರ್ಥಿಗ... ಓಡಾಡುವುದಲ್ಲ. ಆದರೆ ಜಿಗಜಿಣಗಿ, ಅಂಗಾರರಂತವರನ್ನ ನೋಡಿ... ಏನನಿಸುತ್ತದೆ? ಲಂಕೇಶ್‌ನಲ್ಲಿ ಹಿಂದೊಮ್ಮೆ ವಿಕಾಸ್ ಆರ್ ಮೌರ್ಯ ಅ... ಅಂಬೇಡ್ಕರ್ ಈ ವರೆಗೆ ಎಳೆತಂದು ನಿಲ್ಲಿಸಿದ ರಥವನ್ನು ಮುನ್ನಡೆ... ಜವಾಬ್ದಾರಿಯ ಬಗ್ಗೆ ಬರೆದಿದ್ದರು. ಇಂಥವರೆಲ್ಲ ಆ ರಥವನ್ನೇ ವೈ... ಪದತಲಕ್ಕರ್ಪಿಸಲು ತುದಿಗಾಲಲ್ಲಿ ನಿಂತಂಥವರು. ದಲಿತರಲ್ಲಿ ಸ್ವಾಭಿ... ಇತ್ಯಾದಿ ಜಾಗೃತಿಯಾಗದೇ ಇಂತವರು ಇದ್ದೇನು ಪ್ರಯೋಜನ? ನನ್ನ ಹಿ... ಲೇಖನದಲ್ಲೇ ಬಸವಾನುಯಾಯಿಗಳಿಂದ ಬಸವಣ್ಣನನ್ನು ಹೇಗೆ ಅಳೆಯಲಾಗ... ಅದೇ ರೀತಿ ಗಾಂಧಿವಾದಿಗಳಿಗೂ ಗಾಂಧಿಗೂ ಸಂಬಂಧವಿಲ್ಲವೆಂದು ಬರೆದಿ... ಗಾಂಧಿಯ ನೆಪದಲ್ಲಿ ಗಾಂಧಿವಾದಿಗಳನ್ನು ದೂರುತ್ತಾ ಹೋದರೆ ಅ... ಕೇಳುವಂತಹ "ನಿಮ್ಮ ಹಾಗು ನಿಮ್ಮ ನಾಯಕರುಗಳಲ್ಲಿ ಎಷ್ಟು ವ... ಅಂಬೇಡ್ಕರ್ ತತ್ವಗಳಿಗೆ ಬದ್ಧರಾಗಿದ್ದೀರಿ?" ಎಂದು ಕೇಳುವ ಪ್ರಶ್ನೆ... ಉತ್ತರಿಸಲು ಸಾಧ್ಯವೇ?

(ಅಳಿವೆ ಅಂದರೆ ಸಮುದ್ರ ಹಾಗು ನದಿ ಸೇರುವ ಜಾಗ. ಈ... (ಸಿಹಿ- ಉಪ್ಪು) ಸೇರುವಲ್ಲಿ ಭಾರಿ ರಭಸ ತಾಕಲಾಟಗಳು ನಡೆದರೂ ... ಅದರದ್ದೇ ಆದ ಪ್ರಶಾಂತತೆ ಹಾಗು ಹೊಸ ಅಸ್ತಿತ್ವ ನೀರಿಗೆ ದೊರೆಯು...

- ಅವಿನಾಶ್ ಎಮ್.ಎಸ್. ನೆಲ್ಲಿ...

ಬೆಂಗಳೂರಿನಲ್ಲಿಯೇ ಕನ್ನಡ ಮೀಡಿಯಾಗಳು ಜುಜುಬಿ ಜಾಹೀರಾತು ಆದಾಯಕ್ಕಾಗಿ ಇಷ್ಟೊಂದು ಕನ್ನಡದ್ರೋಹಿ ಆಗಿರುವಾಗ ಗಡಿ ಪ್ರದೇಶವಾದ ಬೆಳಗಾವಿ ಮಂಗಳೂರು ಬೀದರ್ ಬಳ್ಳಾರಿಯ ಜನರು ಕನ್ನಡ ಅಭಿಮಾನ ಇಟ್ಟುಕೊಂಡು ಇತರ ಭಾಷಿಕರೊಂದಿಗೆ ಯಾಕೆ ವೈರ ಕಟ್ಟಿಕೊಳ್ಳಬೇಕು? ಸಾಮಾನ್ಯ ಜನರು ಕನ್ನಡ ಅಭಿಮಾನದಿಂದ ಕನ್ನಡ ವಾಹಿನಿ ನೋಡಬೇಕು ಹಾಗೂ ಕನ್ನಡ ಪತ್ರಿಕೆಗಳನ್ನೇ ಕೊಂಡು ಓದಬೇಕಂತೆ, ಆದರೆ ಸ್ವತಃ ಈ ಕನ್ನಡ ಮೀಡಿಯಾದವರು ಮಾತ್ರ ಪರಭಾಷೆಯನ್ನು ತಲೆ ಮೇಲೆ ಹೊತ್ತು ಮೆರೆಸುತ್ತವೆ. ಹಾಗಿರುವಾಗ ಸ್ವತಃ ಕನ್ನಡ ಮೀಡಿಯಾದವರಿಗಿಲ್ಲದ ಕನ್ನಡ ಅಭಿಮಾನ ಜನಸಾಮಾನ್ಯರಿಗೆ ಯಾಕೆ ಬೇಕು?

ನಾನು 2004 ರಲ್ಲಿ ನಮ್ಮ ಬ್ಯಾಂಕಿನ ಹೈದರಾಬಾದಿನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಹೈದರಾಬಾದ್ ನಗರದಲ್ಲಿ ಹಿಂದಿನ 12 ವರ್ಷಗಳಿಂದ ಒಂದೂ ಕನ್ನಡ ಸಿನಿಮಾ ಪ್ರದರ್ಶನವಾಗಿಲ್ಲವೆಂದು ತಿಳಿದ ಮೇಲೆ ನನ್ನ ಸ್ವಂತ ಖರ್ಚಿನಲ್ಲಿ ರಾಜಕುಮಾರ್ ಬ್ಯಾನರಿನ 'ಚಿಗುರಿದ ಕನಸು' ಎಂಬ ಹೊಸ ಕನ್ನಡ ಚಿತ್ರ ಪ್ರತಿಷ್ಠಿತ ಅಬಿಡ್ಸ್ ಪ್ರದೇಶದಲ್ಲಿ ಬೆಳಗಿನ ಆಟದಲ್ಲಿ ಪ್ರದರ್ಶಿಸಿದಾಗ ನಾನು ಅಲ್ಲಿಯ ತೆಲುಗು ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟಿದ್ದರೂ ಜತೆಗೆ ಸುದ್ದಿ ರೂಪದಲ್ಲಿ ಚಿತ್ರದ ಒಂದು ಸಣ್ಣ ಪರಿಚಯ ಸಹ ಹಾಕಲು ಅವರಿಗೆ ಕೇಳಿಕೊಂಡಾಗ ಹೈದರಾಬಾದಿನ ಯಾವುದೇ ತೆಲುಗು ಮತ್ತು ಇಂಗ್ಲಿಷ್ ಪತ್ರಿಕೆಗಳು ನನಗೆ ಸಹಕಾರ ಕೊಡಲಿಲ್ಲ, ಈ ನನ್ನ ಕನ್ನಡ ಅಭಿಮಾನದಿಂದ ನನಗೆ ಹನ್ನೆರಡು ಸಾವಿರ ರೂಪಾಯಿ ನಷ್ಟವಾಯಿತು ಅಷ್ಟೇ. ಆದರೆ ಈಗ ಸ್ವತಃ ಕನ್ನಡ ಮೀಡಿಯಾದವರ ಕನ್ನಡದ್ರೋಹ ನೋಡುವಾಗ ನನ್ನಂತಹ ಸಾಮಾನ್ಯರು ಇಟ್ಟುಕೊಳ್ಳುವ ಕನ್ನಡ ಅಭಿಮಾನ ಮೂರ್ಖತನದ್ದು ಅನಿಸುತ್ತಿದೆ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಇದ್ದಾರೆ ಇರಲೇಳು ಇಂಥ ಅಧಿಕಾರಿಗಳು

ಬೆಳ್ತಂಗಡಿಯ ಬಳಿ ಇರುವ 'ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ (ಎಸ್‌ಡಿಎಂ) ಸೊಸೈಟಿ'ಗೆ ಬರೋಬ್ಬರಿ 132 ಎಕರೆಯಷ್ಟು ಕೃಷಿ ಭೂಮಿಯನ್ನು ಆಗಿನ ಮೈಸೂರು ಉಪವಿಭಾಗಾಧಿಕಾರಿಗಳು 20.2.1993 ರ ದಿನಾಂಕದ ತಮ್ಮ ಆದೇಶದಲ್ಲಿ ಖರೀದಿಸಲು ನೀಡಿರುವ ಅನುಮತಿ ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ರ ಕಲಂ 63(7) ರ ಅನ್ವಯ ಕಾನೂನುಬಾಹಿರವಾದುದು ಎಂದು ಸ್ಪಷ್ಟಪಡಿಸಿ, ಸದರಿ ಖರೀದಿಸಿರುವ ಜಮೀನು ಮಾನ್ಯವಲ್ಲ-ಎಂದು ಹೇಳಿ ಸರ್ಕಾರದ ವಶಕ್ಕೆ ತಂದುಕೊಳ್ಳುವಂತೆ ಪರಾ ಬರೆದಿರುವ ಸಹಾಯಕ ಆಯುಕ್ತ ಬಸವರಾಜು ಅವರು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ (ಜುಲೈ 15 2015).

ಹಾಗೇ ಕಳೆದ ವರ್ಷ ಬಳ್ಳಾರಿ ಜಿಲ್ಲೆಯ ಶ್ರೀರಾಮಪುರ ಜಮೀನ್ದಾರರು ತಮ್ಮ ಹೊಲದಲ್ಲಿಯೇ ಜೀತ ಮಾಡುತ್ತಿದ್ದ ದಲಿತರ ಜಮೀನುಗಳನ್ನು ತಮ್ಮ ಹೆಸರಿಗೆ ಕಬ್ಜಾ ಮಾಡಿಸಿಕೊಂಡು ಅವರನ್ನು ಶೋಷಣೆಗೆ ಗುರಿ ಮಾಡುತ್ತಿದ್ದರು. ಅವರ ಅಕ್ರಮ ಜಮೀನು(ಸುಮಾರು 329 ಎಕರೆ)ಗಳನ್ನು ಪುನಃ ಆ ದಲಿತ ಕುಟುಂಬಗಳಿಗೆ ಬಿಡಿಸಿಕೊಟ್ಟ ಬಳ್ಳಾರಿ ಡಿಸಿ ಮತ್ತು ಹೊಸಪೇಟೆ ಎಸಿಗಳನ್ನು ಇಲ್ಲಿ ಸ್ಮರಿಸಬಹುದು.

ಗೌರಿ ಲಂಕೇಶ್ ಪತ್ರಿಕೆಯ ಇದೇ ಸಂಚಿಕೆಯಲ್ಲಿರುವ ಇನ್ನೊಂದು ಬರಹ 'ಅಪರೂಪದ ಅಧಿಕಾರಿ ಶೇಖರಪ್ಪ' ಎಂಬುದೂ ಗಮನಾರ್ಹ. ಚಿಕ್ಕಮಗಳೂರು ಜಿಲ್ಲೆಯೆಂದರೆ ಸಮಸ್ಯೆಗಳ ಆಗರ. ಬಾಬಾಬುಡನ್‌ಗಿರಿ ಮತಾಂಧರ ಚಟುವಟಿಕೆ, ನಕ್ಸಲ್ ಸಮಸ್ಯೆ ಅರಣ್ಯ ಒತ್ತುವರಿಗಳು ಇತ್ಯಾದಿ. ಶೇಖರಪ್ಪನವರು ಡಿಸಿಯಾಗಿ ಬಂದು ಸುಮಾರು ಎರಡು ವರ್ಷದೊಳಗೆ ಇಂಥ ಕೆಲವು ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿ ಜಿಲ್ಲೆಯ ಜನ ನೆಮ್ಮದಿಯಿಂದ ಬದುಕಲು ಅನುವು ಮಾಡಿಕೊಟ್ಟಿರುವುದು ಶ್ಲಾಘನೀಯ.

ಇದೇ ಪ್ರಕಾರ ದಕ್ಷತೆಯಿಂದ ಜನಪರ ಕಾರ್ಯ ನಿರ್ವಹಿಸುತ್ತಿದ್ದ ಇನ್ನೊಬ್ಬ ಡಿಸಿ ಡಿ.ಕೆ. ರವಿ ಕೂಡ. ಆದರೆ ಇವರು ತಮ್ಮ ವೈಯಕ್ತಿಕ ಕಾರಣಗಳಿಂದ ಮನೋದೌರ್ಬಲ್ಯಕ್ಕೆ ತುತ್ತಾಗಿ ಆತ್ಮಹತ್ಯೆ ಮಾಡಿಕೊಂಡದ್ದು ದುರ್ದೈವ. ಹಾಗೆ ನೋಡಿದರೆ ಮಂಡ್ಯ ಜಿಲ್ಲೆ ಎ.ಸಿ. ರೋಹಿಣಿ ಕೂಡ ದಕ್ಷ ಅಧಿಕಾರಿಯೇ ಇಂಥವರು ಇನ್ನು ಕೆಲವರಿರಬಹುದು. ಹೀಗೆ ಬಸವರಾಜು, ಶೇಖರಪ್ಪನಂಥ ಹತ್ತಿಪ್ಪತ್ತು ಜನ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು ಇದ್ದರೆ ಅವರು ಯಾವುದೇ ಸರ್ಕಾರಕ್ಕೆ ಹೆಸರು ತರಬಲ್ಲರು. ಇಂಥವರನ್ನು ಜನ 'ಇದ್ದಾರೆ ಇರಲೇಳು ಇಂಥ ಅಧಿಕಾರಿಗಳು' ಎಂದು ಅಪೇಕ್ಷಿಸದಿರಲಾರರು.

-ಪ್ರೊ. ಶಿವರಾಮಯ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ವ್ಯಾಪಾರಿ ಗುಣದ ಜತೆಗೆ ಕಲೆಯೂ ಮುಖ್ಯ: ಬಿ.ಕೆ.ಶ್ರೀನಿವಾಸ್

ಕಲಾತ್ಮಕ ಮತ್ತು ವ್ಯಾಪಾರಿ ಎರಡೂ ಬಗೆಯ ಸಿನಿಮಾಗಳನ್ನು ನಿರ್ಮಾಣ ಮಾಡಿದ ಹೆಗ್ಗಳಿಕೆ ಬಿ.ಕೆ.ಶ್ರೀನಿವಾಸ್ ಅವರದ್ದು. ಸಿನಿಮಾ ರಂಗವೇ ಬೇಡವೆಂದು ಹೋಗಿದ್ದವರು ಮತ್ತೆ ವಾಪಸ್ಸಾಗಿ ಹಲವು ಚಿತ್ರಗಳನ್ನು ಮಾಡಿದ್ದಾರೆ. ಆ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.



ಹನ್ನೊಂದನೇ ವಯಸ್ಸಿನಲ್ಲಿ ಇರುವಾಗಲೇ ಸಿನಿಮಾದ ಬಗೆಗೆ ಆಸಕ್ತಿ ಬೆಳೆಸಿಕೊಂಡವರು ನಿರ್ಮಾಪಕ ಬಿ.ಕೆ.ಶ್ರೀನಿವಾಸ್. ವ್ಯಾಪಾರಿ ಮನೋಭಾವದ ನಿರ್ಮಾಪಕರ ಮಧ್ಯೆಯೂ ಕಲಾತ್ಮಕ ಸಿನಿಮಾಗಳಿಗೆ ಹಣ ಹೂಡಿದವರು. ಬರಗೂರು ರಾಮಚಂದ್ರಪ್ಪರಿಂದ ಹಿಡಿದು ಈ ಹೊತ್ತಿನ ಯುವ ನಿರ್ದೇಶಕರ ಸಿನಿಮಾಗಳನ್ನು ನಿರ್ಮಾಣ ಮಾಡಿದ ಹೆಗ್ಗಳಿಕೆ ಇವರದ್ದು. ಲಾಭಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು. ಆದರೂ, ಸಿನಿಮಾ ಪ್ರೀತಿ ಮಾಸಿಲ್ಲ. ಸಿನಿಮಾಗಾಗಿಯೇ ಆಡಿಯೋ ಸಂಸ್ಥೆ ಖರೀದಿಸಿದರು. ಸಾಕಷ್ಟು ಸಿನಿಮಾಗಳಿಗೆ ಪರೋಕ್ಷವಾಗಿ ಸಹಾಯ ಮಾಡಿದರು. ಸದ್ಯ ಸಾ.ರಾ.ಗೋವಿಂದು ಪುತ್ರ ಅನೂಪ್‌ನನ್ನು 'ಡವ್' ಸಿನಿಮಾದ ಮೂಲಕ ಸಿನಿಮಾ ಇಂಡಸ್ಟ್ರಿಗೆ ಪರಿಚಯಿಸುತ್ತಿದ್ದಾರೆ.

** ಸಿನಿಮಾರಂಗಕ್ಕೆ ಬಂದಿದ್ದು ಹೇಗೆ?*

ಹನ್ನೊಂದನೇ ವರ್ಷಕ್ಕೆ ನಾನು ಸಿನಿಮಾದ ಬಗ್ಗೆ ಆಸಕ್ತಿ ಬೆಳೆಸಿಕೊಂಡೆ. ತೀರಾ ಬಡತನದ ಕುಟುಂಬ. ಕಾರ್ಪೋರೇಷನ್ ಶಾಲೆಯಲ್ಲಿ ಓದುತ್ತಿದ್ದೆ. ಜತೆಗೆ ಹಸು ಕಾಯುತ್ತಿದ್ದೆ. ಹತ್ತನೇ ತರಗತಿ ಫೇಲ್ ಆದೆ. ಆನಂತರ ಓದುವುದನ್ನು ನಿಲ್ಲಿಸಿ, ಹಸುವನ್ನೇ ನಂಬಿದೆ. ಹಸು ಕಾಯಿಸಿಕೊಂಡು ಬರೋದು, ಆ ನಂತರ ಸಿನಿಮಾ ನೋಡುವುದು-ಇದೇ ನನ್ನ ಕೆಲಸ ಆಯಿತು. 1981 ಅನಿಸತ್ತೆ, ಸಾಗರ್ ಥಿಯೇಟರ್‌ಗೆ 'ಶಂಕರ್ ಗುರು' ಸಿನಿಮಾ ಬಂದಿತ್ತು. ಲೆಕ್ಕವಿಲ್ಲದಷ್ಟು ಬಾರಿ ಸಿನಿಮಾ ನೋಡಿದೆ. ಹೀಗೆ ಸಿನಿಮಾ ಬಗ್ಗೆ ಆಸಕ್ತಿ ಬಂದಿದ್ದು.

** ನೇರವಾಗಿ ನಿರ್ಮಾಣಕ್ಕೆ ಇಳಿದಿರಾ?*

ಇಲ್ಲ, ಅದಕ್ಕಿಂತ ಮುಂಚೆ ನಾನಾ ವಿಭಾಗಗಳಲ್ಲಿ ಕೆಲಸ ಮಾಡಿದ್ದೇನೆ. ಈಗ ನಾನು ಏನೇ ಇರಬಹುದು. ಈ ಹಿಂದೆ ನಾನು ಥಿಯೇಟರ್‌ನಲ್ಲಿ ಕೆಲಸ ಮಾಡುವ ಕಾರ್ಮಿಕ. ಸಿನಿಮಾ ನೋಡೋಕೆ ದುಡ್ಡು ಇರ್ತಾ ಇರ್ಲಿಲ್ಲ. ಅದಕ್ಕಾಗಿ ನಾನು ಸಿನಿಮಾ ಥಿಯೇಟರ್‌ನಲ್ಲೇ ಕೆಲಸ ಹುಡುಕಿಕೊಂಡೆ. ಕೆಲಸ ಮಾಡುತ್ತಲೇ ಸಾಕಷ್ಟು ಸಿನಿಮಾಗಳನ್ನು ನೋಡಿದೆ. ಅದರಲ್ಲೂ ಅತಿಹೆಚ್ಚು ರಾಜ್‌ಕುಮಾರರ ಸಿನಿಮಾ ನೋಡಿದೆ.

** ಸಾಮಾನ್ಯವಾಗಿ ನಟನಾಗುವ ಕನಸು ಎಲ್ಲರದ್ದು. ಏನಿದು ಥಿಯೇಟರ್ ಕೆಲಸ?*

ನಾನು ಅಲ್ಲಿ ಕೆಲಸ ಮಾಡದೇ ಇದ್ದಿದ್ದರೆ, ಇವತ್ತು ನಿರ್ಮಾಪಕ ಆಗ್ತಾ ಇರಲಿಲ್ಲ, ಆ ಕೆಲಸ ನನ್ನ ಬದುಕಿಗೆ ಬಹುದೊಡ್ಡ ತಿರುವು ನೀಡಿತು. ನಾನು ಹತ್ತನೇ ತರಗತಿ ಓದಿದ್ದರೂ, ಸಿನಿಮಾ ನನಗೆ ತುಂಬಾನೇ ಕಲಿಸಿತು. ಸಿನಿಮಾಗಳಿಂದಾಗಿ ನಾನು ಅನೇಕ ವಿಷಯಗಳನ್ನು ಕಲಿತೆ. ಹೀಗಾಗಿ ಸಿನಿಮಾ ರಂಗಕ್ಕೆ ಏನಾದರೂ ಕೊಡುಗೆ ಕೊಡಬೇಕು ಅನ್ನಿಸಿತು. ಅದರಲ್ಲೂ ಸಣ್ಣ ಬಜೆಟ್ ಸಿನಿಮಾಗಳು ನಿರ್ಮಾಣ ಆಗಲಿ ಎಂಬ ಬಯಕೆ ಹೆಚ್ಚಾಯಿತು. ಹೀಗಾಗಿ ಸಿನಿಮಾ ರಂಗಕ್ಕೆ ಬಂದೆ.

** ಮೊದಲ ಸಿನಿಮಾದ ಸೋಲಿನಿಂದಾಗಿ ಚಿತ್ರರಂಗ ಬಿಡುವ ಮಾತುಗಳನ್ನು ಆಗ ಆಡಿದ್ದೀರಿ. ಯಾಕೆ ಅಂತಹ ನಿರ್ಧಾರ ತೆಗೆದುಕೊಳ್ಳಬೇಕು ಅನಿಸಿತು?*

ಆ ಕಾಲದಲ್ಲೇ ಅಷ್ಟೊಂದು ಖರ್ಚು ಮಾಡಿದೆ. ಆದರೆ, ನನ್ನಿಷ್ಟದಂತೆ ಸಿನಿಮಾ ಬರದೇ ಹೋದಾಗ ಕೋಪ ಬರುತ್ತದೆ. ಅಂತಹ ಕೋಪದ ಮಾತುಗಳು ಅವು. ಆನಂತರ ಸಿನಿಮಾ ರಂಗದ ಅನೇಕರು ನನ್ನನ್ನು ಸಂಪರ್ಕಿಸಿದರು. ನಿಮ್ಮಂಥೋರು ಸಿನಿಮಾರಂಗದಿಂದ ದೂರ ಹೋಗಬಾರದು ಅಂತ ಕೇಳಿಕೊಂಡರು. ಹೀಗಾಗಿ 'ಜೋಗಯ್ಯ' ಸಿನಿಮಾದ ಮೂಲಕ ಮತ್ತೆ ವಾಪಸ್ಸಾದೆ. ಯಾರೂ ನಿರೀಕ್ಷೆ ಮಾಡದೇ ಇರುವಷ್ಟು ದುಡ್ಡು ಕೊಟ್ಟು ವಿತರಣಾ ಹಕ್ಕು ಖರೀದಿ ಮಾಡಿದೆ. ಅದು ಕೂಡ ಸಿನಿಮಾ ಪ್ರೀತಿಗೆ.

** ವಿತರಕನಾಗಿ ಕಳೆದುಕೊಂಡಿದ್ದೀರಿ. ನಿರ್ಮಾಪಕನಾಗಿ ಗಳಿಸಿದ್ದೇನು?*

ಅಲ್ಲಿಯೂ ಕಳೆದುಕೊಂಡೆ. 'ಅಲೆಮಾರಿ' ಅನ್ನುವ ಸಿನಿಮಾ ಮಾಡಿದೆ. ಅದಕ್ಕೆ ರಾಜ್ಯ ಪ್ರಶಸ್ತಿ ಬಂತು. ಆನಂತರ 'ಭಾಗೀರತಿ' ಚಿತ್ರ ಮಾಡಿದೆ. ಅದಕ್ಕೂ ಪ್ರಶಸ್ತಿ ಬಂತು. 'ಅಂಗುಲಿ ಮಾಲ'ಕ್ಕೂ ರಾಜ್ಯ ಪ್ರಶಸ್ತಿ ಬಂತು. ಈಗ 'ಡವ್' ಸಿನಿಮಾ ಮಾಡುತ್ತಿದ್ದೇನೆ. ನನ್ನ ಸಿನಿಮಾದಿಂದ ತಂತ್ರಜ್ಞರಿಗೆ, ಕಲಾವಿದರಿಗೆ ಮತ್ತು ನಿರ್ದೇಶಕರಿಗೆ ಹೆಸರು ಬಂದಿದೆ. ಆ ಖುಷಿ ನನ್ನಲ್ಲಿದೆ. ಆದರೆ, ನಿರ್ಮಾಪಕನಾಗಿ ನಾನು ಯಾವ ಲಾಭವನ್ನೂ ಪಡೆದಿಲ್ಲ, ಅದು ನಿರ್ಮಾಪಕನಿಗೆ ಆಗುವ ಅನ್ಯಾಯವೋ ಏನೋ ಗೊತ್ತಿಲ್ಲ.

** 'ಡವ್' ಸಿನಿಮಾದ ಬಗ್ಗೆ ಹೇಳಿ.*

ಈ ಸಿನಿಮಾದ ಮೂಲಕ ಹಿರಿಯ ನಿರ್ದೇಶಕ, ಕನ್ನಡದ ಹೋರಾಟಗಾರ ಸಾ.ರಾ.ಗೋವಿಂದು ಅವರ ಪುತ್ರ ಅನೂಪ್ ಸಿನಿಮಾರಂಗಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಅಲ್ಲದೇ ಸಂತು ನಿರ್ದೇಶನದ ಸಿನಿಮಾ ಇದು. ಈ ಹುಡುಗನ ಚೊಚ್ಚಲು ಚಿತ್ರಕ್ಕೆ ನಾನೇ ಹಣ ಹೂಡಿದ್ದೆ, ಒಳ್ಳೆಯ ನಿರ್ದೇಶಕರ ಅವಶ್ಯಕತೆ ಇದೆ. ಹೀಗಾಗಿಯೇ ಹೊಸ ಹುಡುಗರಿಗೆ ಅವಕಾಶ ಕೊಡುತ್ತಲೇ ಇರುತ್ತೇನೆ. ■


ಗೋವಾ ಪ್ರಭುತ್ವದ ಪಾತಕ!

04 ◀◀

ಹೃದಯವಿದ್ರಾವಕವಾಗಿತ್ತು.


ವಿಪರ್ಯಾಸ ಎಂದರೆ, ಆ ಜನರ ಗೋಳು ಕರ್ನಾಟಕದ ಆಳುವ ವರ್ಗಕ್ಕೆ ಅರ್ಥವೇ ಆಗಲಿಲ್ಲ. ಬೇಡದಿದ್ದಕ್ಕೆಲ್ಲ ಬೊಬ್ಬೆ ಹೊಡೆದು ಕನ್ನಡದ ಕಟ್ಟಾಳುಗಳು ತಾವೆಂದು ಪೋಸು ಕೊಡುವ ಗೌಡ, ಶೆಟ್ಟಿ, ವಗೈರೆ ಕನ್ನಡ ಓರಾಟಗಾರರಿಗೂ ಗೋವಾ ಕನ್ನಡಿಗರ ಕಷ್ಟ-ನಷ್ಟ ಕಾಣಿಸಲಿಲ್ಲ. ಈ ನಿರ್ಗತಿಕರ ಪರ ವಹಿಸಿದರೆ ಗಿಟ್ಟುವುದು ಏನೂ ಇಲ್ಲವೆಂಬುದೇ ಓರಾಟಗಾರ-ಹಾರಾಟಗಾರರೆಲ್ಲ ಗೋವಾದ ಗೂಂಡಾಗಿರಿ ಕಂಡೂ ಕಾಣದಂತಿರಲು ಕಾರಣವಾಗಿತ್ತು. ಕರ್ನಾಟಕ ಸರ್ಕಾರ ಕಾಟಾಚಾರಕ್ಕೆ ಕಾರವಾರದ ಡಿಸಿಯನ್ನು ನಿರಾಶ್ರಿತ ಕನ್ನಡಿಗರ ಬಳಿ ಕಳಿಸಿತು. ಪ್ರಯೋಜನವೇನೂ ಆಗಲಿಲ್ಲ. ಸುರಿವ ಮಳೆಯಲ್ಲಿ ಮುದುಕರು, ಮಕ್ಕಳು, ಬಾಣಂತಿಯರು, ಮಹಿಳೆಯರು ಬಿದ್ದು ಒದ್ದಾಡಿದರು. ಬಹಿರ್ದೆಸೆಗೂ ಹೋಗಲಾಗದೆ ಮಹಿಳೆಯರು, ಮಕ್ಕಳು ತತ್ತರಿಸಿದ್ದು ಭೀಭತ್ಸವಾಗಿತ್ತು. ಆ ನಂತರ ಗೋವಾಕ್ಕೆ ಬಂದವನು ಸಿದ್ದು ಸರ್ಕಾರದ ಸೀನಿಯರ್ ಸಚಿವಾಗ್ರೇಸ್ ಆರ್.ವಿ. ದೇಶಪಾಂಡೆ. ಈತ ಬೈನಾ ನಿರಾಶ್ರಿತರ ಬಳಿಗೆ ಹೋಗಲೇ ಇಲ್ಲ. ಮಾಜಿ ಸಿಎಂ, ಹಾಲಿ ವಿರೋಧ ಪಕ್ಷದ ನಾಯಕ ಪ್ರತಾಪ ಸಿಂಹ ರಾಣೆ ಮನೆಯಲ್ಲಿ ತಿಂದುಂಡು ಹೋದರು.

ದೇಶಪಾಂಡೆ ಹೀಗೆ ಬಂದು ಹಾಗೆ ಹೋದರು. ಬೆಂಗಳೂರಲ್ಲಿ ಸಿಆರ್‌ಝಡ್ ವಲಯದಲ್ಲಿರುವ ಗೋವಾ ಕನ್ನಡಿಗರನ್ನು ಒಕ್ಕಲೆಬ್ಬಿಸಿದ್ದು ಸರಿಯಾಗೇ ಇದೆಯೆಂದು ಸ್ಟೇಟ್‌ಮೆಂಟ್ ಒಗಾಯಿಸಿದ್ದ ದೇಶಪಾಂಡೆ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಗೋವಾಕ್ಕೆ ಬಂದರೂ ಭಾವನೆಯಲ್ಲಿ ಬದಲಾಗಿರಲಿಲ್ಲ. ಹೀಗಾಗಿ ಆತ ಎರಡೆರಡು ಬಾರಿ ಬಂದುಹೋದರೂ ನಿರಾಶ್ರಿತ ಕನ್ನಡಿಗರಿಗೆ ಪೈಸೆ ಪ್ರಯೋಜನವಾಗಲಿಲ್ಲ. ಬದಲಿಗೆ ಆತ 'ಬೆಂಗಳೂರಿನ ಏಟಿ-ಬಿಟಿ ಕಂಪನಿಯಲ್ಲಿ ಗೋವಾದವರಿದ್ದಾರೆ...' ಎಂದು ಹುಚ್ಚುಚ್ಚು ಹಲುಬಿದ್ದು ಉಲ್ಟಾ ಹೊಡೆಯಿತು.



ಗೋವಾ ಕನ್ನಡಿಗರಿಗೆ ಮತ್ತಷ್ಟು ಕಷ್ಟ ಬಂತು.

ಮುರುಘಾ ಮಠದ ಸ್ವಾಮಿ, ಪಂಚಮಸಾಲಿ ಲಿಂಗಾಯತರ ಮಠದ ಮೃತ್ಯುಂಜಯ ಸ್ವಾಮಿಯಂಥವರೂ ಬಂದುಹೋದರು. ಒಂದಿಷ್ಟು ಅನ್ನ, ವಸ್ತ್ರ ನೀಡಿದರು. ಆದರೆ ದುಡಿವ ಕೈಗಳಿಗೆ ಕೆಲಸ ಕೊಡುವ ಅಥವಾ ಸರ್ಕಾರ ಅಧಿಕೃತವಾಗಿ ಮನೆ ಕೊಡುವಂತೆ ಮಾಡುವ ಶಾಶ್ವತ-ತಾರ್ಕಿಕ ಪರಿಹಾರ ಕಂಡುಕೊಳ್ಳಲು ಆಗಲೇ ಇಲ್ಲ. ಕೆಲವು ದಿನಗಳ ಹಿಂದೆ ಗೋವಾ ಕನ್ನಡಿಗರ ಮೇಲೆ ಕನ್ನಡಿಗರ ಪರ ಹೋರಾಟದ 'ಕಸುಬುದಾರ' ವಾಟಾಳ್ ನಾಗರಾಜ್ ಮತ್ತು ಉತ್ತರ ಕರ್ನಾಟಕ ರಾಜ್ಯ ಬೇಡಿಕೆಯ ಕೂಗುಮಾರಿ ಶಾಸಕ ಎ.ಎಸ್. ಪಾಟೀಲ್ ನಡಹಳ್ಳಿಯ ದಿವ್ಯದೃಷ್ಟಿ ಬಿದ್ದಿತ್ತು. ಗೋವಾಕ್ಕೆ ಮುತ್ತಿಗೆ ಹಾಕುವುದಾಗಿ ಕಾರವಾರದ ತನಕ ಬಂದಿದ್ದ ವಾಟಾಳ್‌ರನ್ನು ಅಲ್ಲೇ ಬಂಧಿಸಲಾಯ್ತು; ಬೈನಾದಲ್ಲಿ ವಾಟಾಳ್‌ಗಾಗಿ ಕಾದಿದ್ದ ನಿರಾಶ್ರಿತರು ತಮಗ್ಯಾರೂ ದಿಕ್ಕಿಲ್ಲವೆಂದು ಹತಾಶರಾದರು.



ಈಚೆಗೆ ಬೈನಾದ ಕಿನಾರಿ ಕ್ಷೇತ್ರ ಪ್ರಾಧಿಕಾರ ಕಿನಾರೆಯಲ್ಲಿರುವ 154 ಕನ್ನಡಿಗರ ಮನೆ ತೆರವಿಗೆ ಮುಂದಾಗುತ್ತಿದ್ದಂತೆಯೇ ಗೋವಾಕ್ಕೆ ಎಂಟ್ರಿ ಕೊಟ್ಟಾತ 'ಕ್ರಾಂತಿಕಾರಿ' ನಡಹಳ್ಳಿ ಪಾಟೀಲ. ಕೆಲವು ದಿನ ಮರದಡಿ ನಿರಾಶ್ರಿತ ಜತೆ ಧರಣಿ ಕುಳಿತಿದ್ದ ನಡಹಳ್ಳಿ ಇದ್ದಕ್ಕಿದ್ದಂತೆ ಎದ್ದು ಹೋದವರು ಇವತ್ತಿಗೂ ಇತ್ತ ಬಂದಿಲ್ಲ. ಗೋವಾ ಸರ್ಕಾರ ಮುಂಬೈನ ಹೈಕೋರ್ಟ್‌ನ ಗೋವಾಖಂಡ ಪೀಠ 1995ರ ಮೊದಲು ಗೋವಾದಲ್ಲಿ ನೆಲೆಸಿದ ದಾಖಲೆ ಒದಗಿಸಿದವರಿಗಷ್ಟೇ ಬದಲಿ ವ್ಯವಸ್ಥೆ ಮಾಡಲು ಹೇಳುತ್ತಿದ್ದಂತೆ ವಿಧ್ವಂಸಕ ಕಾರ್ಯಾಚರಣೆಗೆ ದಕ್ಷಿಣ ಗೋವಾ ಆಡಳಿತ ಸರ್ವ ಸನ್ನದ್ಧವಾಗಿ ಬಿಟ್ಟಿತು. 154 ಮನೆಗಳವರಲ್ಲಿ ಕೇವಲ 33 ಮಂದಿಗಷ್ಟೇ ಗೋವಾ ಸರ್ಕಾರ ಕೇಳಿದ ತರಹೇವಾರಿ ದಾಖಲೆ ಪೂರೈಸಲು ಸಾಧ್ಯವಾಗಿದೆ!

ಅಂದರೆ 121 ಮನೆಗಳ ಕಿತ್ತೆಸೆಯಲು ಗೋವಾ ಸರ್ಕಾರ ಸಿದ್ಧವಾಗಿದೆ. ಕಾರ್ಯಾಚರಣೆ ಯಾವ ಕ್ಷಣದಲ್ಲಾದರೂ ಶುರುವಾಗುವ ಸಾಧ್ಯತೆಯಿದೆ. ಕಳೆದ ಏಪ್ರಿಲ್‌ನಲ್ಲೇ 205 ಮನೆಗಳ ತೆರವಿಗೆ ಸರ್ಕಾರ ಸಂಚು ಮಾಡಿ ನೋಟಿಸ್ ಜಾರಿಗೊಳಿಸಿತ್ತು, ವಿದ್ಯುತ್, ನೀರು ಪೂರೈಕೆ ನಿಲ್ಲಿಸಿ ಶತ್ರುಗಳ ಕಾಡುವಂತೆ ಸೇಡಿನ ಆಪರೇಷನ್ ಆರಂಭಿಸಿತ್ತು! ಜನರು ಹಲವು ಕಿಲೋಮೀಟರ್ ನಡೆದು ನೀರು ತರುವಂತಾಗಿದೆ. ಶಾಲೆ ಶುರುವಾಗುವ ಹೊತ್ತಲ್ಲೇ ನೋಟಿಸ್ ಬಂದಿದ್ದರಿಂದ ಹಲವರು ಮಕ್ಕಳನ್ನು ಶಾಲೆ-ಹೈಸ್ಕೂಲುಗಳಿಗೆ ಸೇರಿಸಿಲ್ಲ. ನೆಲೆ ತಪ್ಪಿದರೆ ಶಾಲೆಗೆ ಹೋಗೋದಾದರೂ ಎಲ್ಲಿಂದ? ಎದೆ ಎತ್ತರಕ್ಕೆ ಬಂದ ಮಕ್ಕಳ ವಿದ್ಯೆಗೆ ಗೋವಾ ಕಲ್ಲು ಹಾಕಿದೆ. ಕನ್ನಡಿಗರು ಯಮಯಾತನೆ ಅನುಭವಿಸುತ್ತಿದ್ದಾರೆ.

ಬದುಕು ಬರ್ಬಾದ್ ಆಗುವ ದುರಂತಕ್ಕೆ ಕನ್ನಡಿಗರು ಸಿಲುಕಿ ವಿಲವಿಲ ಒದ್ದಾಡುತ್ತಿದ್ದರೂ ಈವರೆಗೆ ಸರ್ಕಾರ, ಕನ್ನಡ ಓರಾಟಗಾರರು, ಕನ್ನಡ ಪರ ಸಂಘ-ಸಂಸ್ಥೆಗಳು ಅಥವಾ ಮಠಾಧೀಶರು ಎಚ್ಚೆತ್ತುಕೊಂಡಿಲ್ಲ. ಬೈನಾ ಆಪರೇಷನ್ ಆದಾಗ ಅಕ್ಕಿ-ಬಟ್ಟೆ ಹಂಚಿ ಪ್ರಚಾರ ಪಡೆಯುವ ಹಿಕಮತ್ತಿನ ಲೀಡರ್‌ಗಳು-ಮಠಾಧೀಶರಿಂದ ಬೈನಾ ಕನ್ನಡಿಗರ ಸಮಸ್ಯೆಗೆ ತಾರ್ಕಿಕ ಪರಿಹಾರ ಸಿಗುವುದು ಸಾಧ್ಯವೇ ಇಲ್ಲ. ಬೈನಾ ಬೀಚ್‌ನಲ್ಲಿರುವ ಕನ್ನಡಿಗರ 'ಅಧಿಕೃತ' ಮನೆಗಳನ್ನು ಹಂತ-ಹಂತವಾಗಿ ನೆಲಸಮ ಮಾಡುವ ಪ್ಲಾನ್ ಗೋವಾ ಸರ್ಕಾರ ಹಾಕಿಕೊಂಡಿದೆ. ಈಗ ಹಿಟ್‌ಲಿಸ್ಟ್‌ನಲ್ಲಿರುವ 154 ಮನೆಗಳ ಆಪರೇಷನ್ ನಂತರ ಉಳಿಯುವ ಸುಮಾರು 200 ಮನೆಗಳಿಗೂ ಇದೇ ಗತಿ ಗ್ಯಾರಂಟಿ!

ಇನ್ನಾದರೂ ಸಿದ್ದು ಸರ್ಕಾರ ಮತ್ತು ಕನ್ನಡ ಹೋರಾಟಗಾರರು ಎಚ್ಚೆತ್ತುಕೊಳ್ಳುವರಾ? ಒಕ್ಕೂಟ ವ್ಯವಸ್ಥೆ ಮೂಲಭೂತ ತತ್ವಕ್ಕೆ ಧಿಕ್ಕಾರ ಹಾಕಿ ದಾದಾಗಿರಿ ಮಾಡುತ್ತಿರುವ ಗೋವಾಕ್ಕೆ ಸಾಮರಸ್ಯ-ಸೌಹಾರ್ದತೆ-ಮನುಷ್ಯತ್ವ-ನೆರೆಹೊರೆ ಸ್ನೇಹದ ತತ್ವ ಕಲಿಸುವ ತಾಕತ್ತು ಯಾರಿಗಿದೆ?

■ ನಹುಷ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 29-07-2015 RNI No. KARKAN200



ಪ್ರೀತಿಗಾಗಿ ಪುನೀತ್ ಹಾಡು


ನಿಹಾಲ್ ನಟನೆಯ 'ಪ್ರೀತಿ ಕಿತಾಬು' ಚಿತ್ರದ ಟೈಟಲ್ ಹಾಡನ್ನು ಪುನೀತ್ ರಾಜ್‌ಕುಮಾರ್ ಹಾಡಿದ್ದಾರೆ. ವಿ. ಮನೋಹರ್ ಅವರ ಸಂಗೀತ ಸಾಹಿತ್ಯದಲ್ಲಿ ಈ ಹಾಡು ಮೂಡಿಬಂದಿದೆ. 'ಕೇಳಿ ಮಾರಾಯ್ರು.. ಸ್ವಾಮಿ ಕೇಳಿ ಯಜ್ಮಾನ್ರೆ... ನೋಡಿ ಸಾವ್ಕಾರ್ರೆ ಎಲ್ಲ ಸೂಪರ್ ಅಂತಾರೇ... ಪ್ರೀತೀ ಕಿತಾಬು ಆಹಾ ಪ್ರೀತಿ ಕಿಬಾಬು' ಎಂಬ ಸಾಹಿತ್ಯ ಇರುವ ಈ ಹಾಡು ಪುನೀತ್ ಧ್ವನಿಯಲ್ಲಿ ಸೂಪರ್ ಆಗಿ ಮೂಡಿಬಂದಿದೆ ಅಂತಾರೆ ನಿರ್ದೇಶಕರು.

ಈ ಹಾಡಿನ ಮತ್ತೊಂದು ವಿಶೇಷ ಅಂದರೆ, ಇಡೀ ಹಾಡಿನಲ್ಲಿ ಕನ್ನಡದ ವಿಭಿನ್ನವಾದ ಭಾಷಾಶೈಲಿಯನ್ನು ಬಳಸಿಕೊಳ್ಳಲಾಗಿದೆ. ಕೊಡಗು, ಕೊಂಕಣಿಯ ಶೈಲಿಯನ್ನೂ ಇಲ್ಲಿ ಬಳಸಿಕೊಳ್ಳಲಾಗಿದೆ.

ಇದು ಚಿತ್ರದ ಪ್ರಮೋಷನಲ್ ಹಾಡಾಗಿಯೂ ಮತ್ತು ಚಿತ್ರದ ಟೈಟಲ್ ಹಾಡಾಗಿಯೂ ಮೂಡಿಬರಲಿದೆ ಅನ್ನುವುದು ನಿರ್ದೇಶಕರ ಮಾತು. ಸಿನಿಮಾದಲ್ಲಿ ಇನ್ನೂ ನಾಲ್ಕು ಹಾಡುಗಳಿದ್ದು ಅವುಗಳನ್ನು ಜಾವಿದ್ ಅಲಿ, ಟಿಪ್ಪು, ರಾಜೇಶ್ ಕೃಷ್ಣನ್, ಅನುರಾಧ ಭಟ್ ಹಾಡಿದ್ದಾರೆ.

ಆಟಗಾರ ಚೈತನ್ಯ

'ಆ ದಿನಗಳು' ಸೇರಿದಂತೆ ಹಲವು ಸಿನಿಮಾಗಳ ನಿರ್ದೇಶನ ಮಾಡಿರುವ ಕೆ.ಎಂ.ಚೈತನ್ಯ ಈಗ ಮತ್ತೊಂದು ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಈ ಚಿತ್ರಕ್ಕೆ 'ಆಟಗಾರ' ಎಂದು ಹೆಸರಿಟ್ಟಿದ್ದಾರೆ. ದ್ವಾರಕೀಶ್ ಚಿತ್ರ ಲಾಂಛನದಲ್ಲಿ ಮೂಡಿಬಂದಿರುವ ಈ ಚಿತ್ರವು ಈಗಾಗಲೇ ಸಂಪೂರ್ಣ ಚಿತ್ರೀಕರಣ ಮುಗಿಸಿದೆ. ಸದ್ಯದಲ್ಲೇ ಬಿಡುಗಡೆ ಮಾಡುವ ಮಾತುಗಳನ್ನು ಆಡಿದ್ದಾರೆ ನಿರ್ದೇಶಕರು.



ಚೈತನ್ಯ

ಚಿರಂಜೀವಿ ಸರ್ಜಾ ಮುಖ್ಯ ಭೂಮಿಕೆಯಲ್ಲಿ ಚಿತ್ರ ಮೂಡಿಬಂದಿದ್ದು, ಪಾರೂಲ್ ಮತ್ತು ಮೇಘನಾ ರಾಜ್ ನಾಯಕಿಯರು. ಅನಂತ್ ನಾಗ್, ದ್ವಾರಕೀಶ್, ಸಾಧು ಕೋಕಿಲಾ ಸೇರಿದಂತೆ ಬಹುದೊಡ್ಡ ತಾರಾ ಬಳಗವೇ ಸಿನಿಮಾದಲ್ಲಿದೆ.

ಈ ಬಾರಿ ಅನುಭವಿ ತಂತ್ರಜ್ಞರ ಜತೆ ಚೈತನ್ಯ ಕೆಲಸ ಮಾಡಿದ್ದಾರೆ. ಎಂದಿನಂತೆ ಅನೂಪ್ ಸೀಳಿನ್ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಸತ್ಯ ಹೆಗ್ಡೆ ಅವರ ಸಿನಿಮಾಟೋಗ್ರಫಿಯಲ್ಲಿ ಚಿತ್ರ ಮೂಡಿಬಂದಿದೆ.

ಸೆಕೆಂಡ್ ಹ್ಯಾಂಡಲ್ ಲವರ್ ಅಜಯ್



'ಕೃಷ್ಣಲೀಲಾ' ನಂತರ ಅಜಯ್ ತಮ್ಮ ಮುಂದಿನ ಸಿನಿಮಾದಲ್ಲಿ ಬಿಜಿ ಆಗಿದ್ದಾರೆ. ಸದ್ಯ ಅವರು 'ಸೆಕೆಂಡ್ ಹ್ಯಾಂಡ್ ಲವರ್' ಸಿನಿಮಾದ ಡಬ್ಬಿಂಗ್ ಕಾರ್ಯದಲ್ಲಿ ನಿರತರಾಗಿದ್ದಾರೆ. ಈ ಕೆಲಸ ಮುಗಿಯುತ್ತಿದ್ದಂತೆಯೇ ಹೊಸ ಚಿತ್ರದ ಫೋಟೋ ಶೂಟ್‌ನಲ್ಲಿ ಪಾಲ್ಗೊಳ್ಳುವುದಾಗಿ ಹೇಳಿದ್ದಾರೆ. ಈ ಚಿತ್ರಕ್ಕೆ ಅಮೂಲ್ಯ ನಾಯಕಿ. ಇದೇ ಮೊದಲ ಬಾರಿಗೆ ಅವರು ಸಂಗೀತದ ಹಿನ್ನೆಲೆಯ ಚಿತ್ರದಲ್ಲಿ ನಟಿಸಿದ್ದರಿಂದ, ಸೆಕೆಂಡ್ ಹ್ಯಾಂಡ್ ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಈ ಚಿತ್ರದಲ್ಲಿ ಅಜಯ್ ರಾಕ್‌ಸ್ಟಾರ್ ಪಾತ್ರ ನಿರ್ವಹಿಸಿದ್ದಾರೆ. ಈ ಹೊತ್ತಿನ ಯುವಕರಿಗೆ ಹೇಳಿಮಾಡಿಸಿದ ಸಿನಿಮಾ ಇದಾಗಿದೆ.

'ಲಕ್ಕೀ' ಸಿನಿಮಾದ ಮೂಲಕ ಗಮನ ಸೆಳೆದಿರುವ ರಾಘವ ಲೋಕಿ ಈ ಬಾರಿ ಅಜಯ್‌ರನ್ನು ಸೆಕೆಂಡ್ ಲವರ್ ಮಾಡಲು ಹೊರಟಿದ್ದು ವಿಶೇಷ. ಲೋಕಿ ಬ್ಯಾನರ್‌ನಲ್ಲೇ ಸಿನಿಮಾ ತಯಾರಾಗಿದೆ.

ಇದೊಂದು ಮ್ಯೂಸಿಕಲ್ ಜರ್ನಿಯ ಸಿನಿಮಾ. ಹೀಗಾಗಿಯೇ ನಾಯಕ ಅಜಯ್ ಪಾತ್ರಕ್ಕಾಗಿ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದಾರೆ. ಇವರಿಗೆ ಕೊಂಚ ಸಂಗೀತದ ತಿಳಿವಳಿಕೆಯೂ ಇರುವುದರಿಂದ, ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರಂತೆ.

ಪರಪಂಚದಲ್ಲಿ ರಾಗಿಣ

ಪಾತ್ರದ ಮೂಲಕ ಗಮನ ಸೆಳೆಯದೇ ಇದ್ದರೂ, ತನ್ನ ಗ
ನೋಟದಿಂದಲೇ ಬಿಜಿ ಆಗಿರುವ ನಟಿ ರಾಗಿಣಿ, ಸಿನಿಮಾದಲ್ಲಿ ಬಿ
ಪಾತ್ರ ಇದ್ದರೆ ಅದು ರಾಗಿಣಿಯನ್ನೇ ಹುಡುಕಿಕೊಂಡು ಬರುವಂ
ಅವರು ಕೂಡ ಮುಲಾಜಿಲ್ಲದೇ ಅಂತಹ ಪಾತ್ರವನ್ನು ನಿರ್ವಹಿಸು
ಹೀಗಾಗಿಯೇ ಇನ್ನೂ ಅವರು ಕನ್ನಡ ಸಿನಿರಂಗದಲ್ಲಿ ಸಕ್ರಿಯರಾಗಿದ್ದಾ

ಇಂತಹ ರಾಗಿಣಿ ಈಗ 'ಪರಪಂಚ' ಅನ್ನುವ ಸಿನಿಮಾದಲ್ಲಿ ನಟಿಸು
ಇದು ಯೋಗರಾಜ್ ಭಟ್ ಬ್ಯಾನರ್‌ನಲ್ಲಿ ಮೂಡಿಬರುತ್ತಿರುವ ಚಿ
ಚಿತ್ರದಲ್ಲಿ ರಾಗಿಣಿ ಬಾರ್‌ನಲ್ಲಿ ಕೆಲಸ ಮಾಡುವ ಹುಡುಗಿಯ
ಮಾಡುತ್ತಿದ್ದಾರೆ. ಅದಕ್ಕಾಗಿ ಬರೋಬ್ಬರಿ 25 ಲಕ್ಷ ರೂಪಾಯಿ ಸಂ
ಪಡೆದಿದ್ದಾರೆ.

"ಈ ಪಾತ್ರವನ್ನು ಬರೆದುಕೊಂಡಾಗ ಥಟ್ಟನೆ
ನೆನಪಾದವರು ರಾಗಿಣಿ. ಅವರಿಂದಲೇ ಈ
ಮಾಡಲು ಸಾಧ್ಯ ಅನಿಸಿತು. ಹೀಗಾಗಿಯೇ ಅ
ಅಪ್ರೋಚ್ ಮಾಡಿದೆವು. ಅವರೂ ಪಾ
ಒಪ್ಪಿಕೊಂಡರು" ಅನ್ನುವ ಮೂಲಕ ನಿರ್ದೇ
ಮತ್ತೆ ರಾಗಿಣಿಯನ್ನು ಅಂತಹ ಪಾತ್ರಕ್ಕೆ
ಮಾಡಿದ್ದಾರೆ.



ರಾಗಿಣಿ

ಸಹಜ ಚೆಲುವೆ



ಅಕ್ಷಾ ಭಟ್

ರತ್ನಜ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ 'ಪ್ರೀತಿಯಲ್ಲಿ ಸಹಜ' ಚಿತ್ರಕ್ಕೆ ಕಾಶ್ಮೀರಿ ಚೆಲುವೆ ಅಕ್ಷಾ ಭಟ್ ನಾಯಕಿಯಾಗಿ ಆಯ್ಕೆ ಆಗಿದ್ದಾರೆ. ಈ ಸಿನಿಮಾದ ಮೂಲಕ ಇವರು ಸ್ಯಾಂಡಲ್‌ವುಡ್‌ಗೆ ಪರಿಚಯ ಆಗುತ್ತಿದ್ದಾರೆ.

ಅಕ್ಷಾ ಮೂಲತಃ ಕಾಶ್ಮೀರದವರಾದರೂ, ಬೆಂಗಳೂರಿನಲ್ಲೇ ನೆಲೆಸಿದ್ದಾರೆ. ಆಡಿಯೋಗ್ರಫಿ ತರಬೇತಿ ಪಡೆಯುತ್ತಿದ್ದಾರೆ. ಅಲ್ಲದೇ ಮಾಡೆಲಿಂಗ್ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

"ಫೇಸ್‌ಬುಕ್‌ನಲ್ಲಿ ನನ್ನ ಫೋಟೋ ನೋಡಿದ ನಿರ್ದೇಶಕರು, ಭೇಟಿ ಮಾಡುವಂತೆ ಹೇಳಿದರು. ಹೋದಾಗ ಪಾತ್ರದ ಬಗ್ಗೆ ವಿವರಿಸಿದರು. ಕತೆ ಕೇಳಿದಾಗ ತುಂಬಾ ಖುಷಿ ಆಯಿತು. ಅಲ್ಲದೇ ಅವರ ಹಿಂದಿನ ಸಿನಿಮಾಗಳ ಬಗ್ಗೆಯೂ ನಾನು ತಿಳಿದುಕೊಂಡೆ. ಇದು ನನ್ನ ಚೊಚ್ಚಲು ಸಿನಿಮಾವಾದರೂ, ಅವರು ಹೇಳಿದಂತೆ ನಟಿಸಿದ್ದೇನೆ. ಪಾತ್ರಕ್ಕೆ ಜೀವ ತುಂಬಿದ್ದೇನೆ ಎಂಬ ನಂಬಿಕೆ ನನಗಿದೆ" ಅಂದಿದ್ದಾರೆ ಅಕ್ಷಾ.

ಈ ಚಿತ್ರದ ನಂತರ 'ಗೇಮ್' ಅನ್ನುವ ಮತ್ತೊಂದು ಚಿತ್ರದಲ್ಲಿ ಇವರು ನಟಿಸಿದ್ದಾರೆ. ಇಲ್ಲಿ ಇವರದ್ದು ಅರ್ಜುನ್ ಸರ್ಜಾ ಮಗಳ ಪಾತ್ರ. ಎ.ಎಂ.ಆರ್ ರಮೇಶ್ ನಿರ್ದೇಶನದಲ್ಲಿ ಚಿತ್ರ ಮೂಡಿಬಂದಿದೆ.

ನಿರ್ದೇಶಕ ರತ್ನಜ ಚೊಚ್ಚಲು ಸಿನಿಮಾದಲ್ಲೇ ಫಿಲ್ಮ್‌ಫೇರ್ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿ ಪಡೆದವರು. 'ಪ್ರೇಮಿಸಂ', 'ಹೊಂಗನಸು' ರೀತಿಯ ಹೊಸ ಅಲೆಯ ಸಿನಿಮಾಗಳನ್ನು ನೀಡಿದವರು. ಈಗ ಮತ್ತೆ ಚಿತ್ರ ನಿರ್ದೇಶನಕ್ಕೆ ವಾಪಸ್ಸಾಗಿದ್ದಾರೆ. ಈ ಸಿನಿಮಾದಲ್ಲೂ ಎಂದಿನಂತೆ ಹೊಸ ಪ್ರತಿಭೆಗಳನ್ನು ಇಂಡಸ್ಟ್ರಿಗೆ ಪರಿಚಯ ಮಾಡುತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com